67ನವಿನೋದಂ । ಶ್ರೀಮದೆಕ್ಕಲದೇವರಾಜ್ಯಾಭ್ಯುದಯಕರಣಕಾರಣಂ । ತ್ರಿಶಕ್ತಿಚತುರುಪಾಯಪಂಚಾಂಗಮಂತ್ರಪ್ರವೀಣಂ ।
ಸ್ವಾಮಿವಂಚಕರಗಂಡಂ । ನಿಖಿಳಗು

68ಣಗಣಾಕರಂಡಂ । ಪರನಾರೀಸಹೋದರಂ । ಸಾಹಸವಿಕ್ರಮೋದರಂ । ತಾನೆನ್ನಿನೆಗಳ್ದಮಹದೇವದಂಡನಾಥನಮಹಾಸತಿಯುಮ
ಸತ್ವಮಂಪೇಳ್ವಡೆ । ಅತನುಮಾನಹ್ರಿಯಂರತಿಗೇಕ್ಷಿತ್ರಗೆ

69 ಭಾವಿಪಡೊರ್ವ್ವರ್ಗ್ಗೋವಳಂಪತಿಗೀರಾಜಪುತ್ರಿಗೆಮರುಳ್ಗೆಱೆಯಂವರನೆಂನಕಾಂತನಚ್ಯುತನತಿಸೇವ್ಯನೂರ್ಜ್ಜಿತಕಳಾಧರನೆಂದಿ
ೞಿಕೆಯ್ವಾೞೀಮಹಾಸತಿಮಹದೇವಮಂತ್ರಿಯಮನಃ

70 ಪ್ರಿಯೆಲೋಕಲದೇವಿಸಂತತಂ ॥ ಚತುರತೆಗಾದಸ್ಥೈ ಪ್ರಸುಚರಿತ್ರತೆಗಾದಪೊಡಪುರ್ವ್ವಜೈನದುಂಸತಿಕೆಗೆಸಾರ್ದ್ಧಪುಂಣ್ಯವಭಿಮಾ
ನಕೆತಳ್ತು ಮಹತ್ವವೀಜಗಂನುತಮಹದೇವಮಂತ್ರಿ

71 ಯಮನಃಪ್ರಿಯೆಲೋಕಲದೇವಿನಿಂನಸತ್ಪತಿಹಿತತ್ವದಿಂದವಾಯ್ತು ಸಲದೇವ್ವೋಗಳ್ವೆಂನಿಜಸದ್ಗುಣಂಗಳಂ ॥ ಚತುರ್ಗ್ಗತಿಯೊಳ್ಸ
ಮಂತಃಜಿನಶಾಸನದೇವತೆಜೈನಧರ್ಮ್ಮಮಂತಿಕೆ

72 ಯೊಳತ್ತಿಮಬ್ಬೆ ಸತತಂಪತಿಭಕ್ತಿಯೊಳೊಳ್ಪುವೆತ್ತರುಂಧತಿಪಡಿಪಾಟಿಪಾಸಟಿಯೆನಲ್ ಸತಿಲೋಕಲದೇವಿಗಿಂನದಾರ್ಪ್ರತಿಮಹ
ದೇವಮಂತ್ರಿಯಮನಃಪ್ರಿಯೆಗನ್ಯಚಮೂಪಕಾನ್ತೆಯ

73 ರ ॥ ಅಂತುಗೋತ್ರಮಿತ್ರಕಳತ್ರಪರಿಜನಪರಿತೋಷಪ್ರಾಜ್ಯಸಾಮ್ರಾಜ್ಯಾನ್ವಿತನೆನಿಸಿನೆಗಳ್ದ ಮಹದೇವದಂಡನಾಥಂಗೆಗುರುವೆನಿಸಿದಸ
ಕಳಚಂದ್ರಭಟ್ಟಾರಕದೇವರಾಚಾರ್ಯ್ಯಾವಳಿಯಂಪೇಳ್ವಡೆ ॥

74 ಜನಶಾಸನಸ್ತುತಪದ್ಮಣಂದಿಮುನಿಪಂತತ್ಶಿಷ್ಯನಾದಂಜಗಜ್ಜನಚೂಡಾಮಣಿರಾಮಣಂದಿಯತಿಪಂತತ್ಶಿಷ್ಯನುದ್ಯದ್ಯಶಂಮುನಿ
ಚಂದ್ರಂಜಿನಧರ್ಮ್ಮನಿರ್ಮ್ಮಳಸತ್ಸಿದ್ಧಾಂತಚಕ್ರೇಶನಾತನ

75 ಶಿಷ್ಯಂಕುಲಭೂಷಣವ್ರತಿವರಂತ್ರೈವಿದ್ಯವಿದ್ಯಾಧರಂ ॥ ವಿಮಳಪ್ರೋಂನತಕೀರ್ತ್ತಿಕೀರ್ತ್ತಿತಗುಣಾಢ್ಯಂವಿಶ್ವಭಾಸ್ವಜ್ಜಗಂನಮಿತಂ
ತರ್ಕ್ಕದೊಳಪ್ರತರ್ಕ್ಯಮಹಿಮಂಸ್ಸಿದ್ಧಾಂತಸರ್ವ್ವಜ್ಞನುಂತಮ

76 ಶಬ್ದಾತಿಶಯಪ್ರಚಂಡಮತಿಧರ್ಮ್ಮಬ್ಯಕ್ತಮುಕ್ತಾಂಗನಾರಮಣಂಶ್ರೀಕುಳಭೂಷಣವ್ರತಿವರಂತ್ರೈವಿದ್ಯವಿದ್ಯಾಧರಂ ॥ ತನ
ಗಾದಂಪರಿಚಾರಕಾಕೃತಿಯಶಶ್ರೀಚಾ

77 ರುಚಾರಿತ್ರಕಾಮಿನಿರಾಜಹಂಸಪರೀಜಕಾಂತೆಮನೆಗಾದಿಪ್ಪಾಕೆನಿಚ್ಚಂದಪಾಂಗನೆವಾಗ್ವಲ್ಲಭೆಬುದ್ಧಿವಾನಸಕರಂಭಾಸ್ವತ್ತಪೋಲ
ಕ್ಷ್ಮಿಸಜ್ಜನಮಾಗಲುಕುಲಭೂಷಣವ್ರತಿವರಂಸ್ತ್ರೀರಾಜ್ಯದಿಂರಾಜಿಪಂ ॥

78 ತಚ್ಛಿಷ್ಯಂ ॥ ಪುದಿದೆಂಟುಂವರವಂತಿರಸ್ಕರಿಸಿತಳ್ತೀಳುಂಭಯಕ್ಕಾಸೆದೋಱದೆಯಾಱುಮತನಂಗಳಂತೊಱೆದುಸಂದೈದಿಂದ್ರಿಯಂ
ಗಳ್ಗಸೋಲದೆನಾಲ್ಕುಂಗತಿಯಿಂದಪ್ಪೋಸರಿಸಿಮೂಱುಂ

79 ಮುಂಡವಂಬಿಟ್ಟುತಾನೆದಯಾವಲ್ಲಭನಾದನೀಸಕಳಚಂದ್ರಾಚಾರುಭಟ್ಟಾರಕಂ ॥ ಶ್ರೀವನಿತೆಗೆವೋಗವಿತ್ತುತಪೋವನಿತೆಗೆಮೆ
ಯ್ಯನೊಡ್ಡಿಮುಕ್ತ್ಯಂಗನೆಯಂಭಾವಿಸುವಬಮ್ಮಚಾರಿಯೆನೇಪ್ಪೊ

80 ಗಳ್ವುದೆಸಕಳಚಂದ್ರಭಟ್ಟಾರಕರಂ ॥ ಸಕಳಾಗಮಕೋವಿದರಂಸಕಳಜಗದ್ಭರಿತಕೀರ್ತ್ತಿಲಕ್ಷ್ಮೀಶ್ವರರಂಸಕಳಾತ್ಮಕರಂಪೊಗ
ಳ್ದಂಸಕಳಜನಂಸಕಳಚಂದ್ರಭಟ್ಟಾರಕರಂ ॥ ಸ್ವಸ್ತಿಶ್ರೀಸಕವ

81 ರ್ಷ ೧೧೧೯ನೆಯಪಿಂಗಳಸಂವತ್ಸರದಮಾಘಶುದ್ಧ ೧೨ ವಡ್ಡವಾರವುತ್ತರಾಯಣಸಂಕ್ರಾಂತಿವ್ಯತೀಪಾತದಂದುಶ್ರೀಮನ್ಮಹಾಪ್ರ
ಧಾನಂಮಹದೇವದಣ್ಣನಾಯಕಮಾಡಿಸಿದೆಜಗಜಿನಾಲಯ

82 ದಶಾನ್ತಿನಾಥದೇವರಪ್ರತಿಷ್ಠೆಯಂಮಾಡಿದಲ್ಲಿಶ್ರೀಮನ್ಮಹಾಮಂಡಳೇಶ್ವರಯೆಕ್ಕಲರ ರರುಂಸಮಸ್ತಪರಿವಾರಂಗಳುಮಿದ್ದುಬ
ಸದಿಯಖಂಡಸ್ಫುಟಿತಜೀರ್ಣ್ನೋದ್ಧಾರಕ್ಕಂಋಷಿಯರಾಹಾರದಾ

83 ನಕ್ಕಂದೇವರಷ್ಟವಿಧಾರ್ಚ್ಚನಾಭಿಷೇಕಕ್ಕಂಗಭೋಗರಂಗಭೋಗಕ್ಕಂಶ್ರೀಮೂಲಸಂಘದಕಾಣೂರ್ಗ್ಗಣದತಿಂತ್ರಿಣೀಗಛ್ಛದ
ಶ್ರೀಸಕಳಚಂದ್ರಭಟ್ಟಾರಕದೇವರಕಾಲಂಕರ್ಚ್ಚಿ ಧಾರಾಪೂರ್ವ್ವ

84 ಕಂಮಾಡಿಸಿಸರ್ವ್ವನಮಸ್ಯವಾಗಿಕೊಟ್ಟಸ್ಥಳವೃತ್ತಿಹಿಡಗಣಕೆಱೆಯಕೆಳಗೆಭೇರುಂಡನಗಳೆಯಲುಗದ್ದೆಮತ್ತಲುಮಾಱು ೩
ಗಾಣವೆರಡು ೨ ಅಂಗಡಿವೊಂದು ೧ ಮತಂವುದ್ಧರೆಯಪಟ್ಟಣಸಾಮಿಸೋ

85 ಮಿಶೆಟ್ಟಿಯರುಮುಖ್ಯವಾದಸಮಸ್ತನಗರಂಗಳುಂತೇಲಿಗರುಮಿದ್ದುಬಿಟ್ಟದತ್ತಿಸಟ್ಟುಗಾಯಸೊಂಟಿಗೆಯೆಣ್ಣೆಹೆಜ್ಜುಂಕದಮಾ
ಧವನೂಕೊಡವೀಸದಮಾರವೆಗ್ಗಡೆಯುಮಿದ್ದುಸುಂಕಿಗರುಬಿಟ್ಟಧ

86 ರ್ಮ್ಮಹದಿನಯ್ದುಗದ್ದಿನಸುಂಕಆಬಸದಿಯಪರಿಸೂತ್ರದಸೀಮೆಮೂಡಲುಸಿಂಗೇಶ್ವರದಬಾವಿತೆಂಕಲುಕೇತಿಸೆಟ್ಟಿಯಬಸದಿಯದಾನ
ಸಾಲೆಪ್ಪಡುವಲುಗಾಮಗಿಲಸೀಮೆಪಡುವಲುಗವ

87 ನಿಯೆಸೀಮೆಬಸದಿಯಿಂಬಡಗಲಿಪ್ಪತ್ತಮಾರ್ಗೈಸೀಮೆಮತ್ತಮುದ್ಧರೆಯಪ್ರವಿಷ್ಟದಹಳ್ಳಿಬೀಡುಮಂದಸೆಯುಮೂಲಿಗತನಸಹಿತ
ಸರ್ವ್ವನಮಸ್ಯಮಾಗಿಯೆಕ್ಕಲರಸರುಂಪರಿವಾರಮುಮಿದ್ದುಕೊಟ್ಟ

88 ರು । ಆಹಳ್ಳಿಯಸೀಮೆಯೆಂತೆಂದಡೆಮೂಡಲುಹೊಂನೆಯಗಟ್ಟನಬಾಯಿಕೋಲಸೀಮೆ । ತೆಂಕಲುಆಕಟ್ಟನಸರಿಪುಮೊದಲಾಗಿ
ದೊಣೆಮುಹಳ್ಳಮೆಸೀಮೆ । ಪಡುವಲುಸಾಸಿರವಳ್ಳಿಯಪ್ಪೋಣಿ

89ನೊದಲಾಗಿವುದ್ಧರೆಯಹಗ್ಗೆ ಚಿಯಕೋಡಿಯಿಂಸೀಮೆ । ಬಡಗಲುನರಿಕನಕಟ್ಟೆಯಬಾಯಿಕೋಲುಮೇರೆಯಾಗಿಎಡೆಬಿಟ್ಟೆಯು
ಬಯಲನೊಳಗಿಕ್ಕಿಆಸೀವೆಸೀಮೆಯಿಬರೆದುದೂರಿಂ

90ತೆಂಕಣಹೊಲದಚತುರಾಗಾಟವುರಿಂಬಡಗಣಸೂಳೆಯಕೆಱೆವೊಳಗೆಗದ್ದೆ ಮತ್ತರೊಂದು ೧ ಕಂಮಮಱುವತ್ತು ೬೦ ಮತ್ತಂವೂ
ರಿಂಮೂಡಲುಸೂಳೆಯಕೆಱೆಯವೂಡವಿನಬಾಯಿಕೋಲಸೀಮೆಯಾ

91ಗಿಱಿಯಮಂದನೆಯವೂರಂಬಕೆಱೆಯಕೀಳೇರಿಯಬೀಡುಮಂದನೆಯದೇವರಕೆಯಿವೊಳಗಾಗಿಪಡುವಣ ೯ನೆ ‖

141

ಅದೇ ಗುಡಿಯ ಜಮೀನಿನಲ್ಲಿ.

ಪ್ರಮಾಣ 5′ × 2′ 2″.

1ಸ್ವಸ್ತಿಸಮಸ್ತಭುವನಾಸ್ರಯಂಶ್ರೀಪ್ರಿಥ್ವೀವಲ್ಲಭಂಮಹಾರಾಜಾಧಿರಾಜಂಪರಮೇಸ್ವರಂಪರಮಭಟ್ಟಾರಕಂಸತ್ಯಾಸ್ರ
2ಯಕುಳತಿಳಕಂಚಾಳುಕ್ಯಾಭರಣಂಶ್ರೀಮತುಭೂಲೋಕಮಲ್ಲದೇವರವಿಜೆಯರಾಜ್ಯಮುತ್ತರೋತ್ತರಾಭಿವ್ರಿದ್ಧಿ
3ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂಸಲುತ್ತಮಿರೆ ‖ ಸ್ವಸ್ತಿಸಮಧಿಗತಪಂಚಮಹಾಸಬ್ದಮಹಾಮಂಡಳೇ
4ಸ್ವರಂಬನವಾಸೀಪುರವರಾಧೀಸ್ವರಂಕದಂಬಚಕ್ರೇಸ್ವರಂಶ್ರೀಮಜ್ಜಯಂತೀಮಧುಕೇಸ್ವರದೇವಲಬ್ಧವರಪ್ರಸಾದಃಸಾಧಿ
5ತರುಮಪ್ಪಶ್ರೀಮತ್ತೈಲಪದೇವರುಬನವಾಸಿಪನ್ನಿಚ್ಛಾಸಿರವುಮಂಸಾಂತಳಿಗೆಸಾಯಿರವುಮುಮಂಸುಖಸಂಕಥಾ
6ವಿನೋದದಿಂರಾಜ್ಯಂಗೆಯುತ್ತಮಿರ ‖ ತತ್ಪಾದಪದ್ಮೋಪಜೀವಿ ‖ ಸ್ವಸ್ತಿಶ್ರೀಮನುಮಹಾಪ್ರಧಾನಂಮನೆವೆ
7ಗ್ಗಡೆದಂಡನಾಯಕಂಮಸಣ್ಯಯಂಶ್ರೀಮಚ್ಚಾಳುಕ್ಯವಿಕ್ರಮವರ್ಷದ ೩೦ ನೆಯಪರಾಭವಸಂವತ್ಸರದ
8ಪಾಲ್ಗುಣಸುದ್ಧಚತುರ್ದಸೀಸೋಮವಾರದಂದುತನ್ನಸಮಸ್ತಸಾಧನಮುಂವೆರಸಿಯ್ದುನಕಾಳಗೊ[ಡ]ನಾ
9ಯಕನ್ಮಂಈಸಾಪುರಕ್ಕೆಬೆನಸಿವೆಮ್ಮಾಡಿಸಾನ್ತರಂಕೋಟೆಯಂಪರಿಮುತ್ತಮುತ್ತಿಕೈವೀಸುವಾಗಳೆಸಾಸಿರ್ವ್ವಗ್ಗಳಿವಾಗೆ
ಯುಂ
10ಪಂದಿರುಪೆಱಚ್ಚಾವಾಗಳಂಕಂಡುದಂಕಳಿಪಲಾಗದೆಂದುಕಾಳಿಗನಾಯಕನಗಂಧವಾರಣಂಬಿಂವಮ್ಮಾಸಾಂನ್ತಪರಿಯೆ ‖ ಎತ್ತಿದ
ಸಾನ್ತರ
11ಭೂಪನವೊತ್ತದನಾಯಕರುಮುತ್ತಲಿಸಾಪುರವುಂಸುತ್ತಿಕೈವೀಸಿಕಾದಲೆಚಿತ್ರವಿದಂಪರಿದುಬವ್ಮ್ಮಸಾನ್ತರನಿಱಿದ ‖
12ಕಡುಮುಳಿದುಬವ್ಮ್ಮಸಾಂತಂಕಡಿತಲೆಪಲಗೆಯುಮಂಕೊಂಡುಸಾನ್ತರನಾಳಂಕಡಿಬಂಡಮಾಡಿಪೊಯ್ದುಡೆಕೆಡೆದು
13ದುಧಾರಿಣಿಯುಮೇಲವೈರಿಸಮೂಹಂ ‖ ರಣರಂಗಸೂದ್ರಕಂಬಲ್ಲಣಿಸುಭಟಪಂಸೇಣಸುವರಿಬಲಂಗಳಸಿರಮಂ
14ಖಣಿಲೆನೆಪೊಯ್ದಾಱ್ದಿಗಳಪೆಣಮುಮಯಮಾಯ್ತುನಿತುನೂಂಕಿದರಿಬಲಮನಿತು ‖ ಅನ್ತಾಸಾಂತರಭೂಪನುಮುಂ
15ನ್ತಣನಾಯಕರಿದಿಚ್ಚಿದಾಹವದೆಡೆಯೊಳಮುನ್ತಾಗಿಬವ್ಮ್ಮಸಾನ್ತಂಶಾಂತಳಿರಿಱಿದವೆರಲೋ
16ಕಪ್ರಾಪ್ತನಾದ ‖ ಅಮುಮುಳಕಣೆಯಕೊನ್ತಂಮಸದಸರಲುಮೆಯ್ಯನುಚ್ಚಿಬವ್ಮ್ಮಗಸಾಂತಂಬಸ
17ವಳಿದುಬೀಳೆಧುರದೊಳೆಸದುಮುರಣರಂಗದೊಳಗದೇವದುಂದುಭಿನಭದೊಳ ‖
18* ....ಯಬೆ ಸಾನ್ತಲಿಕಲ್ಲನಿಲಿಸಿದಳಕಾಳೋಜನಬೆಸನ್

142

ಅದೇ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಬಿದ್ದಿರುವ ಕಲ್ಲಿನಲ್ಲಿ.

ಪ್ರಮಾಣ 3′ × 7′.

(ಮೇಲ್ಭಾಗಕಾಣುವದಿಲ್ಲ)
1. ಗತಿನಯನೇಕಸಂಖೆಯ
2ಶಕಾಬ್ದದದುಂದುಭಿನಾಮವತ್ಸ
3ರವರಜೇಷ್ಟಮಾಸದಸಿತೇತರ
4ಪಕ್ಷದೊಳ್ದ್ವಿತೀಯಸನ್ನುತ
5ಮಾರ್ಕ್ಕವಾರಮನುವ
6.ತಾಂಬರಾವತಿಲೋಕವಿಶ್ರುತೆಯ್ಯ
7ದಿದಳ್ಸಮಾಧಿವಿಧಿಯಿನ್ದಮೆ
8ನಿಂದ್ರನಿವಾಸಸಾಖ್ಯಮಂ ‖

* (ಪ.೧೮ನ್ನಾಗಲ್ಲಿ ಬರೆದಿದೆ)

9 ನನ್ದಿದೇವಪದಯುಗಸರಸೀ
10 ರುಹದ . . . ಪಂಚಪದವಿ
11 ವಿನುತಾನ್ತಃಕರಣಿವಹದೇ
12 ವವಿಭುವಧುವರಸೂರಸ್ತ್ರಗ
13 ತಿಸುಗತಿಯುನೆಡೆಪಡೆದ
14 ಳು ॥ ಸುರರೊಲ್ದು ಪುಬ್ಬುವಿ .
15 ಷ್ಟಿಯುನಿರದಾಗಳೆಸುರಿ
16 ಯೆದೇವದುಂದುಭಿರವವುಂ
17 ಬರದೊಳೆಸೆಯಲ್ಕೆ ಬಸವಲಿ
18 ಸುರಲೋಕವಯ್ದಿದಳುಮ
19 ಹೋತ್ಸವದಿನ್ದಂ ॥ ನಮೋ
20 ವೀತರಾಗ ॥

143

ಅದೇ ಗ್ರಾಮದ ಕೆರೆಯ ಉತ್ತರ ಕೋಡಿಯ ಬಳಿ ಬಿದ್ದಿರುವ ವೀರಕಲ್ಲಿನಲ್ಲಿ.

1 ಸ್ವಸ್ತಿಶ್ರೀಮತುವಿಕ್ರಮವರ್ಷದ ೬ನೆಯಪರಿಧಾವಿಸಂ
2 ವತ್ಸರದಪಾಲ್ಗು[ಣ]ಶು . ಸೋ ದಂದುಶ್ರೀಮನ್ಮಹಾಮಂಡಳೇ
3 ಸ್ವರಂಕಾವದೇವರಸರು . ಹಾಯಿದತುಱುವಂಕೊಂಡು
4 ಹೋಹಲ್ಲಿಶ್ರೀಮನ್ಮಹಾಮಂಡಳೇಸ್ವರಂಬಿಕ್ಕಲರಸದೇವರಂಬೆಸ
5 ದಿಂರಾಮಸೆಟ್ಟಿಯಮಗಂಭೂ . ಮಲ್ಲಿಯತುಳುವಮೈಲ
6 ನಹೋಗಿ . ಕೆಯಿಂಪಲರಂಕೊಂದುತುಱುವಂಮಗುಳ್ಚಿಸು
7 ರಲೋಕಪ್ರಾಪ್ತನಾದ ॥

144

ಅದೇ ಗ್ರಾಮದ ದೊಡ್ಡ ಕೆರೆಯ ಬಾಗಲಲ್ಲಿ ನಟ್ಟ ಸಮಾಧಿ ಕಲ್ಲಿನಲ್ಲಿ.

ಪ್ರಮಾಣ 3′ × 1″.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂ
2 ಛನಂ । ಜೀಯಾತೆ ತ್ರೈಲೋಕ್ಯನಾಥಸ್ಯಶಾಸನಂ
3 ಜಿನಶಾಸನಂ ॥ ಮಲ್ಲಿಗಉಡರತನುಜೆಮೆಚಾ
4 ಯಿಗ . . ನಿಸ್ತಿ ॥ ರಾಮೋಜನಮಗ . . . . .

145

ಅದೇ ಕೆರೆಯ ಬಾಗಿಲನಲ್ಲಿ ನೆಟ್ಟ ೨ನೇ ಕಲ್ಲಿನಲ್ಲಿ.

ಪ್ರಮಾಣ 3′ × 1′ 6″.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘ
2 ಲಾಂಛನಂಜೀಯಾತ್ತ್ರೈಲೋಕ್ಯನಾಥಸ್ಯಶಾಸ
3 ನಂಜಿನಶಾಸನಂ ॥
4 ಶಕಕಾಲೇವೇದಬಾಣತ್ರಿತಯಹಿಮಕರೇಪೂ
5 ರ್ತ್ತಿತೇವರ್ತ್ತಮಾನೇಪರೀಧಾವೀತಿಸಿದ್ಧೇರು
6 ಚಿರತರಶುಭೇಪುಷ್ಯಮಾಸೇಚಶುಕ್ಲೇತಾರ್ತ್ತಿ
7 ಯಾಂಭಾಗ್ಗವಾರೇಶಿವದಜಿನಪದಧ್ಯಾ
8 ನಸಂಸಕ್ತಚಿತ್ತಾನ್ನಾಕಂಪ್ರಾಪತ್ಸಮಾಧಿಗುಣಿಗ
9 ಣಗಣಿನೀಚೈಕಗೌಡಿಪ್ರಸಿದ್ಧಾ ॥ ೧ ॥ ತಸ್ಯಾಸ್ಸೂರ್ಜ್ಜ .
10 . ನಾಂನಿಧಿರಮಲತರಜ್ಞಾನಸದ್ದರ್ಶನಾದೇ . ತಾಂ . ಶ
11 ಪ್ರಸಾದಪ್ರಕಟಿತವಿಭವೋನಿತ್ಯಭೋಗೇನಯುಕ್ತಃರಾಂಭೋರಾಶಿ
12 ಶುಂಭತ್ಕಲಶವಸುಶತಪ್ರಾಪ್ತಪುಂಣ್ಯೋದಯಾಯಾಸ್ಸದ್ಧರ್ಮ್ಮಾ
13 ರಾಧನಾಯಾಂಪ್ರಣಿಹಿತಸುಮನಾಸ್ಯಾಕಲ್ಪದ್ರುಮಾಖ್ಯಃ॥೨॥
14 ದ್ದಿರಾಖ್ಯಮಹಾಗ್ರಾಮಶಾಂತಿನಾಥ . ಸೇರಿಹ । ಅಗಂಣ್ಯಗುಣಸಂ
15 ಪಂನೋಜೀಯಾನ್ನೊರಸಪಪ್ರಭುಃ । ಭದ್ರಂಭೂಯಾತ್
16 ಶ್ರೀ ಶ್ರೀಶಾಂತಿನಾಥಾಯನಮಃ ॥

146

ಅದೇ ಕೆರೆಯ ತೂಬಿನ ಬಳಿ ಇರುವ ಕಲ್ಲಿನಲ್ಲಿ.

ಪ್ರಮಾಣ 6′ × 2′ 3″.

1 ಶ್ರೀಶಾನ್ತಿನಾಥಾಯನಮಃ ॥ ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂ
2 ಛನಂ ಜೀಯಾತ್ತ್ರೈಲೋಕ್ಯನಾಥಸ್ಯಶಾಸನಂಜಿನಶಾಸನಂ ॥ ವರವೃಷಭತೀರ್ತ್ಥ
3 ಕರಗಣಧರರೆನಿಸಿದವೃಷಭಸೇನಮುನಿಪುಂಗವರುದ್ಧುರವಂಶಸಂಭವಾಚಾ

4 ಯ್ಯರಪೆಂಪಂಪೊಗಳಲಱಿದಪನೆಫಣಿರಮಣಂ ॥ ಅನಿಯಮಾಗ್ರಣಿಗಳು
5 ಜಿನಸೇನಶ್ರೀವೀರಸೇನರೆನಿಪಾಚಾರ್ಯ್ಯರ್ಭೂನುತಚರಿತ್ರರವರಂಜಾನಿಸುವವಿನೇಯಜನದಪೆರ್ಮ್ಮೆ
6 ಯದಾವರ್ಮ್ಮಂ ॥ ಅವರ್ದತದನ್ವಯದಿಂಬಂದಮುನೀಶರುಲಕ್ಷ್ಮಿಸೇನಭಟ್ಟಾರಕರುತ್ತಮಚರಿತರವರಶಿ ।
7 ಷ್ಯರುವಿಮಳಗುಣರುಚಂದ್ರಸೇನಸೂರಿಗಳನಘರ್ ॥ ಆಮುನಿರಾಜರಶಿಷ್ಯೋದ್ದಾಮರುಮು ।
8 ನಿಭದ್ರದೇವರವರಚರಿತ್ರಂಭೂಮಹಿತಮೆಂದೊಡದನಿಂನೇಮಾತೋಬಣ್ಣಿಸಲ್ಕೆಬಲ್ಲವನಾವಂ॥ ವೃ॥ಕ್ಷೇಮ
9 ಮಮರ್ವ್ವನಂವಿಮಳಕೀರ್ತ್ತಿದಿಗಂತಮನೆಯ್ದುಡರ್ಪ್ಪನಂ । ಕಾಮನಚಾಪಚಾಪಳತಿಸಾರ್ವ್ವನಮೊಪ್ಪಿದರಂ ।
10 ಪೊಗಳ್ದಪೆಂಶ್ರೀಮುನಿಭದ್ರದೇವರನಿಳಾವಿನುತೋರುಶುಭಸ್ವಭಾವರಂಪ್ರೇಮದೊಳರ್ತ್ಥಿಗರ್ತ್ಥಮುಮ
11 ನೀವರನುಗ್ರತಪಃಪ್ರಭಾವರಂ ॥ ಮುನಿಸಮ್ಮನ್ಮಥಯುದ್ಧದೊಳು । ನಿರುತಮಂತತ್ವಾರ್ತ್ಥದೊಳು
12 ಭಕ್ತಿಯಂಜಿನಪಾದಾಂಬುಜದೊಳು । ದ್ರವಾಧಿಕತೆಯುಂಸಚ್ಚಿತ್ತದೊಳು । ದೆಸೆಯುಂವಿನು
13 ತಾಚಾರಚಯಂಗಳೊಳು । ವಚನಮುಂವಕ್ತೃತ್ವದೊಳು । ರುಕ್ಮರಂಜನೆಯುಂದೇಹದಕಾಂತಿಯೊ
14 ಳುನಿಱಿಸಿದರುವಾಕ್ಯಾದಿವರ್ಣ್ಣಾಸ್ಪಯರ್ ॥ ಕಂ ॥ ಹಿಸುಗಲ್ಲಬಸದಿಯಂಮಾಡಿಸಿಮುಳು ।
15 ಗುಂದದಜಿನೇಂದ್ರಮಂದಿರಕೆಸುಧಾ । ಪ್ರಸರಮನೆಸಗಿಸಿಜಸ । ಮಂಪಸರಿಸಿಮುನಿಭದ್ರದೇವರೊಳೇಂ
16 ತಳೆದರ್ ॥ ನ್ಯಾಯೋಪಾಯದಹರಿಹರರಾಯಂವರವಿಜಯನಗರಿಯೊಳುನೆಲಸಿಪ್ಪಂದಾ
17 ಯತಿಕೆಯುಸೇನಗಣಚ್ಯಾಯರುಮುನಿಭದ್ರದೇವರಱನೆಱಕದವರ್ ॥ ಇಂತೆನಿಪತಪಶ್ಚರ
18 ಣಾನಂತರಮಾಪ್ತಾಗಮಪ್ರಭಾವಮನೆಸಗುತ್ತಂತೂಳ್ದಿದುರಿತಮಂನಿಶ್ಚಿಂತರುಮುನಿಭದ್ರದೇವ
19 ರಿರ್ಪ್ಪಂನೆವರಂ ॥ ಕಾಲಾವಸಾನಸಂಸ್ಥಿತಿಗಾಲಂಬಮೆನಿಪ್ಪನಿರ್ಣ್ನಯಂದೂರಕಲೊಡಂಶೀಲಾಚಾ
20 ರಸಮಾಜವಿಶಾಲರ್ಮುನಿಭದ್ರದೇವರಱಿತಂಜನಿಸಲ್ ॥ ನೀರೊಳಗಣತಾವರೆಯೆಲೆನೀರಂ
21 ಪೊಱದಂತೆಬಾಹ್ಯವಸ್ತುವನೆಲ್ಲಂದೂರಂಮಾಡಿಬಳಿಕ್ಕಂವೀರರುಮುನಿಭದ್ರದೇವರಗ
22 ಣಿತಮಹಿಮರ್ ॥ ವೃ ॥ ಕ್ಷಮೆನಿಶ್ಶಲ್ಯಮೆನುತ್ತಸಂನ್ಯಸನದಿಂದಾತ್ಮಪ್ರಬೋಧೋದಯಂ
23 ಸಮಸಂದೊಂದಿರೆದಿಬ್ಯಪಂಚಪದಚಿಂತಾಪಂಕ್ತಿಮುಂತೆಯ್ದುವುತ್ತಮತಾಣಕ್ಕದುಸಂ
24 ಚಿತಾರ್ತ್ಥಮೆನೆಧರ್ಮ್ಮಧ್ಯಾನಮಾನೋದ್ಯಮಕ್ರಮದಿಂದಂಮುನಿಭದ್ರದೇವರೊಡಲಿಂಬೇರ್ಮ್ಮಾಡಿದರ್ಜ್ಜೀವಮಂ ।
25 ಲಸಿತಶಕಾಂಕಮುದ್ಘನಭಚಂದ್ರಪುರೇಂದುವಿನಿಂದಸೋಭಿಸಲ್ವೆಸರ್ವಡೆದೊಪ್ಪಿತೋರ್ಪ್ಪವಿಲಸ
26 ದ್ವಿಭವಾಬ್ದದಚೈತ್ರಶುದ್ಧತೇರಸೆಶನಿವಾರದೊಳುಸಕಳಸನ್ಯಸನಬ್ಯಸನಂಸ । ಮಾಧಿಸಂದಿಸೆ
27 ಮುನಿಭದ್ರದೇವರುಚಿಸದ್ಗತಿಸಾಖ್ಯಮನೆಯ್ದಿದರ್ನ್ನಿಜಂ ॥ ಕ ॥ ಲಸಿತಮುನಿಭದ್ರದೇವರನಿಷಿ
28 ಧಿಯುಮನವರಶಿಷ್ಯರೆನೆಸೊಗಯಿಪಮಾರಿಸಸೇನದೇವರುಚಿಮಾಡಿಸಿಕೀರ್ತ್ತಿಯನಾಂತ
29 ರಿಂತುಕಂತುವಿದೂರರ್ ॥ ಭದ್ರಮಸ್ತುಜಿನಶಾಸನಂ ॥ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ॥

147

ಅದೇ ಸ್ಥಳದಲ್ಲಿ ೨ನೇ ಕಲ್ಲಿನಲ್ಲಿ.

ಪ್ರಮಾಣ 3′ 8″ × 2′ 3″.

1 ಸ್ವಸ್ತಿಶ್ರೀಮತುವಿಕ್ರಮವರುಷದ ೫ನೆಯವಿರೋಧಿಕೃತ್ಸಂವತ್ಸರದಫಾಲು
2 ಗುಣಸು ೧೧ ಸೋಶ್ರೀಮನ್ಮಹಾಮಂಡ್ಳೇಸ್ವರಂಮುಕ್ಕಲರಸದೇವರುಉದ್ಧ
3 ರೆಯನೆಲೆವೀಡಿನೊಳುಸುಖಸಂ[ಕ]ಥಾವಿನೋದದಿಂರಾಜ್ಯಂಗೆಯ್ಯುತ್ತ
4 ಮಿದ್ದರ್ಸಾಂತಱಗೆಸಾಯಿರಕ್ಕೆಧಾಳಿಯಾಗಿಕರಿದಲ್ಲಿಹಟ್ಟೆಗಾಱ
5 ಬೀಚಹಲರನಿಱಿದುಮೆಚ್ಚಿದುಸುರಲೋಕಪ್ರಾಪ್ತನಾದಂ ॥

148

ಅದೇ ಸ್ಥಳದಲ್ಲಿ ೩ನೇ ಕಲ್ಲಿನಲ್ಲಿ.

ಪ್ರಮಾಣ 2′ 8″ × 1′ 4″.

1 ಸ್ವಸ್ತಿ ಶ್ರೀಮತುಹೊಸಣವೀರಬಲ್ಲಾಳದೇ[ವ]ವರುಷ
2 ದ ೧೫ ಯುರಕ್ತಾಕ್ಷಿಸಂವತ್ಸರದಆಶ್ವೀ
3 ಜಸುಧ೮ ೪ ದಿವೊದರೆದಣ್ಣಾಯಕಎಕಲಿ
4 ಯಣ್ಣಸಮಾಧಿವಿಧಿಯಿಂಮುಡಿಪಿಸ್ವ
5 ಗ್ಗಸ್ಥನಾದ ||

149

ಅದೇ ಸ್ಥಳದಲ್ಲಿ ೪ನೇ ಕಲ್ಲಿನಲ್ಲಿ.

ಪ್ರಮಾಣ 3′ × 2′.

1 ಸ್ವಸ್ತಿ ಶ್ರೀಮದ್ವಿಕ್ರಮವರ್ಷದ ಕೀಲಕಸಂವತ್ಸರದಮಾಘಶುದ್ಧ ೧೩ ಸೋಶ್ರೀಮ
2 ನ್ಮಹಾಮಂಡಳೇಶ್ವರಂಎಕ್ಕಲರಸದೇವರುದ್ಧರೆಯೊಳ್ಸುಖಸಂಕಥಾವಿನೋದದಿಂರಾ
3 ಜ್ಯಂಗೆಯುತ್ತಿರೆ || ಪರಮಜಿನೇಶ್ವರಂತನಗಧೀಶ್ವರನುದ್ಧ್ರಲಸಚ್ಚರಿತ್ರಕಗುರುಹ
4 ರಿಣಂದೇವಮುನಿಪೋತ್ತಮನಗ್ಗದದಣ್ಣನಾಯಕಂವರಗುಣಿಬೊಪ್ಪಣಂಜನಕ
5 ನುನ್ನತಶೀಲದನಾಗಿಯಕ್ಕಮಾತರೆಯೆನಲೆಂಕೃತಾರ್ಥನೋಧರಿತ್ರಿಗೆಸಿಂಗಣದಣ್ಣ
6 ನಾಯಕಂ || ಗುಣದಕಣಿಜೈನಚೂಡಾಮಣಿವೈರಿಬಲಕ್ಕೆ ಸಮರಮುಖದೊ
7 ಳ್ಸುಭಟಾಗ್ರಣಿಜಿನಪದಂಗಳಂಸಿಂಗಣದಂಡಾಧಿಪತಿನೆನೆದುಸದ್ಗತಿವೆತ್ತಂ ||

150

ಅದೇ ಸ್ಥಳದಲ್ಲಿ ಮಾಸ್ತಿ ಕಲ್ಲಿನಲ್ಲಿ.

1 ಉರವನಾಕಿತಿ

151

ಅದೇ ಗ್ರಾಮದ ಕೆರೆಯ ಏರಿಯ ಕೆಳಗಡೆ ಬಿದ್ದಿರುವ ಕಲ್ಲಿನಲ್ಲಿ.

1 . . . . ತ್ಪರಮಗಂಭೀರಸ್ಯಾದ್ವಾದಾಮೋಘಲಾಂಛ
2 . . . . ಯಾತ್ರಯಿಲೋಕ್ಯನಾಥಸ್ಯಶಾಸನಂಜಿನ . . . .
3 . . . . ೧ . ೨ . . ನೆಯವಿಜಯಸಂವತ್ಸರಮಾಘ . . . .
4 . . . . ರಾಜಾಧಿರಾಜರಾಜ . . . . . .
5 . . . . ರಾಯಮಹಾರಾಯರು . . . . .
6 . . . . ಮಪ್ಪ ಕಾಲದಲ್ಲಿಶ್ರೀಮ . .
7 . . . . ದಳಾಚಾರ್ಯ್ಯ . . . .
(ಮುಂದೆ ಕಾಣುವದಿಲ್ಲ)

152

ಅದೇ ಗ್ರಾಮದ ಮಧ್ಯದ ರಸ್ತೆಯಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 7′ × 3′.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂಜೀಯಾತ್ರೈಲೋಕ್ಯನಾಥಸ್ಯಶಾಸನಂಜಿನಶಾಸನಂ || ಯ್ಯೆದಿದನುಸ್ವಾಮಿಕಾರ್ಯ್ಯವಯ್ಯ
2 ಬಿಂದಿರುತಿರಲುಕಂಡ . ಮಾಬ್ಬ ಲ . . . ಯ್ಯೆದೇಕದಿ . . . ಡಮಾಡಿದಯ್ಯೆದಿದಜಿನಪಾದಪದ್ಮವುಂ . ಬಪ್ಪಂ || ಅದೆಂತೆನೆ || ವಾಬಿಧಿಪರಿವೃತ . . .

3 ರಣೀರಂಗದವಮಧ್ಯದವುರಗಿರಿಯಿಂತೆಂಕಲುರಾರಾಜಿಪಭರತಧರಾನಾರೀಭೂಶಣವೆನಿಪ್ಪ ಕುಂತಳದೇಶಂ ॥ ತಾಂನೆಱೆವೆಱೆವು ದುಬಿನವಸೆಪನ್ನಿ ಚ್ಛಾ
4 ಸಿರಸವೇತವಾದಱೊಳ್ಸವುಂತಂನಿಜದಿಂಪದಿನೆಂಟು ಲಿಪುಂನತಕಂಪಣಕೆರಾಜಧಾನಿಎನಿಕ್ಕುಂ ॥ ಮತ್ತಾ ಕಂಪಣನಿಕಯವ ನಿತ್ತಱೊಳಂನೆಗಳ್ದ ಹಿರಿಯಬಿ
5 ದಿರೆಯನಾಡುತ್ತಮವುದಱೊಳ್ಸುಖಸಂಪತ್ತಿ ಸ್ಥಾನಾಭಿವೃದ್ಧಿ ಸೀಪರವೆಱೆಗುಂ ॥ ವೃ ॥ ಅದುನಾನಾದೇವಹರ್ಮ್ಯಪ್ರಯು ತನತುಳವಾಟೀತಟಾಕಾಂಚ್ಛಿತಂಸಂ
6 ಪದವೆಂತಾಳ್ದಿರ್ಪ್ಪವಿಪ್ರಾದ್ಯಖಿಳಜನಸವೇತಂಲಸತ್ಪುಷ್ಪವಾಟೀವಿದಿತೋದ್ಯಾನವೂದಯುಕ್ತಂಪ್ರಕಟಕಳವಜಾಳಪ್ರಸೂ ತಾವನೀಪಾ . . . .
7 . . ತೋಳ್ಪುರ್ದುಸಕಳವುನಿಪ್ರೇಮಧರ್ಮ್ಮಾಭಿರಾಮಂ ॥ ಎನೆವೆಱೆಉದ್ಧರೆತಂ . . . ನತಸ್ಥಳವಾಗಿರಲ್ಕೆ ತಾಂಸೋದಯದಿಂ ಮನುಜಮನೋಜಂಬೈಚಪನನುಪವು
8 ಕೀರ್ತ್ತಿಪ್ರಭಾವದಿಂದೊಗೆಪ್ಪಂ ॥ ಕ್ಷಿತಿನುತಶಾಂತಿಜಿನಕ್ರಮಕತಪತ್ರಮಧು ಬ್ರತಸಾರಂಜನವಿತ್ರಂಚತುರಂಬೈಚಯನಾಯ ಕನತನೂಜಂರಾಜಿಸಿಪ್ಪನೀಬೈಚಪ್ಪಂ ಭೂದೇ
9 ವಾಸೀರ್ವಾದಾಹ್ಲಾದಂನಿಜಸಿರಕರಂಡ . . . . ಕಿಪೆಂಪೊಂದಂವರ್ತ್ತಿಸನೆವೆಱೆವವೇದಿನಿವಿಗಾಸೆಯರಗಂಡನೀಬೈಚಪ್ಪಂ ॥ ತದನಂ ತರಂ ॥ ವಿಲಸಿತವಿಜಯಾನಗರಿಯ
10 ನೆಲೆವೀಡಿನೊಳ್ವೀರಬುಕ್ಕರಾಜತನೂಜಂಬಲಿನಿಭಹರಿಹರರಾಯಂಸಲೆರಾಜ್ಯಂಗೆಯ್ಯುತಿರ್ದ್ದನತಿಮುದದಿಂದಂ ॥ ತತ್ಪಾದಪ ದ್ಮೋಪಜೀವಿ ॥ ವೃ ॥ ಮಾಧವರಾ
11 ಯನಪ್ರತಿಮ . ತಿಯನಾಡವುದಗ್ರಸಾಹಸಾಂಭೋಧಿಗಳಿಂದೆ . . . ರಣದದಂಡಿಗೆಸೂ . ದವೊಯ್ದು ಕಾಲದೊಳ್ಭೋಧಜರೂ ಪಿನಿಂದೆನಿಜಗೊಂ . ರಣಂ . .
12 . . . . ಬುದ್ಧಿವಿದ್ಯಾಧರರಾಕ್ಷಣಂತೋಳಗಿತಾಳ್ದ . . . . . . ವರವಕ್ತ್ರಾಭರಣಂ . . . . ಛತ್ರಮಂ .
13 . . . ಬಾತ್ರಮ . . . . ರೂಗ್ಗಳಂಚಾಮರೋತ್ಕರಮಂಕಪ್ಪುರದಂಬುಲಪ್ರಕರಮಂ . ಕೊಂಡಾಗಳಾಗೀತ
14 ಭಾಸುರದೀಕೊಂಕಣದೇಶಜರುಖಳರೆನುತ್ತಾ ಗೆತ್ತಡಂಮಾಡದೇ ॥ ಜಲ್ಲಾಂ . ಯೊಳುಧಾತ್ರೀವಲ್ಲಭ ಮಾಧವನಿರುತ್ತಮಲ್ಲಿಂತರ . . . ರಲ್ಲಲ್ಲಿಂ
15 ನಿರುತಂಬರಲೆಲ್ಲರಪರೆಯಲ್ಕೆ ಕಂಡು ಕಲಿಬೈಚಪ್ಪಂ ॥ ವೃ ॥ ಹಯವುಂದೇಱಿಗೆಇಂನೆಲಕ್ಕೆ ಳಿಪುತಂಪಾಯ್ದೇಱಿನೋಡುತ್ತೆ ಭಲ್ಮೆ ಯನುಕ್ಕೆಯ್ದಿ
16 . . . . ತಾಱುಂತಟ್ಟುಗುತ್ತುತ್ತೆ ಬಲ್ಮೆಯೊಳಡ್ಡಂಬರುತಿರ್ಪ ಕೊಂಕಣಿಗರಂಕೀನಾಕಲೋಕಕ್ಕೆ ನಿಶ್ಚಯದಿಂದೆಯ್ದಿಸು ತುಂಪರಾ
17 ಕ್ರಮಯುತಂಬೈಚಪ್ಪನಿಂತಿರ್ಪ್ಪಿನಂ ॥ ಕೆಲಬಕ್ಕೊಂಕಣಿಗರ್ಮ್ಮಾರ್ಮಲೆವದಟಿಂಬಂದುಗಟ್ಟಿಸೆಟ್ಟನೆಪರಿತಂದಲಗಡ್ಡಣ ಮಂಚಾಳಿಸಿನೆಲನದಿರಲು . .
18 ಮೆಯ್ದು ॥ ತಲೆಯಿಂದಂ . . ಸಿಡಿ . . . . . . ತೊಳ್ದಾಡಿಬಳ್ಗಂಕುಕಕ್ಕೊಕ್ಕಿಡಿಸೂಸಿತ್ತಂಬಿನಂ . . ರದಟನಿಂಪಾಯ್ದು
19 . . . ಖಂದಡೆಕಟ್ಟೇಬೈಚಪಂಮಾಧವನರಪತಿ . . . . ಕಿಡಿಖಂಡಂಮಾಡಿದಂಮಾಬ್ಬಲವುನದಟನಿಂಭೀಮಸೇ
20 ನೋಪಮಾನಂ ॥ ಆರಣರಂಗದೊಳ್ಬಿಡದೆಕೂಗಿನೆಗಳ್ದವೀರ . . . ಬಿಟ್ಟುನೆಟ್ಟನೆಸಮಾಧಿವಿಧಾನವೊಂದೆಚಿತ್ತದೊಳುಮಾರ ವಿರೋಧಿ
21 . . . . . . ನೂಜ್ಜಿತನಾಕಲೋಕವುಂಸಾರಿದನುತ್ತಮಪ್ರಭುಮಹಾಂಬರಚಂದ್ರಮರೀಚಿಬೈಚಪಂ ॥ ನಿರುತಂಶ್ರೀಶಕಸಂ ಖಸಾಸಿರದಮೂ
22 ನೂಱ . . ರೌದ್ರಿವತ್ಸರವೈಶಾಖಸಿತತ್ರಯೋದಶಿಲಸದ್ಭೌವಾಹ್ವಯಂವಾರವಿಂಬರೆಬೈಚಪ್ಪನುದಾರಚಾರುಜಿನಪಾದಾಂಭೋ
23 ಜಸಕ್ತಂಮನೋಹರರೂಪಂವರಧಾತ್ರಿಯೊಳ್ಮಡಿದುನಾಕಕ್ಷೇತ್ರಮಂಪೊರ್ದ್ದಿದಂ ॥

153

ಅದೇ ಗ್ರಾಮದ ಮಧ್ಯದ ರಸ್ತೆಯ ಬಳಿ ಇರುವ ೨ನೇ ಕಲ್ಲಿನಲ್ಲಿ.

ಪ್ರಮಾಣ 3′ 6″ × 1′ 10″.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂಜೀಯಾತ್ತ್ರೈಲೋಕ್ಯನಾಥಸ್ಯ ॥
2 ಶಾಸನಂಜಿನಶಾಸನಂ ॥ ಸ್ವಸ್ತಿಸಮಸ್ತಭೂವಳಯಮಧ್ಯದೊಳಿರ್ಪ್ಪುದುಮೇ

3 ರುಪರ್ವ್ವತಂಪ್ರಸ್ಥದಿದಕ್ಷಿಣಾಶ್ರಯದೊಳಿರ್ಪ್ಪುದು ಕುಂತಳದೇಶದೇಶದೊಳು

4 ಸ್ವಸ್ಥಿರವಾದಬನವಸೆಗವಾಶ್ರಯುಮುಂಪದಿನೆಂಟುಕಂಪಣಂವಿಸ್ತರದಿಂ

5 ದಜೆಡ್ಡಳಿಗೆಗೊಪ್ಪುವದರ್ಪ್ಪಣವೂದ್ಧರಾಪುರಂ ॥ ಉದ್ಧರೆಯೊಳ್ಜನಿಸಿದ್ದಂ

6 . ದ್ವಾತಂಬಯಿಚಪಾತ್ಮಜಂಸಿರಿಯಂಣಂಸದ್ಧರ್ಮ್ಮಗಳಸುರದ್ರುಮ

7 ನಿರ್ದ್ದಸಿಪ್ಪರಂಪಾಲಿಸುತಂ ॥ ಆತನಸತಿವರದಾಂಬಿಕೆಭೂ

8 ತಳದೊಳ್ಪುರುಶಭಕ್ತಿಬಂಧುಗಳಿತ್ಸಾಮಾತ್ರದಿಪುರಜನವಹುದೆನೆಗೋತ್ರಂ

9 ವೆಚ್ಚರ್ತ್ತನಡದಳಿಶ್ವಾಶ್ಚರ್ಯ್ಯಂ ॥ ವ ॥ ಅಂನ್ತಾಸಿರಿಯಂಣಂತಂನಸ್ವಪತ್ನೀಸಹಿ

10 ತ . . ಬಂಧು . . . . . . ಪರಿಜನಮಂಜನಮಂಪಾಲಿಸುತ್ತಸುಖಸಂ

11 ಕಥಾವಿನೋದದಿಂದಮಿರುತಯಿರಲು ॥ ವೊಂದಾನೊಂದುದಿನಂಅರುಹ

12 ತ್ಪರಮೇಶ್ವರಂಮುನಿಭದ್ರ . . ಸಿರಿಯಂಣನೆಂಬಂತನೆಯಂಮಾಳ್ಪ

13 . . ಮುನಿಭದ್ರದೇವರಾಜ್ಞೆಯೊಳಗುವಱದಿಹಗುಡ್ಡನಾತನೇಂಮ . .

14 . . . . . . ತಂಗೇಅನುಮತಪದವೀವೆನೆಂದುನೆನವವಸರದೆ ೞು ॥ ಅನ್ತು

15 . . . ತ್ತದಿಂಕುಸುಮವೃಷ್ಟಿಗಳಂಸುರಿಯಲ್ಕೆವೇಗದಿಂಘನರವಭೇರೀದುಂದುಭಿ . .

16 ಮಹಾಮುರಜಂಬಹುವಾದ್ಯಘಾತದಿಂತನತನಗಾಡಿವಾಡುತಿರೆ . ಂನ . . .

17 . . . ಕಂನಹಂಜಿನಪದಪದ್ಮಮಂಬಿಡದಸಾಧುಸೀಯಣನೇಂಕೃತಾ

18 ರ್ತ್ಥನೋ

(ಮುಂದೆ ಬರವಣಿಗೆ ಇಲ್ಲ)

154

ಅದೇ ಸ್ಥಳದಲ್ಲಿ ೩ನೇ ಕಲ್ಲಿನಲ್ಲಿ.

ಪ್ರಮಾಣ 6′ × 2″

1 . . ವಸ್ತುವಿಷಯಾಯಜಗದ್ಧಿತಾಯವಿಶ್ವಸ್ಥಿತಿಪ್ರಳಯಸಂಭವಕಾರಣಾಯಸರ್ವ್ವಾತ್ಮಸೇವಿ

2 . . . . . . ಭವಾಯತುಭ್ಯಂನಮಸ್ತ್ರಿಭುವನಪ್ರಭವೇಶಿವಾಯ ॥ ಸ್ವಸ್ತಿಶ್ರೀರಿಪು

3 ರಾಜರಾಜಮಕುಟಾಲಂಕಾರಪಾದಾಂಬುಜೇಭೂಮಿಂಬಾಸನಭೂಮಿಪಾಳತಿಳಕೇ

4 ಶ್ರೀಬುಕ್ಕರಾಜಾತ್ಮಜೇಸಾಮ್ರಾಜ್ಯಂವಿಜಯಾಭಿಧಾನನಗರೇಕುರ್ವ್ವತ್ಯಖಂಡೋದಯೇ

5 ಭೂಲೋಕಂ . . . . ಪಕ್ಷ . . . . ಯಾತೇ ಶಕೇತ್ರಿ . . . ಶತ

6 ಕೇಸಾಹಸ್ರಸಂಯೋಜಿತೇಜ್ಯೋತಿಂಶಾಸನ . . . . ದಿನೇಶ್ರೀಮುಖ್ಯಸಂವಚ್ಛರೇಚಯಿತ್ರೇಮಾ

7 ಸ್ಯಸಿತಾಷ್ಟಮಿ . . . ವಾರೇಭೂ . . ಗತೇಯೋಗೇಕವುಲಕನಾಮಧೇಯಕರ

8 ಣೇಪ್ರಾಯ . . . . ಬಭುಉಪ್ರಜಾ

9 ವಿದ್ವಾಂಸೋನಯ . . . . ಜೇಭಾವಸಹಿತಾ

(ಮುಂದೆ ಕಾಣುವದಿಲ್ಲ.)

155

ಅದೇ ಸ್ಥಳದಲ್ಲಿ ಬಿದ್ದಿರುವ ಮಾಸ್ತೀಕಲ್ಲಿನಲ್ಲಿ.

1 ಶಕಕಾಲಂಗಸಿವಹ್ನಿವೇದಹರ

2 ದ್ರುಕ್ಸಂಖ್ಯಾಂತದೊಳ್ಕ್ರೋಧನಾ

3 ಬ್ದಕದೊಳ್ಪುಷ್ಯವಿಶುದ್ಧದೇಕ

4 ದಶದೊಳ್ಗುರ್ವ್ವಾರದೊಳ್ರಾತ್ರಿಯೊ

5 ಳ್ಸಕಲಾತ್ಮಂಗುರುಪಂಡಿತಾಖ್ಯ

6 ವರಶಿಷ್ಯಂಮಲ್ಲಗೌಡಾತ್ಮಜಂ

7 ಪ್ರಕಟಂಶ್ರೀಮೊರಸಾಗಿಕಾಯ್ದು

8 ನನಮತ್ಯರ್ದ್ದುರ್ಗ್ಗಮಂಸ್ವರ್ಗ್ಗಮಂ

156

ಅದೇ ಗ್ರಾಮದ ಮಜರೆ ಮಂಚಿ ಗ್ರಾಮದ ಹನುಮಂತದೇವಸ್ಥಾನದ ಹಿಂಭಾಗದ ಗೋಡೆಗೆ ಸೇರಿದ ಕಲ್ಲಿನಲ್ಲಿ.

ಪ್ರಮಾಣ 1′ 10″ × 1′.

[1]ಉದರೆ‍ಪ್ರುಟಂಪ್ಪಗೌಡುಶ್ರಾಂ
[2]ತಪಗೌಡರೂಮಾಡಿಸಿದಕಲ
[3]ಗುಡಿಯಸೇವೆಹಾಸವಣನ
[4]ಮಕಳೂಮಂಗದಸನಾಗದಸಂ
[5]ಆದಸಮಡಿದಂನಂದನಸಾತಚ
[6]ರಾದಲೂಮಾಂಚಿರಯಾನಗುಡಿಗೆ
[7]ನಂಗಃಹಾಣಗ ೨೦೦ ಯಿನುರವರಹಾ

157

ಅದೇ ಗ್ರಾಮದ ಮಧ್ಯದಲ್ಲಿ ಹುಣಸೇಮರದ ಕೆಳಗೆ ನೆಟ್ಟ ವೀರಕಲ್ಲಿನಲ್ಲಿ.

ಪ್ರಮಾಣ 5′ × 2′ 4″.

[1]..... ಜಯಾಭ್ಯುದಯಶಕವ
[2]........ಶತ್ತ........
[3]ಸಿಹ................
[4]............ಸಂಣಯನಮ
[5]ಗ . ಶುನೂ......ಹೋದನು

158

ಉದ್ರಿ ಮಜರೆ ಬಿದರಿಗೆರೆ ಗ್ರಾಮದ ಚಾಪೆಃ ಭೀಮನ ಹಿತ್ತಲಲ್ಲಿ ನೆಟ್ಟ ೧ನೇ ಮಾಸ್ತೀಕಲ್ಲಿನಲ್ಲಿ.

ಪ್ರಮಾಣ 4′ 6″ × 2′.

[1]ನಲ್ಲಾ ಚಕ್ರವರ್ತ್ತಿಗಳಶ್ರೀ
[2]ಪಾದಕೆಶರಣೂ
[3]ಶ್ರೀಮತುಶಕವರು
[4]ಶ ೧೩೨೪ ಸಂದು
[5]ಚಿತ್ರಭಾನುಸಂ ಕಾ
[6]ತ್ತಿಕಸು ೪ ಸೋ ಅಳ
[7]ಜಕ್ಕದೇವನಾಯ್ಕರಮ
[8]ಗಬ್ಬೊಂಣನೂಸ್ವರ್ಗಸ್ತ
[9]ನಾದಲಾತನಮದವಳಿಗೆ
[10]ನಾಗಾಯಿಸಹಗಮ
[11]ನವಮಾಡಿದಳುಶ್ರೀ
[12]ಶ್ರೀ ಶ್ರೀ ಶ್ರೀ ಶ್ರೀ

159

ಅದೇ ಸ್ಥಳದಲ್ಲಿ ೨ನೇ ಮಾಸ್ತೀ ಕಲ್ಲಿನಲ್ಲಿ.

ಪ್ರಮಾಣ 3′ × 1″.

[1]......ಸಂವತ್ಸರದ
[2]........ಸು ೧ ಬು..
[3]........ಸಿ......
[4]........ಸಂ....
[5]ಆಕಲ........ದಾ
[6]ನಉದರೆಯ
[7]ಹೊಂನೋಜನು

160

ಅದೇ ಗ್ರಾಮದ ಈಶ್ವರ ದೇವಸ್ಥಾನದ ಮುಂದೆ ನೆಟ್ಟ ವೀರಕಲ್ಲಿನಲ್ಲಿ.

ಪ್ರಮಾಣ 5′ × 2′ 8″.

[1]ಸ್ವಸ್ತಿಶ್ರೀಮತುಯಾದವನಾರಾಯಣಂಭುಜಬಳಪ್ರವುಢಪ್ರತಾಪಚಕ್ರವರ್ತ್ತಿ
[2]ಶ್ರೀವೀರರಾಮದೇವವಿಜಯರಾಜ್ಯೋದಯದ ೧೧ ನೆಯವಿಶುಸಂವತ್ಸರದ

3ಮಾಘಬಹುಳಚತುರ್ದ್ದಶೀವಡ್ಡವಾರದಲ್ಲಿಬಿದಿರಗೆರಿಯತಯಿಲ್ಯೆಯಬೊಮ್ಯ
4ಯನಾಯಕನಮಗಜಕ್ಕಗೌವುಂಡತರವೂರಬೀರೆಯ್ಯಾಹಡವಳನಕೂಡೆಕಾದಿ
5ಸಮಂಗದಲ್ಲಿವೀರವಿದಳನವನ್ನಮಾಡಿಮಾರ್ವ್ವಲವನ್ನುತವಿಸಿಹೊಯ್ದುಹಾಯಿಸಿಕೊಂ
6ಡುಸ್ವರ್ಗ್ಗವಸೂಱೆಗೊಂಡನುಬಿದಿರಗೆರಿಯವೂರಮುಂದಣಹಂತದಮೊರ
7ಡುಮಾರಬೋವಮುಕ್ಷವಾಗಿಮತ್ತ ೨ಂಕಂ ಬ ೬೦ ಭೂಮಿಅಷ್ಟಭೋಗತೇಜಸ್ವಾಮ್ಯ
8ಶ್ರೋತ್ರಪಾತ್ರಕಟ್ಟಿದಹುವುಮುಕ್ಷವಾಗಿತೆಱುವಿಲ್ದಸರ್ವ್ವಮಾನ್ಯ ಮಂಗ
9ಳಮಂಗಳ । ಶ್ರೀ ಶ್ರೀ

161

ಅದೇ ಸ್ಥಳದಲ್ಲಿ ೨ನೇ ವೀರಕಲ್ಲಿನಲ್ಲಿ.

1ಸರ್ವಧಾರಿಸಂವತ್ಸ
2ರದಮಾಘಸು ೩ ಮಭಿ
3ಲನಾಯಕ್ಕನುಕಳ್ಳ
4ರಕೂಡೆಕಾದಿಬೀರ
5ಸ್ವರ್ಗ್ಗದೊಳಗಾದನು
6ಮಂಗಳಮಹಾ ಶ್ರೀ
7ಶ್ರೀ ಶ್ರೀ ಶ್ರೀ

162

ಉದ್ರಿ ಮುಜರೆ ಯಲವಾಟ ಗ್ರಾಮದ ಈಶ್ವರದೇವಸ್ಥಾನದ ಮುಂಭಾಗದಲ್ಲಿರುವ ವೀರಕಲ್ಲಿನಲ್ಲಿ.

ಪ್ರಮಾಣ 4′ 4″ × 2′.

1ಸ್ವಸ್ತಿಶ್ರೀಮತುಸಮಸ್ತಪ್ರಸಸ್ತಿಸಹಿತಂಹೊಇಸಣವೀರಬಲ್ಲಾಳ
2ರಾಯವಿಜಯರಾಜ್ಯೋದಯದ ೪೪ ಆನಂದಸಂವತ್ಸರದಆಸ್ವಇಜಸು ೧೩
3ದಿನದಲಿ . . . . . ಪಯರಾಯನುಕಿಱಿಯಜೆಡ್ಡುಳಿಗೆನಾಡಕೂ . . ಲಿಯತು
4ಱವಕೋಡುಹೋಹಲ್ಲಿ . . . . ಮಹದೇವ . . . ಯ
5ಲಾಗಿಬಂದುಹಿರಿಯಜೆಡ್ತುಳಿಗೆನಾಡಹರಿಗೆಯಮ . . . . ಲಸಿ
6 . . . . ಡಿಯರಗಂಡ . . . . . .
7 . . . . ಕಾದಿಪ
8 . . . . ನಿಱಿದು . . ತುಱುವಂಮಗುಳಿಚಿಸುರಲೋಕ
9ಪ್ರಾಪ್ತನಾದಮಂಗಳಮಹಾ ಶ್ರೀ ॥

163

ಅದೇ ಹೋಬಳಿ ಹರೂರು ಗ್ರಾಮದ ವೂರಬಾಗಲ ಬಳಿ ನೆಟ್ಟಿರುವ ಮಾಸ್ತಿಕಲ್ಲಿನಲ್ಲಿ.

1ಶಕವರುಸಸವಿರದಮೂನೂಱಅಱುವತ್ತಅಯಿ
2ದನೆಯವಿಸುಸಂವತ್ಸರದಸ್ರವಣಸು ೧೦ ಉಕ್ರೀವಾ
3ತುವಿಜಯನಗರಿಯಮಲ್ಲಿಕಾರ್ಜುನರಾಯರವೇಂ
4ಟೆಯದೇಕೆಂದ್ರಗುತ್ತಿಯವೇಂಟೆಯದಹರೂ
5ರಅಂಮಗಉಡನಬಯಿರವಗಉಡಿ
6ತಂಮಸ್ತ್ರೀಯರುಸಹಸಂಗತಿಯಿಡಿದರು ಶ್ರೀ

164

ಅದೇ ಸ್ಥಳದಲ್ಲಿ ನೆಟ್ಟಿರುವ ವೀರಕಲ್ಲಿನಲ್ಲಿ.

ಪ್ರಮಾಣ 2′ × 1′ 3″.

1 ನಮಸ್ತುಂಗಶಿರಸ್ತುಂಬಿಚಂದ್ರಚಾ
2 ಮರಚಾರವೇತ್ರೈಲೋಕ್ಯನಗರಾರಂಭಮೂ
3 ಲಸ್ತಂಭಾಯಶಂಭವೇ ಸ್ವಸ್ತಿಶ್ರೀಜಯಾಭ್ಯುದಯಶಾ
4 ಲಿವಾಹನಶಕವರ್ಷ ೧೪೩೬ನೆಯ.ಬಹುಧಾನ್ಯಸಂವತ್ಸರ . .
5 ಭಾದ್ರಪದಬಹುಳ ೧೦ಗು . . . .
6 . . . .

165

ಅದೇ ಗ್ರಾಮದ ಮಾರೀಗುಡಿಯ ಹಿಂದೆ ನೆಟ್ಟಿರುವ ಮಾಸ್ತೀಕಲ್ಲಿನಲ್ಲಿ.

1 ಸುಕ್ಲಸಂ
2 ವತ್ಸರದ
3 ಕಾರ್ತ್ತಿಕಬ
4 ಹುಳ ೭ ಬ
5 ಶ್ರೀಮತು
6 ಹರಲೂ
7 ರಚಾಲುಂ
8 ಡಗಾಲು
9 ಡ . . .
10 ಮಗಚೂಂ
11 ವ್ಮಗಉಡ
12 ಸ್ವರ್ಗಸ್ತನಾ
13 ದಲ್ಲಿಆತನ
14 ಮದವಳಿಗೆ
15 ಬೊಂಮಿಗ
16 ಉಡಿಸವು
17 ದಿಕವಳಿತು
18 ಸ್ವರ್ಗಕೆಸಂ
19 ದಳುಮಂಗ
20 ಳಮಹಾಶ್ರೀ
21 ಶ್ರೀ ಶ್ರೀ ॥

166

ಅದೇ ಸ್ಥಳದಲ್ಲಿ ನೆಟ್ಟಿರುವ ೨ನೇ ವೀರಕಲ್ಲಿನಲ್ಲಿ.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ
2 . . . . ಶ್ರೀಮನ್ಮಹಾರಾಜಾಧಿರಾಜ
3 . . . . ಮಪ್ಪಶ್ರೀಮಲ್ಲಿಕಾರ್ಜುನರಾಯಮಹಾರಾಯರುಸಮಸ್ತರಾಜ್ಯಂ
4 ಗೆಯುತ್ತಮಿದ್ದಲ್ಲಿಆತನಭುಜಪ್ರತಾಪವೆಂತೆಂದಡೆ
5 . . . .

(ಮುಂದೆ ಕಾಣುವದಿಲ್ಲ.)

167

ಅದೇ ಸ್ಥಳದಲ್ಲಿ ೩ನೇ ವೀರಕಲ್ಲಿನಲ್ಲಿ.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂಭವೇ
2 . . . . ಸ್ವಸ್ತಿಶ್ರೀಜಯಾಬ್ಯುದಯಚತುಸ್ಸಮುದ್ರಾಧೀಸ್ವರವಿಜಯಶ್ರೀ
3 ದೇವರಾಯರಕುಮಾರಮಲ್ಲಿಕಾರ್ಜುನಮಹಾರಾಯರಿಹವಿಜಯನಗ
4 ರಿಯರಾಣೆಯಚಂದ್ರಗುತ್ತಿಯಪ್ರತಿಪಾಲಿಸಿದಭಂಡಾರದಲಿಂಗಪ್ಪವೊಡೆಯರಕಾಲದ
5 ಲುಆಚಂದ್ರಗುತ್ತಿಯೊಳಗಣಹಿರಿಯಜೆಡ್ಡುಳಿಗೆನಾಡೊಳಗಣಪುಲೆಯದಹರಊರಗ್ರಾ
6 ಮದಕುಳವಾಡಿಗಉಡುಗಳುತುಱುಸೆಱೆಹೋಗೆಕಾದಿಮಡಿದವರುಗಳು
7 ಮಸಣಗಉಡರಮಗಬೊಂಮರ್ಸಗಉಡನತಂಮಗಉಡರಮಗನರಸಂ
8 ಣಗಉಡರುಸಕವರ್ಷ ೧೩೬೬ ನೆಯಭಾವಸಂವತ್ಸರದಆಸ್ವೀಜಸುದ್ಧ ೧೧
9 ಬುಧವಾರಮೂಱನೆಯಜಾಮದಲುಕಾದಿಮ
10 ಡಿದಸಾಂಗತ್ಯದವೀರಕಲ್ಲು . . ಮಂಗಳಮಹಾ ಶ್ರೀ ಶ್ರೀ

168

ಅದೇ ಸ್ಥಳದಲ್ಲಿ ೪ನೇ ವೀರಕಲ್ಲಿನಲ್ಲಿ.

[1]ಸ್ವಸ್ತಿಶ್ರೀಜಯಾಭ್ಯುದಯರಾಜಾ. . . .
[2]ಜರಾಜಪರಮೇಶ್ವರಶ್ರೀವೀರಪ್ರತಾಪದೇವರಾ
[3]ಯರುರಾಜ್ಯಂಗೆಯಿಉತ್ತಮಿರ್ದ್ದ ಶಕ . . . .
[4]ವ ೧೩೩೮ ದುರ್ಮ್ಮುಖಿಸಂವತ್ಸರದವೈ . . . .
[5]ಶು ೧೦ ಮಹರಊರಮೂಲಿತಿವರವು . .
[6]ಯನಾಯಕನುಸಿಗ್ಗದದಾರಿಯಾಉಕಳ್ಳ .
[7]ದಿಕಾದಿವೀರನಾಗಿಕಳ್ಳ . . ಅಂಬುಗ . . . .
[8]ಯಿಟ್ಟುಸುರಲೋಕಪ್ರಾಪ್ತಿಯಾದ

169

ಅದೇ ಸ್ಥಳದಲ್ಲಿ ನೆಟ್ಟಿರುವ ಮಾಸ್ತಿಕಲ್ಲಿನಲ್ಲಿ.

[1]ಅಂಗೀರಸಸಂವತ್ಸರದ
[2]ವಯಿಶಾಖಸುದ್ಧಪಾಡ್ಯದಲು
[3]ಹರವೂರಬೊಮ್ಮಂಣ್ಣನಾಯಕನವು
[4]ಗಭೈರನಾಯಕನುಊರಅಜುವ
[5]ತ್ತೊಕ್ಕಲುಡೆಯ್ಯಬಿತ್ತುವಲ್ಲಿಕಳರು
[6]ಬಂದುತಾಗಿದಲ್ಲಿಕಾದಿವು
[7]ಡಿದನು

170

ತವನಂದಿ ಹೋಬಳಿ ಮೂಡಿ ಗ್ರಾಮದ ಗ್ರಾಮೇಶ್ವರದೇವಾಲಯುವ ದಕ್ಷಿಣಕಡೆ ಗೋಡೆಗೆ ಕಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 4′×1′ 10″.

[1]ನಮಸ್ತುಂಗಶಿರಸ್ತುಂಬಿಚಂದ್ರಚಾಮರಚಾರವೇತ್ರೈಳೋಕ್ಯನ ಗರಾರಂಭಮೂಲಸ್ತಂಭಾ . . .
[2]ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲಭಂಮಹಾರಾಜಾ ಧಿರಾಜ . .
[3]. ಮೇಶ್ವರಂಪರಮಭಟ್ಟಾರಕಂಸತ್ಯಾಶ್ರಯಕುಳತಿಳ .
[4]ಕ್ಯಾಭರಣಂಶ್ರೀಮತ್ರಿಭುವನಮಲ್ಲದೇವರವಿಜಯ .
[5]ಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾ .
[6]ಸಲುತ್ತಮಿರೆತತ್ಪಾದಪದ್ಮೋಪಜೀವಿ . . ಸಮಸ್ತಪ್ರಶ .
[7]ಸಹಿತಂಶ್ರೀಮನ್ಮಹಾಪ್ರಧಾನಂಸಾಮಾಸಿಗಳಧಿಷ್ಠಾಯಕಂಕ . .
[8]ಧಿವಿಗ್ರಹಿಸೇನಾಧಿಪತಿಮನೆವೆರ್ಗ್ಗಡೆದಣ್ಡನಾಯಕಂಭೋಗ
[9]ಯ್ಯಂಗಳುಬನವಾಸೆಪನ್ನಿಚ್ಛಾರ್ಸಿರಮುಮಂದುಷ್ಟನಿಗ್ರಹಶಿ .
[10]ಪ್ರತಿಪಾಳನದಿನಾಳುತ್ತಮಿರೆಶ್ರೀಮಚ್ಚಾಳುಕ್ಯ . .
[11]ಮವರ್ಷದ ೫೦ ನೆಯವಿಶ್ವಾವಸುಸಂವತ್ಸರದಮಾಘದಪುಣ್ಣ .
[12]ಸೋಮವಾರದಂದುಸೋಮಗ್ರಹಣಸಂಕ್ರಾಂತಿಬ್ಯತೀಪಾತದಂ .
[13]ಶ್ರೀಮನ್ಮಹಾಪ್ರಧಾನಂವಡ್ಡರಾವುಳದಣ್ಡನಾಯಕಂಮದಿಮಯ
[14]ಗಳುಂಪಸಾಯದಪೆರ್ಗ್ಗಡೆಚಾವುಣ್ಡಮಯ್ಯನಾಯಕನುಂಬನ ವಾ .
[15]ನಾಡಹೆಜ್ಜುಂಕದಹೆರ್ಗ್ಗಡೆಸೋಯಿಪಯ್ಯನುಂದವಸಾಯದಹೆರ್ಗ .
[16]ಮಾಕಿಮಯ್ಯಕಲಿದೇವಲಖ್ಯನಾಯಕರುಂನಾಳ್ಪ್ರಭು
[17]ಚೆವ್ವಿಸೆಟ್ಟಿದಯಸಿಂಗಸೆಟ್ಟಿಬಮ್ಮಚಸೆಟ್ಟಿಯುಂಮು
[18]ಮ್ಮರಿದಣ್ಣಮುಮಿದ್ದುರ್ಬರದಾನದಿಯತೆಂಕಣಮೂವಡಿ
[19]ಯಪೀಡಿನಶ್ರೀಗ್ರಾಮೇಶ್ವರದೇವರನಿವೇದ್ಯಕ್ಕಂನಂದಾದೀವಿಗೆಗಂ
[20]ನಡವಲುಪ್ಪಿನಹೇಱಿಂಗೆನೂಱಕ್ಕೊಂದುಹೇಱುದವಸದಹೇಱಿಂ
[21]ಗಿನ್ನೂಱಕ್ಕೊಂದುಹಾಗಮಂತಿಱುವರುವಡ್ಡರಾವುಳದವರುಂ
[22]ಪೆಜ್ಜುಂಕದವರುಉಪ್ಪಿನಹೇಱುನೂಱಕ್ಕೊಂದುಹೇಱುಬಿಟ್ಟ ರುದವಸಹೇ
[23]. ಇನ್ನೂಱಕೆಹಾಗವಂಕೊಟ್ಟರುಅಯ್ವತ್ತೊಕ್ಕಲುಸೊಡ[ರಿ] ಗೆಎಣ್ಣೆಯಂಕುಡು
[24]ತ್ತಬಪ್ಪರುಅಯ್ವತ್ತೊಕ್ಕಲುಂಬಮ್ಮಚಸೆಟ್ಟಿಯುಂಕಾರಪಾ .
[25]ದನು . . . . ಣ್ಣನುಂಡಿದ್ದುರ್ದೇವಿಂಗೆಱೆಯಕೆಳಗೆಗದ್ದೆ ಕ ೫೦
[26] . . . . ಬಿಟ್ಟರಿನ್ತೀಧರ್ಮ್ಮಮಂಪ್ರತಿಪಾಳಿಸಿನಡೆಯಿಸಿ
[27]ದವರ್ಗ್ಗೆ ವಾರಣಾಸಿಕುರುಕ್ಷೇತ್ರದಲುಸಾಯಿರಕವಿ
[28]ಲೆಯಂಬ್ರಾಹ್ಮಣರ್ಗ್ಗೆದಾನಕೊಟ್ಟಫಲಮಕ್ಕುಇಧರ್ಮ್ಮಮಂ ನಡ
[29]ಸದೆಕಿಡಸಿದವಂಗೆಗಂಗೆಯತಡಿಯಲುಸಾಯಿರಕಪಿಲೆ
[30]ಯಂಬ್ರಾಹ್ಮಣರುಮಂಕೊಂದಪಾತಕಮಕ್ಕು ॥ ಸ್ವಸ್ತಿಸ
[31]ಮಸ್ತಗುಣಸಂಪನ್ನನಪ್ಪಗಂಗರಾಸಿಪಂಡಿತರಕಾಲಂಕರ್ಚ್ಚಿಧಾ ರಾಪೂ
[32]ರ್ವಕಂಮಾಡಿಕೊಟ್ಟ ಧರ್ಮ್ಮಸಂವತ್ಸರಿಗಂಗೆಹೊದಕೆಮಂ

(ಮುಂದೆ ಬರವಣಿಗೆ ಇಲ್ಲ.)

171

ಅದೇ ದೇವಾಲಯದ ಪಶ್ಚಿಮಕಡೆ ಗೋಡೆಯಲ್ಲಿ ಕಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 5′ 6″ × 1′ 1″.

1 ಸ್ವಸ್ತಿಶ್ರೀಮತುಯುದವನಾರಾಣಪ್ರ
2 ತಾಪಚಕ್ರವರ್ತ್ತಿಭುಜಬಳವೀರಬ
3 ಲ್ಲಾಳದೇವವರ್ಷದಕ್ಷಯುಸಂ
4 ವತ್ಸರಪಾಲ್ಗುಣಪುಣ್ಣಮಿಬು
5 ಧವಾರದಂದುಶ್ರೀಕದಂಬ
6 ಚ[ಕ್ರ]ವರ್ತ್ತಿಕವದೇವಮೂವಡಿಂಬೀಡ
7 ನಿಜುಬಿದಲ್ಲಿಸುಣ್ಣದಬವತಳ್ತ್ತುಬಿದು
8 ತುಱುವಂಮುಗುಟ್ಟಿಸುರಲೋಕಪ್ರ
9 ಪತನಾದಆತಂಗೆನೆತ್ತರುಗೊಡಗೆ
10 ಬ ೧೦ ವೆಂದುದೇವಾಲ್ಯದನಿವೇದ್ಯದಸ
11 ಳಾಂಇನ್ತಿದಂನು . . . . . ಸುವದು

172

ಆದೇ ದೇವಾಲಯದ ಉತ್ತರಕಡೆ ಗೋಡೆಗೆ ಕಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 4′ × 1′.

1 ಸ್ವಸ್ತಿಶ್ರೀಮತುಚಾಳುಕ್ಯಪ್ರತಾಪ
2 ಚಕ್ರವರ್ತ್ತಿ . . . . ಮಲ್ಲದೇವವರ್ಷವ
3 ೨ ನೆಯಪಿಂಗಳಸಂವಚ್ಛರಂಹಾಮಂಗಲ್ಲಲು
4 ಮಲ್ಲಿಕಾರ್ಜುನದೇವನಾಳುತ್ತಿರೆ ಮೂ
5 ವಡಿಯಮೂಲಸ್ಥಾನದಸೋಮೇಶ್ವರ
6 ಪಂಡಿತರಮಗಂಮಚಣ್ಣೆಯನಾ ಬ
7 ಕವ್ವೆರಿಯುಂತಾಗಿತಳ್ತ್ತುಬಿದುಸುರ
8 ಲೋಕಪ್ರಾಪ್ತನಾದ

173

ಅದೇ ಗ್ರಾಮದ ವೀರಪ್ಪ ವೊಡೆಯರ ಹಿತ್ತಿಲಲ್ಲಿ ನೆಟ್ಟಿರುವ ವೀರಕಲ್ಲಿನಲ್ಲಿ.

ಪ್ರಮಾಣ 5′ 6″ × 2′ 2″.

1 ನಮಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರ್ಯೆಲೋಕ್ಯನಗರಾರಂಭಮೂಲಸ್ತಂ
2 ಭಾಯಶಂಭವೇ ಸ್ವಸ್ತಿಶ್ರೀಜಯಾಭ್ಯುದಯಶಕವರುಶ ೧೩೨೨ ನೆಯವಿಕ್ರಮ
3 ಸಂವತ್ಸರದಭಾದ್ರಪದಬಹುಳ೩೦ ಸೋಮವಾರದಲುಶ್ರೀವೀರಹರಿಯಪವೊಡೆ
4 ಯರುರಾಜ್ಯವಾಳುತಂವಿರೆ ಗದಿಗಿನದೇವ . . . ವೊಡೆಯರ . . ಪು . ಗಂಶ್ರೀಮಂನ್ಮ(ತು)ಹಾ
5 ಪ್ರಭುಶ್ರೀಸೂನಮಲಿಕಾಜ್ಜುನದೇವರದಿಬ್ಯಶ್ರೀಪಾದಪದ್ಮಾರಾಧಕರುಮಪ್ಪನಾಗ
6 ರಖಂಡೆಯದನಾಡಮೂವಡಿಯಬಸವಗವುಡನಮಗಚೆನ್ನಮಲ್ಲಪ್ಪಂಮು
7 ಕ್ತನಾಗಿಆಮೂವಡಿಯಗ್ರಾಮೇಶ್ವರದೇವರಿಗೆಬಿಟ್ಟಭೂಮಿಹಿತ್ತಲಕೆಱೆಯಪಡುವಣಕೋಡಿ
8 ಯಲಿಬಿಟ್ಟಗೆಯಿಖಂಡುಗದಕೆಯ್ಯಬಿಟ್ಟುಕೊಟ್ಟದು

174

ಅದೇ ಹೋಬಳಿ ಕೊರಕೋಡು ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ೧ ನೇ ವೀರಕಲ್ಲಿನಲ್ಲಿ.

ಪ್ರಮಾಣ 5′ 8″ × 1′ 8″.

1 . . . . ಸಮಸ್ತಪ್ರಸಸ್ತಿಸಹಿತಂಶ್ರೀಮುಕಳಚುರ್ಯ್ಯಕುಳಕಮ
2 ಳಮಾರ್ತ್ತಣ್ಡಭುಜಬಳಚಕ್ರವರ್ತ್ತಿಸಂಕಮದೇವರಾಜ್ಯಂ
3 . . . ವಿರಲುಸ್ವಸ್ತಿಸಮಸ್ತಪ್ರಸಸ್ತಿಸಹಿತಂಶ್ರೀಮನ್ಮಹಾ
4 . . . . ಸ್ವರಂವಿಕ್ರಮಾದಿತ್ಯದೇವರಸರುರಾಜ್ಯಂಗೆಯಿವುತ್ತ .

5 ..ಸ್ವಸ್ತಿ ಸಮಸ್ತ ಪ್ರಸಸ್ತಿ (ಸಹಿ)ಸಹಿತಂಶ್ರೀಮನ್ಮಹಾಮಣ್ಡಳೇಸ್ವರಉದ್ಧರೆ
6 ..ಲಹದೇವರಸರುಕುಪ್ಪೆಯಲಿರಲುವಿಕ್ರಮಾದಿತ್ಯದೇವತಂನ
7 ..ಮಾಗ್ರವೆರಸಿನಡೆದುಕುಪ್ಪೆಯಂಮುಱಿವೞಿಸಾಸಿಮರ್
8 ತ್ತಿಕೀದುತ್ತಮಿರಲುಸಖವರ್ಷ ೧೯೦ ನೆಯ ಹತ್ತನೆಯ ಹೇಮಳಂಬಿ
9 ಸಂವತ್ಸರದಕಾರ್ತ್ತಿಕ ಬ ತದಿಗೆಸುಕ್ರವಾರದಂದುಅಸಕಹಳ್ಳಿಯಆಲವಬೀಱ
10 ಸೆಟ್ಟಿಯಮಗಯೆಕ್ಕಡಿಗಬಿಕ್ಕಣನತ್ಯೆಲಹದೇವಂಕರೆದುಪಸಸಲುಮಹಾ
11 ಪ್ರಸಾದವೆಂದುಕೈಕೊಂಡುಕಾದುವಮೇಲಾಳನಿಱಿದತುರಕವನೂಱಿನ್ಮೊ
12 ಱ್ವಂಹಾಯದು..ೞಿಸಮೂಹಂ ನೆಲ(ಲ)ದಲಿಕ್ಕಱಿನಿಂಬಯಾವ.
13 ಹದಿಂಸ್ವರ್ಗ್ಗಲೋಕವಂಮೆಚ್ಚಿಸಿದಂಅಲಗಿನಬೞಿಯಂಬಾಗಳಗಾಯಲುಹೊ.
14 ವಿಧಾನರಾದರ..ಸಲೆಸಂಭ್ರ...ಯಂಕಱಿವಜೋದಸರಾ
15 ..ಸರಿಯೆತ್ತನೋಪ್ಪರ್ಡಂ । ಮಲೆದುತ್ತಮಪೊಗ್ಗರದನೆತ್ತರಹಗ್ಗದಲಿಟ್ಟ.
16 ಡ್ಡಯ..ಮಱಿವರವಾರಿತ್ಯೆಲಪನಮುಕ್ಕಟೆಗಬಿಕ್ಕಣನಾ
17 ನ್ತಿರದಾಜಿರಂಗದೊಳು...ಗೋದಮ್ಮುಯುಮಾೞುವದೇಗಳತಂದ
18 ವಾಯಿಕಱಿಸುಗಿದುಏಱುವರವ..ಗೊಣ್ಡಪಗೆಯದ.....

(ಮುಂದೆ ಕಾಣುವದಿಲ್ಲ.)

175

ಅದೇ ಸ್ಥಳದಲ್ಲಿ ೨ ನೇ ವೀರಕಲ್ಲಿನಲ್ಲಿ.

ಪ್ರಮಾಣ 5′ × 1′ 8″.

1 ಸ್ವಸ್ತಿಶ್ರೀಮಚ್ಚಾಳುಕ್ಯಚಕ್ರವರ್ತ್ತಿತ್ರೈಳೋಕ್ಯಮಲ್ಲದೇವಂಸುಖದಿಂರಾಜ್ಯಂಗೆಯ್ಯುತ್ತಿರೆಸಕನೃಪ
2 ಕಾಳಾತೀತಸಂವತ್ಸರಂಗಳು ೧೦೧೭ ನೆಯ ಯುವಸಂವತ್ಸರದಧಿಕಫಾಲ್ಗುಣಬಹುಳ ೩ ಸೋಮವಾರದಂ
3 ದುಶ್ರೀಮನ್ಮಹಾಮಂಡಳೇಶ್ವರಂಜಗದೇವರಸರಪಸದಿಂಮಧಸಾಲೆಯುಕಾಳರಸಂಸಮಸ್ತಸಾಮಾ
4 ತ್ತಿಯಂಬೆರಸುಬಂದುಶ್ರೀಮದನಾದಿಯಗ್ರಹಾರಂಕುಪ್ಪಗಡೆಯುಹಳ್ಳಿಕೊರಕೋಡನಿಱಿದುತುಱುವಂಕೊಂ
5 ಡುಡೆಯುಚ್ಚಿಹೋಹಾಗಳಲ್ಲಿಹುಟ್ಟಿದಬಾವಗಾವುಂಡನಮಗಂದಿರುದೇವಗಾವುಂಡನುಂಮಲ್ಲಗಾವುಂ
6 ಡನುಂಬಿಲ್ಲುಮಂಬುಮಂಕೊಂಡೀರ್ವ್ವರುಂಹೆಬ್ಬಾಗಿಲೊಳಡ್ಡಂನಿಂದುಗುಹೆಯಬಾಗಿಲೊಳುಸಿಂ
7 ಹನಿಪ್ಪರ್ಂತೆತಾಗಿತಳ್ವಿಸುವಾಗಳುಕಾರಮುಳಿಕಱಿದಂತೆಯುಂಕಡಂದುಱಹುಟ್ಟಿಯ
8 ಕೆಣಕಿದಂತೆಯುಂಕವಿದಕಾಲಬಾಯೊಳಂಕಾಲಬಾಯೊಳಂಜವನೊಕ್ಕಿಲಿಕ್ಕಿದಂತೆತೊತ್ತ
9 ಳದುಳಿದಪ್ರೋಲುತುಂಕಯ್ಯೆವರೆದುಂಬಿಲ್ಲತಿರುಮುಂಪಱಿವಂನ್ನವೆಚ್ಚುನೆಱಿಯದೆಕಟ್ಟಿದಲಗಂಕಿ
10 ತ್ತು. ಲ್ಕುಱಿಯಹಿಂಡಂತೋಳಂಪೊಕ್ಕಂತೆಯುಂಕಬ್ಬುರ್ದ್ದೋಂಟವನಾನೆಪೊಕ್ಕಂತೆಯುಂ
11 ನಿಕ್ಕುಂಳಿಲುಪೊಕ್ಕುದೋಳಹಿಂಡುಕುತ್ತಿನೂಂಕುತ್ತಬಪ್ಪಾಗಳು । ವೃತ್ತ ॥ ಮಲೆದಿದಿರಾಂತಮಾರ್ವ್ವಲ
12 ವನಳ್ಕುಱಿತಾಗಿಭುಜಪ್ರತಾಪದಿಂದಲಗನೆಕಿತ್ತುರ್ಪೊಯ್ಯೆನಿರತಂಕಣಕಾಲುವೊಳಕಾಲ್ಮ
13 ಖಂಭುಜೆನುತಲಬಳಿಯಾಗೆಸಂಬಳಿತಯೋಪಿನದೊಂದೆರಡಟ್ಟಿಯೋಡಲುಂತೊಲಗದೆನಿಂದು
14 ..ಳಱಿದರಬ್ಬರುಮಾಹವರಂಗಭೂಮಿಯೊಳು । ಅಂತವರಿಬ್ಬರುಂಪೋಗದೆನಿಂದುದಂಕಂಡುಪೊ
15 ಱದಾಳುಕುದುರೆಯಪೊಬ್ಬರ್ಂತಾಗಿಯೆಸಲ್ವಿಱಿಯಲುಂಕೋಲ್ಕೊಂತೆಂಗಳಿಂಡಾಗಿಬಿದ್ದುರ್
16 ಸುರಲೋಕಪ್ರಾಪ್ತರಾದವರಿಬ್ಬರಪೆಣನಂಮೆಟ್ಟಿತುಱಪರಿಯಲವರಿಬ್ಬರಿಂಕಿಱಿಯಜೊಪ್ಪಗಾ
17 ವುಂಡತಂಮಂಣಂದಿರಬ್ಬರಕಳೇಬರವಂಕಂಡುಸೈರಿಸಲಾಱದೆನಿಮ್ಮಾದುದನಪ್ಪೆನಲ್ಲದೊಡೇಂತುಱು
18 ವಂಮುಗುಳ್ಚಿಬಪ್ಪೆನೆರದೊಂದಕೆಯ್ಯೊಳಹಿಂಡಹತ್ತಲಾತಂಗೆಪಡಿಬಲದಾಗಿಮಂಡಳಿಕಂವೃದ್ಧ

19ರೆಯೆಕ್ಕಲರಸನಾಳ್ಕ್ವದುರೆಯುಂಹೇಳಲೂನೆಱವಂಕೂಡಿಕೊಂಡುಹಾಲ್ಗಟ್ಟಿದಬಯಲ
20ಲೊಡ್ಡನೊಡ್ಡಿದಱಬಲವಂಬೊಪ್ಪಗವುಂಡಕೊಂದುತುಱುವಂಮಗುಳ್ಚಿಕೊಂಡುಬಂದಣ್ಣ್ಗೆ
21ದಿವಂಸಂಸ್ಕಾರಿಸಿಜಳದಾನಕ್ರಿಯೆಯ್ಮಂಪರೋಕ್ಷವಿನಯಮುಮಂಮಾ
22ಡಿಯಿಬ್ಬರ್ಗ್ಗಂಕಲ್ಲಂನಿಱಿಸಿದಲ್ಲಿಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ

176

ಅದೇ ಸ್ಥಳದಲ್ಲಿ ೩ನೇ ವೀರಕಲ್ಲು.

1ಸ್ವಸ್ತಿಶ್ರೀಮಚ್ಚಾಳುಕ್ಯತ್ರೈಳೋಕ್ಯಮಲ್ಲದೇವಂಸುಖದಿಂರಾಜ್ಯಂಗೆಯ್ವುತ್ತಿರೆಸಕವರ್ಷದ ೧೦೭೭ ನೆಯ
2ಯುವಸಂವತ್ಸರದಧಿಕಫಾಲ್ಗುಣಬ ೩ ಸೋಮವಾರದಂದುಶ್ರೀಮನುಮಹಾಮಂಡಳೇಶ್ವರಂಜಗದೇವರಸರಬೆ
3ಸ . . . . ಸಾಲೆಯುಕಾಳಂಸಂಸಮಸ್ತಸಾಮಾನ್ತಯಿಂಬಂದುಶ್ರೀಮದನಾದಿಯಗ್ರಹಾರಂಕು
4ಪ್ಪಗಡ್ಡೆ . . . . ಕೊರಕೋಡಣಿಱಿದು . . . ತುಱುವಂಕೊಂಡುಹೋಹಾಗಳಲ್ಲಿಹುಟ್ಟಿದಹ . . .
5. . . ಮಗಂದಿರುವೀರಗಾವುಂಡನುಂಮಲ್ಲಿಗಾವುಂಡನುಂತುಱುವಂತಾಗತ್ತಿರ್ಯಿಂದಡ್ಡಂಹೋಹಾಗ . .
6ಆಳ್ದಂವಿಶಾ[ಳ]ಭುಜಂ . . . ವೆನುತವಿದ್ರೋಡಾತನಿಂಕಿಱಿಯುಂಮಲ್ಲಂವಶರಲ್ದ(ವ)ಱಿಬಲವೆಲ್ಲಂಕೆನ್ನಿಯಱಿ
7. . . . ದಱ . ಮತ್ತಂ . . . ಸಿರಿಮುಂದೊರುಕದೆಬಲನುಲಿದೋಡಾತ್ತಂಬಲವೆಲ್ಲಂಗೊಂದಳಿಸಿತಾಗಿತಳ್ಳಿ
8. . ರಣಂಗಳ . . . ದಿನಾಳ್ವ . . ಮಲಂಪ್ರಗೊಂಡುವೀರರಂಕೊಂದಾಸಂದಣಿಸಿಬಂದಪಗೆವರಪಂದಲೆಗಳ . . .
9. . . . . . ಗೊಂಡ . . . ಮಾಱುಮಿಲ್ಲೆಯೆಂದೆನೆಸಲ್ಲೀಲೆಗೆಮೆಱೆದುಜಸಮಂಪಡೆದ ॥ ಅಂತಾ .
10. . . . . ಕಂಡಲಗಂಕಿತ್ತುಮೇಲೆವಾಯ್ದುಪಲವರಂಕೊಂದಾ . . . .
11. . . . . ಗಳಂ . . . . . ನಿಱಲುಱೆಪಿದಿಯುಂಸುರಲೋಕಪ್ರಾಪ್ತರಾದವರಿರ್ವ್ವರಿಂಕಿಱಿಯಂಜೋದಗಾವುಂಡಂತ .
12. . . . . ಕಳೇವರಮಂಕದ್ದುರ್ಯ್ಯಿಕ್ಕಿಕೊಂಡವರಂಕೊಂದುತುಱುವಂಮಗುಳ್ಚಿತಂದಡಟ್ಟಿದಬೂರನೆಂದಾ . .
13ಳುಮಾರ್ವ್ವರಲವಂಕೊಂದುತುಱುವಂಮಗುಳ್ಚಿತಂದುತಂಮಣ್ಣಂದಿರಕಳೇಬರಮಂಕಂಡುಶೋಕಾ
14ಕ್ರಾಂತನಾಗಿಯುಮವರಿರ್ವ್ವರುಮಂಸಂಸ್ಕಾರಿಸಿಜಳದಾನಕ್ರಿಯೆಯ್ಮಂಪರೋಕ್ಷವಿನೆಯಮುಮುಂಮಾ
15ಡಿಜಿತೇನಲಭ್ಯತೇಲಕ್ಷ್ಮೀರ್ಮ್ಮೃತೇನಾಪಿಸುರಾಂಗನಾಕ್ಷಣವಿಧ್ವಂಸನೀಕಾಯೇಕಾಚಿಂತಾಮ
16ರಣೇರಣೇ । ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ

177

ಅದೇ ಸ್ಥಳದಲ್ಲಿ ೪ನೇ ವೀರಕಲ್ಲು.

ಪ್ರಮಾಣ 5′ × 1′ 10″.

1ಸ್ವಸ್ತಿಶ್ರೀಮತ್ಕಳಚುರ್ಯ್ಯನಿಜವಿಜಯಭುಜಬಳಚಕ್ರವರ್ತ್ತಿಬಿಜ್ಜಣದೇವರು
2ಪೃಥ್ವೀರಾಜ್ಯಂಗೆಯ್ವುತ್ತಿರೆ ॥ ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂಬ
3ನವಾಸಿಪುರವರಾಧೀಶ್ವರಂಜಯಂತೀಮಧುಕೇಶ್ವರಲಬ್ಧವರಪ್ರಸಾದರಪ್ಪ
4ಶ್ರೀಮನ್ಮಹಾಮಂಡಳೇಶ್ವರಂಕೀರ್ತ್ತಿದೇವರಸರುಂಶ್ರೀಮನ್ಮಹಾಮಂಡಳೇಶ್ವ
5ರಂಉದ್ಧರೆಯಯೆಕ್ಕಲರಸರುಂಶ್ರೀಮನ್ಮಂಡಳಿಕಬಮ್ಮಣ್ಣನನುಶ್ರೀಮನ್ಮಹಾಮಂ
6ಡಳೇಶ್ವರಂಜಗದೇವರಸರಮೇಲೆದಂಡುವೇಳಲುಸಕವರ್ಷ ೧೦೮೫ ನೆಯಸುಭಾ . . .
7ವತ್ಸರದಭಾದ್ರಪದಬ೧ ವಡ್ಡವಾರದಂದುಕಾದುತಿಪ್ಪಾಸಮಯದಲುಕೋಱ
8ಕೋಡಸಿಂಗಿಸೆಟ್ಟಿಯರಿಗಂಶ್ರೀಮದೆಕ್ಕಲರಸರೆಕ್ಕೋಟಿಗಮಸಣಿಯುಂ . .
9ಕೊಂದುತಾಗಿ ॥ ಮಂದಿದಿರಾನ್ತಮಾರ್ವ್ವಲಮನ . . . .

10 ಯ್ಯಗಲಿಮಸಣಂಕಡಂಗಿಪೊಣರ್ದ್ದೆಚ್ಚರಪೋಗದೆಸುತ್ತಮುತ್ತಲಂಪಲ . . . .
11 . ಕುತ್ತಿಕೆರಳಿಂಡೆಱನಿಂಡೆಯನಾಡಿಸುತ್ತಲಂತೊಲಗದನಿಂದು ತಱಿತ್ತಱಿದುಮ
12 ಚ್ಚಿಸಿದಂಸುರಕನ್ನೆಯಕ್ಕರ್ಳೆ ॥ ಅನ್ತು ಕಾದಿಪಲರಂಕೊಂದುಮಸಣಂಸುರಲೋ
13 ಕಪ್ರಾಪ್ತನಾದೊಡವರಣ್ಣಂಮಲೆಯಬಂಮಿಸೆಟ್ಟಿಗಳಾತಂಗೆಪರೋಕ್ಷವಿನೆಯ
14 ಮಂಮಾಡಿಕಲ್ಲನಿಱಿಸಿದರು । ಜಿತೇನಲಭ್ಯತೇಲಕ್ಷ್ಮೀಮೃತೇನಾಪಿಸು
15 ರಾಂಗನಾಕ್ಷಣಯುಧ್ವಂಸನೀಕಾಯೇಕಾಚಿಂತಾಮರಣೇರಣೇ ।

(ಮುಂದೆ ಕಾಣುವದಿಲ್ಲ)

178

ಅದೇ ಸ್ಥಳದಲ್ಲಿ ೫ನೇ ವೀರಕಲ್ಲು.

ಪ್ರಮಾಣ 4′ 6″ × 1′ 8″.

1 ಸ್ವಸ್ತಿಮತುಕಾದಂಬಚಕ್ರವರ್ತಿಮಲ್ಲಿದೇವರಸರುಪೃಥ್ವೀರಾಜ್ಯಗೆಯ್ಯುತ್ತ
2 ಮಿರೆಸಕವ(ತ್ಸ)ರುಸಸಾಸಿರದನೂಱನಾಲ್ವತ್ತೇಳನೇಪಾರ್ಥಿವ
3 ವಸಂತ್ಸರದವೈಸಾಖಶುಧವಸಮಿಸುಕ್ರವಾರದಂದು ಉದ್ಧ
4 (ರೆ)ಯಲ್ಲಿಆರಿಯನಾಕ್ಕಕಮ್ಮಾರನಿದುಕೊಱಕೋಡಂಪಾಯಿ
5 ದತ.ಱುವಂಕೊಳುವಲ್ಲಿ ॥
6 ಭಯಮಿನಿಸಿಲ್ಲದೆಕವಿದಾಯರಿಬಲಮುಂಮಲಿಸೆಟ್ಟಿಯ
7 ಗ್ಗ್ರಸುತಂಕಾಳೆಯನಿಱಿದುತಗುಳದು ತಾನುಂ
8 ಪಯುಮಂಪಡೆದಮರಪತಿನಿಂಸಕ್ಕಾದನು ॥

179

ಅದೇ ಹೋಬಳಿ ಕುಪ್ಪಗಡ್ಡೆ ಗ್ರಾಮದ ರಾಮೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ದಕ್ಷಿಣಕಡೆ ನೆಟ್ಟಿರುವ ಕಲ್ಲಿನಲ್ಲಿ.

1 ಶ್ರೀನಮಸ್ತುಂಬ್ರಜಟಾಜೂಳಬಾಳಪಲ್ಲವಧಾರಿಣೇಬ್ರಹ್ಮಾಂಡಮಂಡಪಾರಂಭಪೂರ್ಣಕುಂಭಾಯಶಂಭವೇ ।
2 ಶ್ರೀರಾಮೇಶ್ವರದೇವಂಶ್ರೀರಾಮೇಶ್ವರರನೊಲ್ದುರಕ್ಷಿಕೆಕೀರ್ತ್ತಿಶ್ರೀರಾಮೇಶ್ವರರಂಮಾಕ್ಕೆಶ್ರೀರಾಮೇಶ್ವರರನುದಿತದಿನಕೃಪ್ರಭರ ॥ ಕಡೆಯಿಲ್ಲದಾಗಸಕ್ಕೇ
3 ನೊಡಲಾದುದೊಪೇಳಿವೆನ್ಸಜಾಂಡಕ್ಕಿದುದಲ್ತೊಡವೆನಿಸಮಧ್ಯಲೋಕಂಕಡುಚೆಲ್ವಾಯ್ತುದಱೊಳಾದ್ಯಜಂಬೂದ್ವೀಪ ॥ ಅದ
4 ನಾದಂಸುತ್ತಿತುಗ್ರಸ್ಫುಟಕಮಠಲುಠಲ್ಲೋಠಪಾಠೀನನಕ್ರಕ್ರದಕೌಳೀನಾಳಗರ್ದ್ದಗ್ರಹಣಪರಸರಮ್ಯಕ್ಛಿಕುಂಭೋದ
5 ಜಂಭಿಪ್ರದಮಾರೀಭೂರಿಸಂಚಾರಣಚಳಿತಪಳಿೋಡ್ಡೀನಫೇನಪ್ರತಾನಾಸ್ಪದತುಂಗೋದ್ವೃತ್ತರಂಗಪ್ರಬಳಘುಳುಘುಳಧ್ವಾನರೌದ್ರಂ ಸಮುದ್ರ.
6 ಆಜಂಬೂದ್ವೀಪದನಟ್ಟನಡುವೆ ॥ ಸುರಗಿರಿಕಣ್ಗೊಳಿಸಿಕ್ಕುಂಭರತಕ್ಷೇತ್ರಂದಲದರತೆಂಕಣದೆಸೆಯೊಳಾಪರಿವಡಿಯಿನದಱತೆಂಕಲುಕ
7 ರಮೊಪ್ಪ(ಂ)ವುಬಲ್ತೆನೆಗಳ್ದಕುನ್ತಳವಿಷಯ ॥ ಆಕುನ್ತಳವಿಷಯದೊಳು ॥ ಸ್ವಸ್ತಿಸಮಸ್ತಭುವನಾಶ್ರಯಶ್ರೀಪೃಥ್ವೀವಲ್ಲಭಂಮಹಾರಾ
8 ಜಾಧಿರಾಜಂಪರಮೇಶ್ವರಂಪರಮಭಟ್ಟಾರಕಂಸತ್ಯಾಶ್ರಯಕುಳತಿಳಕಂಚಾಳುಕ್ಯಾಭರಣಂಶ್ರೀಮತ್ತ್ರಿಭುವನಮಲ್ಲವೀರಸೋಮೇಶ್ವರದೇವರ
9 ರಾಜ್ಯಮುತ್ತರೋತ್ತರಾಭಿವೃದ್ಧಿ(ಂ)ಯಿಂಸಲುತ್ತಮಿರೆ ॥ ತತ್ಪಾದಪದ್ಮೋಪಜೀವಿ ॥ ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವ
10 ರಂಬನವಾಸೀಪುರವರಾಧೀಶ್ವರಂಜಯನ್ತೀಮಧುಕೇಶ್ವರದೇವಲಬ್ಧವರಪ್ರಸಾದಂಮೃಗಮದಾಮೋದತ್ರಿಯಕ್ಷಕ್ಷ್ಮಾಸಂಭವಚತು
11 ರಾಸೀತಿನಗರಾಧಿಷ್ಠಿತಲಲಾಟಲೋಚನನುಹಿಮವದ್ಗಿರೀಂದ್ರರುಂದ್ರಶಿಖರಸಂಸ್ಥಾಪಿತಸ್ಫಟಿಕಶಿಳಾಸ್ತಂಭಪೆರ್ಮೆಟಿತತೂರ್ಯ್ಯನಿ
12 ರ್ಘೋಷಣಂಶಾಖಾಚರೇಂದ್ರಧ್ವಜವಿರಾಜಮಾನಮಾನೋತ್ತುಂಗಸಿಂಹಲಾಂಛನಂದತ್ತಾತ್ತಿಕಾಂಚನಂಸಮರಜಯಕಾರಣಂಮೊಕ್ಕೊಳ್ವೆಗಂಡಂಕದ

13 ನಪ್ರಚಂಡಂಜಗದೊಬ್ಬರ್ಗಂಡಪ್ರತಾಪಮಾರ್ತ್ತಂಡಂಸತ್ಯರಾಧೇಯಂಶರಣಾಗತವಜ್ರಪ್ರಾಕಾರಕಲಿಗಳಂಕುಶನುಮಪ್ಪಶ್ರೀಮತ್ಕಾಮದೇವರಸರುಬ

14 ಸಮಾಸಿಸಂಸಿಚ್ಛಾಸಿರಮುಮಂಹಾನುಂಗಲಯ್ನೂಱುಮ(ಂ)ನುಭಯಸಾಮರ್ತ್ಥ್ಯದಿಂದುಷ್ಟನಿಗ್ರಹಶಿಷ್ಟಪ್ರತಿಪಾಲನಂಮಾಡಿಸುಖಸಂಕಥಾ(ಂ)ವಿನೋದದಿಂರಾಜ್ಯಂಗೆ

15 ಯ್ಯುತ್ತಮಿರ್ದ್ದರ್ನ್ನಾತನವಂಶವೀರ್ಯ್ಯಪ್ರತಾಪಾದಿಗಳೆನ್ತೆ[ಂ]ದಡೆ ॥ ಪರಮಾನಂದದೆದೇವಕೋಟಿಸಹಿತಂಶ್ರೀಕಂಠನಿರ್ಪ್ಪಂಜಗದುಗುರುಹಿಮ್ಯಾದ್ರಿ

16 ನಿಕುಂಜರಂಜಿತಕದಂಬೋದ್ಯಾನದೊಳ್ ಲೀಲೆಯಿಂಹರನಂಪೂಜಿಪುದೆಂದುತಂದೆಬೆಸಸಲುಸದ್ಭಕ್ತಿಯಿಂಗೌರಿಶಂಕರಪಾದಾಂಬುಜಗೆ

17 ಳಂಪಜಪಿನಿಂದಾರಾಧಿಸುತ್ತಿರ್ಪ್ಪನ ॥ ಅನ್ತಾಸಮಯದೊಳ್ಪುಷ್ಪವಸನ್ತೋದಯಮಾಗೆಗಿರಿಜೆಯುಂನೋಡೆಭವಂಕನ್ತುಶರಂಮನಮಂನಡಲನ್ತಾಕ್ಷಣಮಾದು

18 ದಂತ್ಯಧಾತುಸ್ಖಲನ ॥ ಪರವೀರ್ಯ್ಯವಾದಮುಗಿಲುವ್ಪರ್ರೆಯೊಳ್ ನಿಟಿಳಾಂಬಕಂಚಕತುಭ್ಯರ್ಜ(ಂ)ನೊರ್ವ್ವಂಗಿರಿಶಾಂಶಿಭೂತಂಬನ್ದುರರೂಪಂಪುಟ್ಟಿದಂ

19 ಮನೋಮುದದಿಂದ ॥ ಅನ್ತುರುತರತೇಜನಪ್ಪಕುಮಾರನನೀಶ್ವರಂನೋಡಿಹರ್ಷಾನ್ತಃಕರಣನಾಗಿತದಪತ್ಯನಧಾತ್ರೀಶ್ವರನಾಗಂದುಪರಸುವುದುಮಾ

20 ತಂಸ್ಮರಹರಧರಾಸಂಜಾತನಪ್ಪುದಱಿಂಹರಧರಣೀಪ್ರಸೂತನೀಕದಂಬವನಮಧ್ಯಸಂಭೂತನಪ್ಪುದಱಿಂಕಾದಂಬರುದ್ರನುಂಲೀಲಾಸಂಚಾರಮಯೂರಬಂ

21 ಧಸಂಜಟ್ಟಂನ್ನಜಟ್ಟಿಯಾಚ್ಛುರಿತಗಾತ್ರನಪ್ಪುದಱಿಂಮಯೂರವರ್ಮ್ಮನುಮೆಂಬಿವುಮೊದಲಾಗಭಿಧಾನಶತಂಗಳಂತಾಳ್ದಿನಿಖಿಳರಾಷ್ಟ್ರಕಂಟಕರಂತೂಳ್ದಿಜಯಂ

22 ತೀಪುರದೊಳ್ಸುಖದಿಂರಾಜ್ಯಂಗೆಯ್ಯುತ್ತಮಿರಲಾತಂಮೊದಲಾಗೆಪ್ಪತ್ತೇಳ್ಸಿಂಹಾಸನಸ್ತರೊಳಗೆ ॥ ಶಾನ್ತನಿಪ್ಪಂಗುದಿಯಿಸಿದಸ್ವರ್

23 ಸ್ತುತಿಗಳಕೀರ್ತ್ತಿರ್ಭೂಪನುಂತೈಲಪನುಂಕಸ್ತುನಿಭರಮುಳಚರಿತರನಂನ್ತಗುಣಸ್ವರ್ವರಕಣ್ಮಾಚಿಭೂರ್ತಳದೊಳ್ ॥ ಆಕೀರ್ತ್ತಿನೃಪನಪಾತ್ರಪ್ರಾಕಟಮ

24 ಹಿಮಪ್ರಚಂಡರಪ್ರತಿಮಭೂರ್ಲೋಕಸ್ತುತಕೀರ್ತಿವರಶ್ರೀಕೀರ್ತಿನೃಪಾಳಕಾಮಭೂಭುಜನೆಂಬರು ॥ ಅನ್ತಿಪ್ರತಾಪಿಗಳೆನಿಪ್ಪಕುಮಾರರ್ಪುಟ್ಟಿ ॥ ಕಾದಂಬ

25 ರಾಜ್ಯಲಕ್ಷ್ಮಿಯನಾವರ್ಕೈಕೊಂಡುರಿಪುಗಳಂಪೆಂಕೊಂಡಾಹ್ಲಾದಂಜನಕೊದವುವಿನಂಮೇದಿನಿಯಂಕೀರ್ತಿನೃಪತಿಪರಿಪಾಲಿಸಿದ ॥ ತದನನ್ತರಮಿಮ

26 ಹಿಗಭ್ಯುದಯಂಪಿರಿದಾಗೆಕಾಮಭೂಪಂಗೆಜಗದ್ವಿದಿತಯಶೋರಮಣಂಗಾದುದುಸಲೆಸಾಂಮ್ರಾಜ್ಯಪೂಜ್ಯಲಕ್ಷ್ಮೀಪಟ್ಟ ॥ ಆತನಪ್ರಭಾವ

27 ಮೆನ್ತೆಂದಡೆ ॥ ಇವನಾವಂಗವಸಾಧ್ಯನೆನ್ದುಪಗೆವರ್ತ್ತಂತಮ್ಮೊಳಾಸಂಕಿಸಲುನೆವದಿಂದಂಪರಿಯಿಟ್ಟುಮುತ್ತಿಮುಱಿ(ಂ)ದಂವೀರಾರಿದುರ್ಗ್ಗಂಗಳಂಕವರ್ದ್ದಂಕಪ್ಪವ

28 ನಿಕ್ಕದುದ್ಧತರದೇಶಾಶೇಶಕೋಶಂಗಳಂಬಿವನಾದಂಕಲಿಕಾಮಭೂಪನದಟುಜ್ಜ್ವೇಯಯ್ಯಬಾಹ್ವಿರ್ಪ್ಪಂಬಿನ ॥ ಗಂಡರತೀರ್ತ್ತನಂಕಲಿಗಳಂಕುಶನಂಕದನ

29 ತ್ರಿನೇತ್ರನಂಚಂಡಮರೀಚಿತೇಜನನರಾತಿವಧೂವಿವಿಧಪ್ರಕಾರಸನ್ಮಂಡನಹರನಂಗುಣಕರಣ್ಡನನುದ್ಧತಕಾಳದಂಡನ[ಂ]ಮಣ್ಡಳಿಕಾಗ್ರಗಣ್ಯನನದೇವ್ರೊಗಳ್ವೈಕಲಿಕಾ

30 ಮಭೂಪನ ॥ ಮಿಗೆತೇಜಂಪೆಱಗಾರ್ಗೆಸ್ಥೈರಿಸುವನೇಮಿತ್ರಂದಿಟಕ್ಕೆಂದುಭಾನುಗೆ ಸೈರಿಪ್ಪನುದಾತ್ತದಾನಗುಣಮಂಸನ್ತಾನಮಂದಳ್ಕಱಿಂನೆಗಳ್ದಕಲ್ಪಕುಜ

31 ಕ್ಕೆ ಸೈರಿಸುವನುತ್ತುಂಗತ್ವಮಂ ಗೋತ್ರಮೆಂದಗದೊಳ್ಸೈರಿಪನುಂತೆಸೈರಿಸುವನೇಕಾದಂಬಕಂಠೀರವನೆ ॥ ನಿರುತಂಶ್ರೀಸುತನೆಂದೊಡಂಚರಿಯಿಪೇ

32 ಳ್ಪಾಭಾಗ್ಯಸಾಮ್ರಾಜ್ಯಮೀಧರಣೀಸಂಸ್ತುತಕೀರ್ತ್ತಿದೇವನನುಜಂಗೇಂಚೋದ್ಯಮೋ ರೋದಸೀಭರಿತಖ್ಯಾತಿಕದಂಬರುದ್ರನೆನದಲುವಿದ್ಯುಟ್ಪುರೋಭೇದನಂ

33 ಪಿರಿದೇಂಭಾವಿಸೆಕಾಮಭೂಮಿಪತಿಗೀವಿಶ್ವಂಭರಾಭಾಗದೊಳ್ ॥ ಧರೆಗುರುಳೆತಂಮತಲೆಗಳ್ಕರಿಶಿರಮಂನಿಜಕಬನ್ಧದೊಳ್ಪತ್ತಿಸಿಬೀರರತಂಡಂಗೊಱವರೆ

34 ವ್ರೊಲುಕರಮೆಸದಕ್ಕಾರ್ಮಭೂಪನಿಱಿದಾಹವದೊಳ್ ॥ ಖರದ[ಂ]ಡಂಸರಸಿಜದೊಳ್ವಿರಹಂಚಕ್ರಹ್ವಯಂಗಳೊಳ್ನಿಶ್ತ್ರೀಜಂಪರಭೂಪಾಳರೊಳಲ್ಲದೆನಿರವದ್ಯಮಿ

35 ದಿಲ್ಲಕಾಮನೃಪನಾಳ್ವೆಳೆಯೊಳ್ ॥ ವೊಱೆಯೆಂಬುದುಬಾಂದವರೊಳ್ತೊಱೆಯೆಂಬುದುನದನದೀನಿಕಾಯದೊಳಾದಂಸೆಱೆಯೆಂಬುದುಜೂದುಗಳೊಳ್ಪೆಱತೆಡೆ

36 ಯೊಳಿಲ್ಲಕಾಮನೃಪನಾಳ್ವೆಳೆಯೊಳ್ ॥ ಮತ್ತಮಾರಾಜ್ಯಕ್ಕೆ ಲಕ್ಷ್ಮೀದೇವತೆಎನಿಸಿದಕಾಳಲದೇವಿಯರ ಮಹಾತ್ಮ್ಯಮಂಪೇಳ್ವಡೆ ॥ ಮನಸಿಜಮಂತ್ರದೇವತೆಯೊಮೇಣು

37 ಸಚಿಯೋಶತಪತ್ರನಾಭನಂಗನೆಯೊಚತುರ್ಮ್ಮುಖಪ್ರಿಯಯೊಶಂಕರನೋಪಳೊಪೇಳ್ವೆ[ಂ]ಬವ್ರೋಲನೂಪಮರೂಪಸದ್ವಿಭವಮೂರ್ಜ್ಜಿತಲಕ್ಷ್ಮಿ

38 ಮಹಾವಿವೇಕವೊಳ್ಪಿನಸುಬಗೆಂಬಿವೆನ್ದುಮೆಱದಿಪ್ಪವೃಕಾಳಲದೇವಿರಾಣಿಯೊಳ್ ॥ ಸನ್ತತಿಗಳ್ಸಮಂತೆಸೆಯೆಕಾಳಲದೇವಿಗೆಪುಟ್ಟಿರಂಜಿಪಕ್ಕರನ್ತನಿಭರ್ಸ್ಕ

39 ಲಕ್ಷ್ಮಣರತಿಪ್ರಬಳಕ್ಕಲಿಗಳ್ವಿದಗ್ಧರ(ಂ)ತ್ಯಂತಪರಾಕ್ರಮರುರ್ಬ್ಬಗರಪ್ರತಿಮರುರ್ಜನರ್ಸಮಸ್ತಭೂಕಾನ್ತರೆನಿಪ್ಪಬರ್ಮ್ಮನೃಪನೋಮಮಹೀಭುಜಮಲ್ಲಭೂಭು

40 ಜರು ॥ ಅವರಮಹಾಪ್ರಧಾನರಮಹತ್ವವೆಂತೆಂದಡೆ ॥ ಪರಹಿತದೊಳ್ಸಾಹಸದೊಳ್ನಿರುಪಮವೆನಿಸಿಪ್ಪಮಂತ್ರಶಕ್ತಿಯೊಳಾಖೇಚರನಕಿರೀಟಿಯಗುರುವಿನ

41 ದೊರೆಯೆನಿಪಂವಾಸುದೇವದಂಡಾಧೀಶ ॥ ಭೂಸುರತೇಜನನಧಿಕವಿಳಾಸನನುತಕೃಷ್ಣಧರ್ಮ್ಮಚಿತ್ತನನೊಲವಿಂದೀಸಕಳಜನಂಪೊಗಳ್ಗುಂಕೇಸವನಾಯಕನ

42 ನರ್ತ್ಥಿವರದಾಯಕನ ॥ ಕದನಪ್ರಚಂಡನತಿಬಳನದಟರಜವನಹಿತವನದವಾನಳನಿವನೆಂಬ ದುಲೋಕಂಮುದದಿಂದಂಮದುಕೆಯಮಂಡಳಿಕನಂಪ್ರಚಂಡೋದಯ

43 ನ ॥ ಪರಹಿತವೊಳ್ಪರವದ್ಯಸನದೊಳ್ಪರವಿನ್ತದೆನಿಪ್ಪಧರ್ಮ್ಮದೊಳ್ನಿರುಪ[ಮ]ಮಂತ್ರಶಕ್ತಿಯೊಳ್ನೋಪ್ಪಡೆಪೆರ್ಗ್ಗಡೆರಾಘವಂವಿಯಚ್ಚರಪತಿಯೊಳ್ನದೀತನೆಯನೊಳ್ಹ

44 ರಿನನ್ದನನೊಳ್ಸುರೇಜ್ಯನೊಳ್ದೊರೆಯೆನಿಸಿಪ್ಪನೆಂಬಸತ್ಕೀರ್ತ್ತಿಸಮಸ್ತದಿಶಾನ್ತರಾಳದೊಳ್ ॥ ಮತ್ತಂಹರಿಚರಣಸರೋಜಭೃಂಗನುಂಸಾಹಸೋತ್ತುಂಗನು

45 ಮೆನಿಮೆನಿಸಿದಕಾಮರಸನುಂ ॥ ಅರ್ತ್ಥಿಜನಚಿಂತಾಮಣಿಯುಂಸನ್ಧಿವಿಗ್ರಹಿಚೂಡಾಮಣಿಯುಮೆನಿಸಿದಸಂಪೂರ್ಣ್ಣಸುಪ್ರೈರಿಮಣ್ಡಳಿಕಭೈರವನೆನಿಸಿದಭೈರ

46 ಮನುವೆರಸುಸುಖದಿಂರಾಜ್ಯಂಗೆಯ್ಯುತ್ತಮಿರೆ ॥ ಬನವಸೆನಾಡಿಂಗಿದುತೊಡವೆನಿಸಿದ್ದುದುಕುಪ್ಪಗೆಡ್ಡೆವಿಪ್ರಾವಳಿಯಿಂಧನಧಾನ್ಯವೃದ್ಧಿಯಿಂಚೆ

47 ಲ್ವಿನಕಣಿಯೆನಿಪ್ಪದೇವಕುಳಸಂಕುಳದಿ ॥ ಮತ್ತಮಾಗ್ರಾಮದಾದಿಯಂಪೇಳ್ವಡೆಕೃತಯುಗದೊಳ್ಪುಷ್ಪಾವತಿ ತ್ರೇತೆಯೊಳ್ಪುಷ್ಪ

48 ನಗರದ್ವಾಪರದೊಳ್ಪ್ರಬ್ಬಿಕಕಟಿಕಲಿಯುಗದೊಳ್ಕುಪ್ಪಗೆಡ್ಡೆಯಿಂದಿಂತುಪೆಸರ್ಗಳೆಸವುತಿರ್ದ್ದವಲ್ಲಿ ॥ ಧರೆಯೆಲ್ಲಂನವಗಂಧಶಾಳಿವನದಿಂದಂರಮ್ಯಮಾದಂಸರೋ

49 ವರಮೆಲ್ಲರಿಕುಮುದೋತ್ಪಳಾಂಬುರುಹದಿವ್ಯಾಮೋದದಿಂಸೇವ್ಯಮುರ್ವ್ವಿರುಹಾನೀಕಮುಮೆಲ್ಲ ಮುತ್ತಮಫಳಭಾರತಂಗಳಿಂರಯ್ಯಮಂನರರೆಲ್ಲಂಸಚರಿ

50 ತ್ರರೂರ್ಜ್ಜಿತಯಶಃಪೂಱಪ್ಪವತೀಗ್ರಾಮದೊಳ್ ॥ ಸರ್ವ್ವವಿದರ್ಸಮಸ್ತವಿಬುಧಾಶ್ರಯರಾಶ್ರಿತಕಲ್ಪಭೂರುಹರುಪರ್ವ್ವತಧೈರ್ಯ್ಯರಗ್ರಜನ್ಮಾಗ್ರಣಿ

51 ಗಳ್ಪ್ರಭುಗಳ್ಪ್ರತಾಪಿಗಳ್ಸರ್ವ್ವಜನೋಪಕಾರಿಗಳೆನಿಪ್ಪನೆಗರ್ತ್ತಿಯಿನೊಳ್ಪ್ರವೆತ್ತಸಾಸಿರ್ವ್ವರಪೆರ್ಮ್ಮೆಯಂಪೊಗಳ್ವಡತ್ತಳಗಂಸಲಕುಪ್ಪಗಡ್ಡೆ

52 ಯ ॥ ಅವರೊಳ್ಮನೆಮನೆಯವರೆಂಬವರಮಳಗುಣರ್ವ್ವಸಿಷ್ಠಗೋತ್ರಪವಿತ್ರರ್ಭ್ಭುವನಪ್ರಸಿದ್ಧರವರೊಳಗವಸೀನುತಕೀರ್ತ್ತಿಶಂಕರಂಕರಮೆ

53ಸೆದ ॥ ವಿನೆಯನಿಧಿಶಂಕರಾಯ್ಯರ್ಗ್ಗನತನೆಯಂನಾರಾಯಣಪ್ರಭುಕ್ಷಿತಿನುತನಾತನತನುಜಪರ್ಪ್ವಲರವರೊಳ್ವಿನೆಯಾಂಬುಧಿಬಿಟ್ಟಿ ಮಯ್ಯನೂರ್ಜ್ಜಿತತೇಜ ॥

54ಆಮನುಚರಿತಂಗುಂಜರಸೋಮ್ಮೆಯನತನೂಜಮಧುವಿಮಯ್ಯನತನೆಯಂಸೋಮಪ್ರಭನೀಶ್ವರನೆಂಬಾಮತಿವಮಾನುಕೂರ್ತ್ತಿ ತಂನತನೆಯುಳಸಿತ್ತ ॥

55ಆವಿಷ್ಣುಪ್ರಭುವಿಂಗಂಶ್ರೀವನಿತೆಗಮಮಳಚರಿತರನುಪಮಪುಣ್ಯರ್ಪ್ಪವನತನುಗಳರಾಘವದೇವನುಮಿಾಶ್ವರನುಮೆಂಬಸುತ ರುದಿಯಿಸಿದರು ॥ ಅವ

56ರಮಹತ್ವಮೆನ್ತೆಂದಡೆ ॥ ವಿತತಯಶರ್ಪ್ಪಿಶುದ್ಧಕುಳಸಂಭವರಪ್ರತಿಮರ್ಪ್ಪಚಂಡರುಂನತರುದಿತಾರ್ಕ್ಕತೇಜರುದಿತೋದಿತಪು ಣ್ಯರುದಗ್ರರೂರ್ಜ್ಜಿತ

57ಚ್ಚರ್ತುರಂಚ[ತು]ವರ್ಮ್ಮಬಕುಶ್ರ[ರ]ತಿಪುರಾಣವಿದನ್ಮರ್ತಕಾವ್ಯನಾಟಕಾನ್ವಿತರೆನೆಬಣ್ಣಿಸಲ್ಕಳವೆರಾಮಯ್ಯನಂನೆ[ಗ]ಳ್ದಬಿಮ ಯ್ಯನ ॥ ಹೇಮಗಿರಿಧೈರ್ಯ್ಯನವಿಳಾಶಾ

58ಮುಖವರಕೀರ್ತ್ತಿಧಾಮನಮಳಚರಿತ್ರಂಕೋಮಳಗಾತ್ರಂಬುಧನಿಧಿರಾಮಯಪರ್ಬ್ಬರುವನೆಸೆದನೀವಸುಮತಿಯೊಳು ॥ ಕು ಲದೊ

59ಳುಬಲದೊಳುಪೆಂಪಿನೊಳಲಘುಪರಾಕ್ರಮದೊಳಾಗ್ಗಮಗ್ಗಳಮಿವನೆಂದುಲಿಗುಂಜನಂನುಪುತ್ರಕುಲದೀಪಕನೆನಿಸಿದಿಬಿಮ ಯ್ಯನನೊಲವಿಂ ॥ ಅಂತವರತಿ

60ಮುದದಿಂದಂಸಂತಸುಖದಿಂದಿರಲ್ಕೆಕೋಡಿಯಮಠದಿಂಕನ್ತಹರಂಬರ್ಪ್ಪಂತಿರನಂನ್ತಗುಣಂವಾಮಶಕ್ತಿಮುನಿಪಂಬಂದಂ ॥ ಅಂ ನ್ತವರ್ಬ್ಬಿಜಯಂಗೆಯ್ಯುದುಂಕಂಡಿದಿರೆದ್ದು

61ಶ್ರೀಪಾದವಂದನನುಂಸಂಸ್ಥಾಪಿತೋಚ್ಚಾಸನನುಂಕ್ರಿತಪಾದಪ್ರಕ್ಷಾಳನನುಂದತ್ತಾರ್ಗ್ಘಪಾದ್ಯನುಮುಪಚರಿತೋಪಚಾರನುಮಾ ಗಿಮುಕುಳಿತಕರಂದೇವತಾಪ್ರತಿಷ್ಠೆ

62ಘಳಮಾವುದನಲವರಕಲಿಂಗಪ್ರತಿಷ್ಠೆನಸರ್ವ್ವದೇವಾಪ್ರತಿಷ್ಠೆಕಾಯೆಂಬುದುಶ್ರುತಿಯೆಂದುಮುನಿಮುಖ್ಯನ್ನಿಜನಿವಾಸಕ್ಕೆ ಬಿಜಯಂಗೈಯ್ವುದುಮಿತ್ತಲಿಂಗಪ್ರತಿ

63ಷ್ಠೆಹ್ರಿಷ್ಟಚಿತ್ತನಾಗಿ ॥ ನೆರಪೀಸಭೆಯುಸಪೂಜಾಪರಿಕರನನರಿಯಲಲ್ಲಿಪಡೆದಂಸ್ಥಳಮಂಹರನಂಪ್ರತಿಷ್ಠೆಸಲ್ಕೆಂದುರುತೇಜಂವಿ ಭುಲಲಾಮನೆನಿಸಿದರಾಮ ॥

64ಸಾಸಿರದನೂಱಹಂನುದಾಸಕನ್ರಿಪವತ್ಸರಂಸಲಲುಸಾಮರ್ಪ್ಪಬ್ದಂಲೇಸೆನಿಸೆಜ್ಯೇಷ್ಠಮೆಂಬೊಳ್ವಮಾಸದಸಿತತದಿಗೆಸೋರಿವಾರದೊ ಳೊಲವಿಂ ॥ ವಿಭವಂ

65ನೆರಪೀವಿದ್ವತ್ಸಭೆಯಂಶ್ರೀವಾಮಶಕ್ತಿಮುನಿಪತಿಸಹಿತಂಶುಭಲಗ್ನವಂಗೋವಿಂದಪ್ರಭುಕುಡೆಲಿಂಗಪ್ರತಿಷ್ಠೆ ಮಾಡಿದರವಗ್ಗ ಳು ॥ ಅನ್ತುಸುಮುಹೂರ್ತ್ತ

66ದೊಳುಸುಪ್ರತಿಷ್ಠೆಯಂತದುಕ್ತಿಯಿಂಮಾಡಿಸಮಸ್ತಜನಮಂಸುವರ್ಣ್ಣದಿಂದಿಬಾಶ್ಯಂನೆದಿಂತಣಿಪಲವರ್ದಿಬ್ಯಾಶೀರ್ವಚನರಚ ನೆ[ಗ]ಳಿಂಪರಸಲಾದೇವಂಗೆರಾಮೇಶ್ವ

67ರದೇವರೆಂಬಭಿಧಾನಂಮಾಡಿಪೋಪುದುಮಿತ್ತಲಾರಾಮಯ್ಯಂಸಮುತ್ತುಂಗದೇವಾ[ಯ]ತನಮಂಮಾಡಿಸುಖಮಿರ್ಪ್ಪದುಮ ದಂಪೆಗ್ಗಡೆರಾಮಯ್ಯಂಕಡು

68ಪುಳಕಿತಗಾತ್ರನಾಗಿನಿಜಸ್ವಾಮಿಕಾಮಭೂಪಂಗಱಿಪಲದಂಕೇಳ್ದರಸಂಹರ್ಷೋತ್ಕರ್ಷನಾಗಿತದ್ದೇವತಾದರ್ಶನನಿಮಿತ್ತಂಕು ಮಾರರುಂನಿಜಸಚಿವರುಂಬೆರಸು

69ಕುಪ್ಪಗಡ್ಡೆಗೆಬಂದಾದೇವನಂನೋಡಿಸಂನ್ತೋಶಂಬಟ್ಟುತ್ತರಾಯಣಸಂಕ್ರಾನ್ತಿಆದಿತ್ಯವಾರಅಮವಸೆವ್ಯತೀಪಾತದಂದುರಾಮೈ ಯ್ಯಹೆಬ್ಬಾರುವನುಮಂಣಬಿಮಯ್ಯ

70ನುಮಂಕರದಾದೇವರಂಅಂಗಭೋಗಕಂರಂಗಭೋಗಕಂನಿತ್ಯನಿವೇದ್ಯಕ್ಕಂಮಹಾದಾನಕ್ಕಮೆಂದು ॥ ರಯ್ಯಮೆನಿಪ್ಪೀಧರೆಜೇ ಯಯ್ಯನುತಂಪೊಗಳೆನೆ[ಗ]ಳ್ದಕಾಮಮ

71ಹೀಶಂಕಯ್ಯಡಿವಳ್ಳಿಯನಾರಾಮೈಯ್ಯನರಾಮೇಶ್ವರಕ್ಕೆಕೊಟ್ಟಂಮುದದಿ ॥ ಮನೆಯಂಮೇಲಾಳಿಕೆಮತ್ತನೆಯವಣದಾಯಸುಂ ಕದರ್ಶನಮೆಂಬೀಬಿಂನಣದತೆಱೆಯಿನದಱಿಒಳಪ

72ನೆನಿತಪ್ಪಡಮುವಂಶಿರಿಗೊಸೆದಿತ್ತ ॥ ಇತ್ತೀಧರ್ಮ್ಮಮನಾಚಂದ್ರಾರ್ಕ್ಕಬರಸಲ್ಗೆಂದುಸತ್ಯರಾಧೇಯಂಕಾಮಭೂಪಂಕ್ರಿತಾರ್ತ್ಥ ನಾದ ॥ ರಾಮೆಯನನ್ತದನೆಕ್ಕಲಭೂಮಿಾ

73 ಶಂಗಱಿಪಿದೇವದೇವಪಾಲಿಸುವಡದಂನೀಮನವೊಲ್ದೀವುದೆನಲುಕಾಮಗ್ಗ್ಗದಿನಾನಿ‍್ರಪೋತ್ತಮಂಕೂತ್ರ್ತಿತ್ತ ॥ ಇದನೊಲ್ದು
ಪಾಲಿಪಗ್ಗ್ಗಭ್ಯುದಯಮ . . . . ಸತ್ಸುತರುಂ
74 ಮುದಮುಮರುಜತೆಯುವತಿಸಂಪದಮುಂದೀಗ್ರ್ಘಾಯುವಕ್ಕುಮಿದುಪರಮಾತ್ಥ್ರ ॥ ವೃತ್ತಮಚಿತ್ತರಪ್ಪವರ್ಗಳಿತ್ತಡೆಮುಂಸ
ಲುತಿದ್ದ . . . . . . ನತ್ರಿಸಪ್ತಕುಲೋ
75 ದ್ಭವರಪ್ಪಮರ್ತ್ಯರತ್ಯುತ್ತಮರಾದಡಂನರಕದೊಳುನಮೆವ(ಂ)ರ್ವ್ವಹುಕಾಲವಾಖಳಂಸತ್ತುಸಹಸ್ರಕೋಟಿನರಕಂ . . . .
ಟ್ಟುವಂ ॥ ಒ
76 ದವಿದಕುಪ್ಪಟೂರಸುಜನಾಗ್ರಣಿಚಿಂಮರವಾಸುನುಂಸದುಗುಣಯುಕ್ತನಪ್ಪಕವಿದೊಡ್ಡರನಾಚಯನುಂಸಮಸ್ತಸ . . . . . .
. . ಗ್ಯರಕೇಸ
77 ವದೇವನೆಂಬಿವಮ್ಮ್ರದದೊಳಕೂಡಿಪೇಳ್ದರಿದುಸಲ್ಗುಶಶಾಂಕದಿನೇಶರುಳ್ಳಿನ ॥ ಧರೆರವಿಶಸಿವುಳ್ಳನ್ನಂಸ್ತಿರಮಕ್ಕೀಧಮ್ಮ್ರ . . . .
. . . . ನಿರತಂ
78 ಯುಂದೊಂಗಳನಾದರದಿಂದವೊಳ್ಕೆಮಂಗಳಂ . . ಗವೆಲ್ಲ ॥ ಸ್ವದತ್ತಂಪರದತ್ತಂವಾಯೋಹರೇತಿವಸುಂಧರಾಂಶಷ್ಟಿರ್ವ್ವರ್ಷಸ
[ಹ]ಸ್ರಾಣಿವಿಷ್ಟಾಯಾಂಜಾ
79 ಯತೇಕ್ರಿಮಿ ॥ ದಾನಂವಾಪಾಲನಂವಾಪಿದಾನಾತ್ಶ್ರೇಯೋನುಪಾಲನಾತ್ಸ್ವಗ್ಗ್ರಮವಾಪ್ನೋತಿಪಾಲನಾದಚ್ಯುತಂಪದಂ ॥

180

ಅದೇ ದೇವಸ್ಥಾನಕ್ಕೆ ದಕ್ಷಿಣ ಅಂಗಳದಲ್ಲಿ ನೆಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 5′ × 2′.

1 ಸ್ವಸ್ತಿಶ್ರೀಮತುಕಾದಂಬಚಕ್ರವರ್ತ್ತಿಮಲ್ಲಿದೇವವರುಸ
2 ದಆಱನೆಯುಸ್ವಭಾನುಸಂವತ್ಸರ
3 ದಫಾಲ್ಗುಣಸುಧದ್ವಾದಸೀಸೋ
4 ಮವಾರದಂದುಶ್ರೀಮದನಾದಿ
5 ಯಗ್ರಹಾರಂಕುಪ್ಪಗೆಡೆಯಕರುವಗಸುಗಜೇಯು
6 ಕೇತಮನವಗರಾಮಂಕಾಳೆಗದೊಳುಹಲಬರಂ
7 ಕೊಂದುಸುರಲೋಕಪ್ರಾಪ್ತನಾದನು ॥ ಗುರುಸರೆ
(ಮುಂದೆ ಬರವಣಿಗೆ ಇಲ್ಲ.)

181

ಅದೇ ಅಂಗಳದಲ್ಲಿ ನೆಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 2′ 4″ × 1′ 6″.

1 ಶ್ರೀಮದ್ರಾಜಾಧಿರಾಜರಾಜಪರಮೇಸ್ವರತ್ರಿ
2 ಯಂಬಕದೇವರದಿಬ್ಯಶ್ರೀಪಾದಪದ್ಮಾರಾಧಕನುಮಪ್ಪ
3 ಶ್ರೀವೀರಮಾದರಸವೊಡೆಯರುಸುಖಸಂಕಥಾವಿನೋದ
4 ದಿಂರಾಜ್ಯಂಗೆಯ್ಯುತ್ತಮಿದ್ದ್ರಲ್ಲಿಅವರತನ್ಮಂತ್ರಿ ಉಡೆಯಂ
5 ಣವೊಡೆಯರಮನೆಯಯೆಡನಾಡಸುಂಕಾಧಿಕಾರಿಬೀರರ
6 ಸರುಸ್ವಸ್ತಿಶ್ರೀಜಯಾಭ್ಯುದಯಶಾಲಿವಾಹನಶಕವರ್ಷ
7 ೧೪೧೪ ನೆಯಪ್ರಜಾಪತಿಸಂವತ್ಸರದಅಷಾಢ
8 ಬ ೧ಂಸೋ।ಕುಪ್ಪಗಡೆಯಶ್ರೀರಾಮನಾಥದೇವರಿಗೆ
9 ಮಧ್ಯಾನ್ನದವೊಂದುಹೊತ್ತಿನಧೂಪದೀಪನಯ್ವೇದ್ಯತಾಂ
10 ಬೂಲಕ್ಕೆವೊಂದುಕಬ್ಬೆಲಮಗ್ಗದೆಱಿಮುದ್ರೆಸಾ
11 ವಂತಿಕೆಸಹಗ ೬/೬ ಒ ಹಣವಮಾಚಂದ್ರಸೂ
12 ರ್ಯ್ಯರುಳ್ಳಂನಬರಯಿಧಮ್ಮ್ರವನುಪಾಲಿಸಿಬ
13 ಹೆಉಮುಂದೆಆರೊಬ್ಬರೂಯಿಧಮ್ಮ್ರವ
14 ಪಾಲಿಸಿಬಹುದುಬಾರದೆಯಿದ್ದರೆ ವಾರಣಾ
15 ಸಿಯಲಿಕಪಿಲೆಯಕೊಂದದೋಶಕ್ಕೆಹೋ
16 ಹರು ॥ ಸ್ವದತ್ತಪರದತ್ತಂವಾಯೋಹರಂತಿವ
17 ಸುಂಧರಾ । ಸಷ್ಟಿರ್ವ್ವರುಷಸಹಸ್ರಾಣಿ
18 ವಿಷ್ಠಾಯಾಂಜಾಯತೇಕ್ರಿಮಿಃ ॥ ಮಂಗಳ
19 ಮಹಾ ಶ್ರೀ ಶ್ರೀ ಶ್ರೀ

182

ಅದೇ ಗ್ರಾಮದ ಆಗಸೇಬಾಗಲ ಬಳಿ ಬೇಲಿಯ ಬಳಿ ನೆಟ್ಟಿರುವ ಕಲ್ಲಿನಲ್ಲಿ.

ಪ್ರಮಾಣ 4′ × 1′ 4″.

1 ಸ್ವಸ್ತಿಶ್ರೀಜಯಾಭ್ಯುದಯಶಾಲಿ
2 ವಾಹನಶಕ೧೪೨೨ ನೆಯವಿಕಾ
3 ರಿಸಂವತ್ಸರಆಶಾಡಬಹುಳ ೧ಂ ಗುರುವಾರ
4 ದಲುವೀರರಉಳನಾಯಕನುಕುಪಗಡೆ . .
5 ರಲ್ಲಿಕಾದಿಮಡಿದನೂವೀರಗಲ್ಲು

183

ಕುಪ್ಪಗಡ್ಡೆ ಅಗ್ರಹಾರದ ತಾಮ್ರಶಾಸನ.

೧ನೇ ಪತ್ರದ ಹಿಂಭಾಗ.

[1]ಜಯತ್ಯಾವಿಷ್ಕೃತಂವಿಷ್ಣೋರ್ವ್ವಾರಾಹಂಕ್ಷೋಭಿತಾರ್ಣ್ನವಂದಕ್ಷಿಣೋಂನತದಂಷ್ಟ್ರಾಗ್ರವಿಶ್ರಾಂ. . .
[2]ವನಂವಪು ॥ ಸ್ವಸ್ತಿಸಮಸ್ತಭು[ವ]ನಾಶ್ರಯಂಶ್ರೀಪ್ರಿಥ್ವಿವಲ್ಲಭಂಮಹಾರಾಜಾಧಿರಾಜಂಪ .
[3]ಮೇಶ್ವರಪರಮಭಟ್ಟಾರಕಹಸ್ತಿನಾಪುರವರಾಧೀಶ್ವರಆರೋಹಕಭಗದತ್ತರಿ
[4]ಪುರಾಯಕಾಂತಾದತ್ತವೈರೀವೈಧವ್ಯಪಾಂಡವಕುಲಕಮಲಮಾರ್ತ್ತಂಡಕದನಪ್ರಚಂಡ
[5]ಕಳಿಂಗಕೋದಂಡಗಂಡಮಾರ್ತ್ತಂಡಯೇಕಾಂಗವಿರರಣರಂಗಧೀರಅಶ್ವಪತಿರಾ
[6]ಯದಿಶಾಪಟ್ಟಗಜಪತಿರಾಯಸಂಹಾರಕನರಪತಿರಾಯಮಸ್ತಕತಳಪ್ರ
[7]ಹಾರಿಸಾಮಂತಮ್ರಿಗಚಮಾರಕೊಂಕಣಚಾತುರ್ದಿಶಭಯಕರಚಚ್ಚ್ವಪು
[8]ಟಚಾಚಪುಟಯಿಶ್ವರಮುಖಕಮಲವಿನೀರ್ಗತಶುಧಸಾಳಂಗಬ್ರಹ್ಮವಿ
[9]ಣಾದಿಭರತಶಾಸ್ತ್ರಪ್ರಸೀದ್ಧಅನೇಕಶಾಸ್ತ್ರಪ್ರವಿಣಕೊರಂಟಕವ್ಯಳೀನಾಗಾರ್ಜ್ಜುನಾ
[10]ದಿಮಂತ್ರತ್ರಯಸೀದ್ಧಪ್ರಸಿಧಸಮುದಯನಮಿತಪಾದಾರವಿಂದಅರೀರಾಯಕು
[11]ಲವಿಲಯಕಾಲಾನಲನೀತ್ಯಕರಪರಾಂಗನಾಪುತ್ರಸುವರ್ಣ್ನವರಾಹಲಾಂ
[12]ಛನಧ್ವಜಸಮ(ಸ)ಸ್ತರಾಜಾವಳಿವಿರಾಜೀತಸಮಾಲಂಕ್ರಿತಶ್ರೀಸೋಮವಂಶೋದ್ಭವಶ್ರೀಪ
[13]ರೀಕ್ಷಿತಚಕ್ರವರ್ತಿತತ್ಪುತ್ರಜನಮೇಜ[ಯ]ಚಕ್ರವರ್ತಿಹಸ್ತೀನಾಪುರೆಸುಖಸಂಕಥಾವಿನೋದೇನರಾಜ್ಯಂ
[14]ಕರೋತಿ . . . . . . ದಿಗ್ವಿಜಯಯಾತೇಯಂ ವಿಜಯಂಕರೋತಿತುಂಗಭದ್ರಹರಿದ್ರಾ

೨ನೇ ಪತ್ರದ ಮುಂಭಾಗ.

[15]ಸಂಗಮೇಶ್ರೀಹರೀಹರದೇವಸಂನೀಧೌಕಟಕಮುತ್ಕಲೀತಂ ॥ ಚೈತ್ರಮಾಸೇಕ್ರೀಷ್ಣಪಕ್ಷೇಸೋಮದಿ
[16]ನೇಭರಣಿಮಹಾನಕ್ಷತ್ರೇಸಂಕ್ರಾಂತೀರ್ವ್ಯತೀಪಾತನೀಮಿತ್ತೇಸರ್ಪ್ಪಯಾಗಂಕರೋತಿಬನವಶೆ
[17]ಪನ್ನಿಛಹಸ್ರಮಧ್ಯೇಕಂಪಣಯಡನಾಡಯಪ್ಪತರತತ'ಮಧ್ಯೇಪುಸ್ಪಗಡೆಯಗ್ರಾಮತುಬ್ರಾ
[18]ಹ್ಮಣಾಕನ್ನಡಶಾಖೆಯಾಆತ್ರೇಯಗೋತ್ರದಮಾಧವಪಟ್ಟವರ್ದ್ಧನರುಕಂನಡಶಾಖೆಯಾವಸಿಷ್ಟ
[19]ಗೋತ್ರದಶಂಕರಘಳಿಸರುಕಂನಡಶಾಖೆಯಾಶ್ರೀವತ್ಸಗೋತ್ರದಯೋಗೇಶ್ವರಪಟ್ಟವರ್ಧನ
[20]ರುಕಂನಡಶಾಖೆಯಾವೀಶ್ವಾಮಿತ್ರಗೋತ್ರದವೀಷ್ಣುದಿಕ್ಷಿತರುಚವುಘಮುಕ್ಷಜನಾನಾಗೋತ್ರಸಹಸ್ರ
[21]ದ್ವಯಬ್ರಾಹ್ಮಣಸರ್ಪಯಾಗಪೂರ್ಣಾಹುತಿಸಮಎಳ(ಂ)ಶಿರ್ವಾದಪೂರ್ವಕ್ಕಂಚಕ್ರವರ್ತ್ತಿಮೈಚಿ
[22]ಪಂಚಾಂಗಪಸಾಯಾಛತ್ರಸುಖಾಸನಬಲದಗದಿಗೆಅಂಕದಂಡಖಂಡಣಅಷ್ಟಭೋ
[23]ಗತೇಜಸಾಮ್ಯಸರ್ಬನಮಸ್ಯವಾಗೀಪುಸ್ಪಗಡ್ಡೆಯಗ್ರಾಮತತ'ಮಧ್ಯೇಪ್ರವಿಷ್ಟ . . . .
[24]ಬೋಮಾನಹಳೀನಿಟ್ಟಕ್ಕೀನಛೆಕೊರಕೋಡಿಅಂನಗೆಡೆಕೊಡರ್ಲಿಕೆರೆಉರುಗೆಂಡಣಕುಳವಳೀ
[25]ಕಕೊಂಡೆಯಾಹಳಿಯೇವಂದಶಗ್ರಾಮಾತುಧಾರಾಪೂರ್ವಕಂದತ್ತಂತಸ್ಯಗ್ರಾಮಸ್ಯಸೀಮಂತರಾ
[26]ಣಿಕಥಂಯಿಾಶಾನ್ಯದಶಿಮೆಪುಸ್ಪಗಡ್ಡೆಯಾಕಾಂತಾಪುರದಹಾಎಯತ್ರಿಸಂಧಿಶೀ
[27]ಮೆಸ್ರೋತಃಸಂಗಮತಥಾದಕ್ಷಿಣಮುವಲೋಕೇಪುಷ್ಪಗಡ್ಡೆಯಾಹಾಎಯಾದ್ವೇಶೀಮೋ
[28]ಸ್ರೋತಪ್ರಾಪ್ಯತಥಾದಕ್ಷಿಣಪುಸ್ಪಗೆಡ್ಡೆಯಾಹಾಎಯಾಉಧರೆಯಾತ್ರಿಸಂಧೀಶಿಮೆ
[29]ವಕ್ರತಥಾ ॥ ದಕ್ಷೀಣಪುಷ್ಪಗಡ್ಡೆಯಲುಧರೆಯದ್ವಿಶೀಮೆಸ್ರೋತಪ್ರಾಪ್ಯತಥಾ

೨ನೇ ಪತ್ರದ ಹಿಂಭಾಗ.

[30]ದಕ್ಷೀಣಗ್ರಾಮಆಗ್ನೇಯಪುಸ್ಪಗೆಡ್ಡೆಯಾಉಧರೆಯಾಕದಳೀಗೆಯತ್ರಿಸಂಧಿ
[31]ಸೀಮೆಸ್ರೋತಘಾತವಕ್ರತಥಾಪಶ್ಚಿಮಮವಲೋಕೇಪುಸ್ಪಗಡ್ಡೆಯಾಕದಳಿ
[32]ಗೆಯಾದ್ವೇಶೀಮೆಮತ್ತಿಯಾಕೊಳತಥಾಪಶ್ಚಿಮಪುಸ್ಪಗೆಡ್ಡೆಯಾಕುಡಳಿಯಾತವನಿಧೀಯಾ

33 ತ್ರಿಸಂಧೀಶೀಮೆಬಾಲೆಯಾಕೊಳತಥಾಪಶ್ಚಿಮಪುಸ್ಪಗೆಡೆಯಾತವನೀಧೀಯಾದ್ವಿಸಂ
34 ಮೆಯಲವದಕಟ್ಟತಥಾಪಶ್ಚಿಮಗ್ರಾಮನ್ಯೈರೀತ್ಯಪುಸ್ಪಗೆಡ್ಡೆಯತವನೀಧೀಯ
35 ತೆಕ್ಕೂರತ್ರಿಸಂಧೀಶೀಮೆಮೊಳೆಯಮರಡಿತಥಾಉತ್ತರಮವಲೋಕೇಪುಸ್ಪಗೆ
36 ಡ್ಡೆಯಾತೆಕ್ಕೂರುದ್ವೇಶೀಮೆಸ್ರಾಪ್ಯ. .ತೆವಲ್ಲತಥಾಉತ್ತರಪುಸ್ಪಗೆಡೆಯ
37 ತೆಕ್ಕೂರಕೊಳಗಣತ್ರಿಸಂಧೀಸಿಮೆಮಾಗೆ . ತಥಾಉತ್ತರಪುಷ್ಪಗೆಡ್ಡೆಯಕೂ
38 ಳಗನದ್ವೇಶಿಮೆಉುಂಯಗುಡ್ಡೆತಥಾಉತ್ತರಗ್ರಾಮಾವಾಯಾವ್ಯಪುಸ್ಪಗೆ
39 ಡ್ಡೆಯಕೊಳಗನಬಸಉರತ್ರಿಸಂಧೀಸಿಮೆಸ್ರೋತತಥಾಪೂರ್ಬಮವಲೋಕೇ
40 ಪುಷ್ಪಗೆಡ್ಡೆಯಬಸಉರದ್ವೇಶಿಮೆಸ್ರೋತಪ್ರಾಪ್ಯತಥಾಪೂರ್ವಪುಷ್ಪ
41 ಗೆಡೆಯ್ಯಾಬಸಉರತಾಣಗುಪ್ಪೆಯತ್ರಿಸಂಧೀಶೀಮೆಪಾಲಗೊಳತಥಾಪೂರ್ವ
42 ಪುಷ್ಪಗಡೆಯಾತಾಣಗುಪ್ಪೆಯದ್ವೇಃಮೆಸ್ರೋತವಕಾತಥಾಪೂರ್ಬಪುಷ್ಪ

೩ನೇ ಪತ್ರದ ಮುಂಭಾಗ.

43 ಗಡೆಯತಾಳಗುಪೆಯಾಕಾಂತಾಪುರದತ್ರಿಸಂಧಿಶೀ
44 ಮೆಸ್ರೋತತಥಾಪೂರ್ವಪುಷ್ಪಗೆಡ್ಡೆಯಾಕಾಂತಾಪುರದದ್ವೇಶೀಮೆ . . .
45 ಪ್ಯತಥಾಪೂರ್ಬತಥಾಪೂರ್ಬಯಿಶಾನ್ಯಶೀಮೆಸಮಾಪ್ತಃಸಾ
46 ಮಾನ್ಯೋಯಂಧರ್ಮ್ಮಸೇತುರ್ನ್ನೃಪಾಣಾಂಕಾಲೇಕಾಲೇಪಾಲನೀ
47 ಯೋಭವದ್ಭಿಃ ॥ ಸರ್ವಾನೇತಾನ್ಭಾವೀನಃಪಾರ್ಥಿವೇಂದ್ರಾನ್ಭೂಯೋ
48 ಭೂಯೋಯಾಚತೇರಾಮಭದ್ರಾ ॥ ಸ್ವದತ್ತಾಂಪರದತ್ತಾಂವಾಯೋಹರೇತವಸುಂಧರಾಂ ॥
49 ಷಷ್ಟಿರ್ವರುಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ . . . ॥
50 . . ತ್ಯಂವಿಷಂಘೋರಂನವಿಷಂವಿಸಮುಚ್ಯತೇ ॥ ವಿಸಮೇಕಾ
51 ಕಿನಂಹಂತಿಬ್ರಸ್ವಂ ಸ್ವಂಪುತ್ರಪಾತ್ರಿಕಂಶ್ರೀರಾಮನಾಥದೇವಾಭೂಮಿಮತ್ತರು ೪,
52 ಡೀಕೆಗೆಭುಮಿಮತ್ತರು ೪ ಅಗ್ನೀಶಗೆಗೆಭುಮಿಮತ್ತ ೨ ಛತ್ರಕೆಭು . .
53 .ರು ೪೭ಪ್ಯ ಅರಾಯಮಸ್ತಕತಳಪ್ರಹಾರಿ ॥

814

ಅದೇ ಅಗ್ರಹಾರದ ನರಸಿಂಹದೇವಸ್ಥಾನದ ಪ್ರಾಕಾರದಲ್ಲಿ ದಕ್ಷಿಣಕಡೆ ನೆಟ್ಟಿರುವ ಕಲ್ಲಿನಲ್ಲಿ.

ಪೂರ್ವದ ಹಳಗನ್ನಡಕ್ಷರ. — ಪ್ರಮಾಣ 6′ × 3′ 8″.

1 ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪೃಥ್ವೀವಲ್ಲಭಂಮಹಾರಾಜಾಧಿರಾಜಂಪರಮೇಶ್ವರಂಪರಮಭಟ್ಟಾರಕಂಸತ್ಯಾ
2 ಶ್ರಯಕುಳತಿಳಕಂಚಾಳುಕ್ಯಾಭರಣಂಶ್ರೀಮಜ್ಜಯಸಿಂಹದೇವಂಪ್ರಿಥುವೀರಾಜ್ಯಂಗೆಯ್ಯೆಶಕನೃಪಕಾಳಾತೀತಸಂವತ್ಸರ
3 ಶತಂಗಳೊಂಬಯ್ನೂಱಯ್ವತ್ತೊಂಬತ್ತನೆಯಂಗಿರಸಂವತ್ಸರದಪಾಷ್ಯದಪುಣ್ಣಿಮಿವಡ್ಡವಾರದುತ್ತರಾಯಣಸಂಕ್ರಾಂತಿಯಂ
ದುಸಮ
4 ಧಿಗತಪಂಚಮಹಾಶಬ್ದಮಹಾಸಾಮಂತಾಧಿಪತಿತ್ರಿಕುಂದಪುರವರೇಶ್ವರಬ್ರಹ್ಮಕ್ಷತ್ರಿಯಂಮಾಟೂರವಂಶೋದ್ಭವಂನಂದನವ
ನಕ್ಷತ್ರ
5 . . .ವತಾರಹಯಲಾಂಚ್ಛನಂದರ್ಪ್ಪಣಧ್ವಜವಿರಾಜಮಾನಪರಸೈನ್ಯಭೈರವಂರಿಪುಬಳಮಲ್ಲಂಸಮರೈಕವೀರಂನುಡಿದಂತೆಗ
ಣ್ಡಂಪರಾಕ್ರ
6 ಮಸಿಂಗಂತೊಲಗದಂಗಣ್ಡಂಶೌರ್ಯ್ಯಾಗರಂಶ್ರೀಮದಾಲಯ್ಯಂಬನವಾಸಿಪನ್ನಿಚ್ಛಾಸಿರಮುಂಸಾಂತಳಿಗೆಸಾಸಿರಮುಮನೇಕ
ಚ್ಛತ್ರಚ್ಛಾಯೆಯಿನಾಳುತ್ತಮಿ
7 ಳ್ದಮಂಣ್ಡಳಿಕಂಕುಂದಮಗಂಗುಪ್ಪಗಡ್ಡೆಯಬಯಲಂಕಳಂಬದು ॥ ವೃತ್ತ ॥ ಬಳವದರಾತಿಸೇಸಿಕಿದೆವಾಜಿಬಳಂಪಜಿಪಿಂಗೆಹ
ಸ್ತಿಸಂಕುಳ
8 ಮಳಿರ್ವ್ವಳ್ಕಿಬಳ್ಕಿತನಗಾಂತಧಿಕೋಗ್ರವಿರೋಧಿಸಾದನಂವಳಿಕಿಬಳಳ್ಕಿಸುಗ್ಗಿಪಲರಂತವೆಕೊಂದು ಮಹಾಜಿರಂಗದೊಳತೊ
ಲಗದಗ್ಗಡನಾಂತಿಱಿಯೆ

9 ಭುಃಭುಕಮುದ್ಧತಮಾದೊಡೆತ್ತಲುಂ ॥ ಕೆಡೆವಭಟಬ್ರ್ಬಟಾಂತ್ರವೃತ್ತದಿಂದಮುರಳ್ವಹಯಂಹಯಾಳಿಯಂಪುಡಿಪುಡಿಯಾಗೆ ಮೆಟ್ಟುವ

10 ಗಜಂಗಜಮಾಂಸಮನುಬ್ಬಿರ್ತಿಂದುಕೂಗಿಡುವಮುರುಳ್ಕ್ರಳ್ಪಡೆಯನಟ್ಟುವಸಿದ್ಧಗಣಂಗಣಂಗಳಂಬಡಿವನಿಶಾಚರಸ್ಸ್ವಮರಧೀ ರರಿರು

11 ತ್ತಿಱಿದಾಜಿರಂಗದೊಳ್ ॥ ಅಂತನೇಕರಂಕೊಂದುಸುರಲೋಕಕ್ಕೆ ಬಿಜಯಂಗೆಯ್ಯಲಾತನಮಗಂ । ಸಮಧಿಗತಪಞ್ಚಮಹಾ ಶಬ್ದಮಹಾ

12 ಸಾಮನ್ತಾಧಿಪತಿವಿಜಯಲಕ್ಷ್ಮೀಪತಿಸಮಸ್ತಶಾಸ್ತ್ರಪಾರಾವಾರಪಾರಾಯಣಂ । ಸಾಮಂತನಾರಾಯಣಂ । ರಿಪುಬಳತಿಮಿರ ಹಾರ

13 ಣಕರಣಸಹಸ್ರಕಿರಣಂ । ಗಣ್ಡರಾಭರಣಂನಿಜಕುಳಕುವಳಯವಿದಳಿತವಿರಾಜರಾಜಂ । ಗಣಿಕಾಮನೋಜಂ । ಅಶ್ವವಿದ್ಯಾವಿ

14 ದಿತಶಾಳಿಹೋತ್ರಂ । ನಂದನವನಚ್ಛತ್ರಂಬಳಾಧಿಕವಿರೋಧಿಸಾದನಪಾಕಶಾ[ಸ]ನಂಗೀತಕಂಜಾಸನಂ । ವಿವಿಧವಿಬುಧಮಾ ಗಧಚಿಂತಾಮಣಿ ।

15 ಧರಾಧಿರಾಜಚೂಡಾಮಣಿ । ಶುಭ್ರಾಭ್ರಕುಂದೇಂದುಹರಹಾಸಾಭಾಸಭಾಸುರಜಗದ್ವಿದಿತಕೀರ್ತ್ತ್ಯಾಕರಂ । ಸತ್ಯರತ್ನಾಕರಂ । ಮೃಗ

16 ರಾಜಶೌರ್ಯ್ಯಂ । ಮಂದರಧೈರ್ಯ್ಯಂ । ನಣ್ಣನಸಿಂಗಂ । ಶ್ರೀಮಜ್ಜಯಸಿಂಗದೇವಂ ॥ ವೃತ್ತ ॥ ಮುಳಿಸತ್ಯದ್ಭುತಮಾಯ ಮೆಂದುಮಚಳಂದಾನಂ

17 ಬುಧಾಹ್ಲಾದಿಕೇವಳಿಮಲ್ಲುನ್ನತಿಸತ್ಯಶೌಚಮುಚಿತಂಲೋಕೋತ್ತರಂ ಕೀರ್ತ್ತಿದಿಗ್ವಳಯಾಂತಂನುಡಿಮೇರುಶೈಳಲಿಖಿತಂಧ ರ್ಮ್ಮಂಜಗ

18 ನ್ಮದ್ರೈಭೂತಲವಂದ್ಯಂಚರಿತಂನಯಂಜನನುತಂಶ್ರೀಸಿಂಹಭೂಪಾಳನಂ ॥ ರಿಪುಸೈನ್ಯವೊತ್ತಧುರದೊಳ್ನೃಪರಿಂಮುನ್ನಿಱಿ

19 ದುಪಲವುಕಾಳಗದೊಳ್ಭೂಮಿಪಚೂಡಾಮಣಿಸಿಂಗಂ । ನೃಪರಿಂಮುನ್ನಿಱಿವನೆಂಬಪೆಸರಂಪಡೆದಂ ॥ ವೃತ್ತ ॥ ಮಲೆವಸ್ಸ್ವ ಕ್ಕರೆ

20 ಮನ್ನೆಯಸ್ಸ್ವಗಿಯಸಾಮಂತಮ್ಮನಂಗುಂದೆಮಣ್ಡಲಿಕಸ್ಸ್ವಂಕಿಸೆಬೇಡರಬ್ಬಿಸೆಕುಱಿಂಬಬ್ಬೆಟ್ಟೆತನ್ನೊಂದೆತೋಳ್ವಲದಿಂ ಭೂತಳಮಂನಿ

21 ಮಿಚ್ಚಿಜನಕಂಗತ್ತಗ್ಗಳಂನಾಲ್ವೆರಲ್ವಲದೊಳ್ಶೌರ್ಯ್ಯದೊಳ್ಂಬಿನಂಧರೆಗೆಸಂದಂಸಿಂಹಭೂಪಾಳಕಂ ॥ ಇಂತುಸುಪುತ್ರಕು ಳದೀಪ

22 ಕನೆನಿಸಿನೆಗರ್ದ್ದತಮ್ಮಯ್ಯಂಗೆಪರೋಕ್ಷವಿನಯಮಾಗಲಗ್ರಹಾರಂಕುಪ್ಪಗಡ್ಡೆಯೊಳಾಲೇಶ್ವರಮಂಮಾಡಿಸಿದೇವರ್ಗ್ಗನಿವೇ ದ್ಯಕ್ಕಂಸೊ

23 ಡಗ್ಗ್ರಂಪೂಜೆಗಂಬಿಟ್ಟತೋಂಟಂಕೆಱೆಯಕೆಳಗೆಗುಣಿಗಗಳಿಯೊಳ್ಕಮ್ಮ ೫೦ ಸೆಜ್ಜೆಗದ್ದೆಮತ್ತ ೧ ಕಮ್ಮ ೭೫ ಪಡಿಸಲಿಸು ವುದಕ್ಕಂಭೋಗಕ್ಕಂ

24 ಎಡೆನಾಡ ೭೦ ಬಳಿಯನ್ನಗೆದೆಯಂಸರ್ವ್ವನಮಸ್ಯಂಬಿಟ್ಟನಿದಂಕಾದವಂಗೆಕುರುಕ್ಷೇತ್ರದೊಳುತ್ತರಾಯಣಸಂಕ್ರಾಂತಿಯಯುಂಸೂ ರ್ಯ್ಯಗ್ರ

25 ಹಣಮುಮಾದಂದುಸಾಸಿರ್ವ್ವರ್ಚ್ಚತುರ್ವ್ವೇದಪಾರಗರ್ಗ್ಗೆಸಹಿರಣ್ಯಂಸಾಸಿರಕವಿಲೆಯಂಕೊಟ್ಟಪಲಮಕ್ಕು ॥ ಇದನಳಿದಾತ ನೆನಿಬರ್ಬ್ರಾಹ್ಮಣ

26 ರುಮನನಿತುಕವಿಲೆಯುಮನಾತಿಥಿಯೊಳ್ಕುರುಕ್ಷೇತ್ರದೊಳಳಿದಪಞ್ಚಮಹಾಪಾತಕನಕ್ಕು ॥ ಸ್ವದತ್ತಾಂಪರದತ್ತಾಂವಾಯೋ ಹರೇತ

27 ವಸುಂಧರಾಂಷಷ್ಟಿರ್ವ್ವರ್ಷಸಹಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃ ॥ ಬಹುಭಿರ್ವ್ವಸುಧಾಭುಕ್ತಾರಾಜಭಿಸ್ಸಗರಾದಿಭಿರ್ಯ್ಯ ಸ್ಯಯಸ್ಯ

28 ಯದಾಭೂಮಿಃತಸ್ಯತಸ್ಯತದಾಫಲಂ ॥ ಸಾಮಾನ್ಯೋಯಂಧರ್ಮ್ಮಸೇತುರ್ನೃಪಾಣಾಂಕಾಲೇಕಾಲೇಪಾಲನೀಯೋಭವದ್ಭಿಸ್ಸ ರ್ವ್ವಾನೇತಾನ್ಭಾಗಿ

29 ನಃಪಾರ್ತ್ಥಿವೇಂದ್ರಾನ್ಭೂಯೋಭೂಯೋಯಾಚತೇರಾಮಚಂದ್ರಃ ॥ ಇಱಿವಗೊರವಂಗೀಸ್ಥಾನಮುಮನ್ನಗೆಡೆಯೊಳ್ಪಿರಿಯಗ

30 ಳೆಯಿ ೭೫ ಮತ್ತಗ್ಗದ್ದೆಯುಂತಮ್ಮಭಕ್ತಿಂಯೊಳೆಲ್ಲಂವೆಣ್ಡಿಕೆವಣಮುಮಂಕೊಟ್ಟಂಶ್ರೀಮತ್ಕವಿರಾಜವಲ್ಲಭಂಕಪ್ಪಣಭಟ್ಟರ ಲಿಖಿತಂ

31 ಚಾಮುಣ್ಡೋಜಂಬೆಸಗೆಯ್ದಂ ॥ ಬಮ್ಮೋಜಂದೇಗುಲಮಂಮಾಡಿದಂಶ್ರೀಮಂಗಳ

185

ಅದೇ ದೇವಾಲಯದ ಪೂರ್ವಕ್ಕೆ ಅಂಗಳದಲ್ಲಿ ನೆಟ್ಟ ಒಡದಕಲ್ಲಿನಲ್ಲಿ.

1 ಶ್ರೀಗಣಾಧಿಪತಯೇನಮ
. . . .
8 . . ಣಕಾಲದಲು . . . .
. . . .
11 . . . . . . ಸರ್ವ್ವಮಾನ್ಯವಾಗಿ . . . . . .
12 . . . . ಗೆಸಂದು . . . .
. . . .
15 . . . . . . ಧಾರೆಯನೊಪ್ಪಿಸಿ
16 ಕೊಟ್ಟನಾಗಿಅಸೋ . . . . . .
. . . .
20 . . . . ಅನಂತಭಟ್ಟ . . . .
21 . . . . ಬಯಲು . . . . . .
. . . .
23 ಗದ್ದೆಬೀಜವರಿ . . ನೆಯಿವೇದ್ಯ . . . . ಣಗೆಕೊಟ್ಟುದುಖಂಡುಗ .
24 ಣನಾಯಕ . . . ಭಟ್ಟರಕಯ್ಯಂಕ್ರಯವನೂಕೊಂಡುನರಸಿಂ
25 ಹ್ವದೇವರನಯಿವೇದ್ಯಕ್ಕೆಆಚಂದ್ರಾರ್ಕ್ಕಸ್ಥಾಯ್ಯಾಗಿಧರ್ಮ್ಮನ ಡದು
26 ಬಹಮರಿಯಾದೆಯಲುಸೋಮಉಪರಾಗಪುಣ್ಯಕಾಲದಲಿ
27 ಧಾರೆಯನುಯೆಱದುಕೊಟ್ಟೆವು ॥ ಸ್ವದತ್ತಂಪರದತ್ತಂವಾಯೋ ಹರೇ
28 ತಿವಸುಂಧರಾಂಷಷ್ಟಿರ್ವ್ವರುಷಸಹಸ್ರಾಣಿವಿಷ್ಟಾಯಾಂಜಾಯ
29 ತೇಕ್ರಿಮಿ ॥ ಯೀದುಗ್ಗಣನಾಯಕಮಾಡಿದನಾರಸಿಂ
30 ಹದೇವರಧರ್ಮ್ಮವನುಆವನಾನೊಬ್ಬನುಅಳುಪಿಯು
31 . ನುಅತನುಕಾಸಿಯಕ್ಷೇತ್ರದಲುಕೋಟಿಗೋವ
32 . . ನುಕೊಂದಪಾಪಕೆಹೋಹರುಮಹಾಜನಂ
33 ಗಳವೊಪ್ಪಶ್ರೀನಾರಸಿಂಹ್ವದೇವರು

186

ಅದೇ ಸ್ಥಳದಲ್ಲಿರುವ ಮತ್ತೊಂದು ಕಲ್ಲಿನಲ್ಲಿ.

1 ಸ್ವಸ್ತಿಶ್ರೀ . . . .
2 . . . .
. . . .
6 . . . . . ಸಿಂಹ್ವಾಸನದಲುರಾಜ್ಯ
7 ಗೆಯ್ವ . . . . . . ವೀರ್ಪಬ
8 . . . .
9 ಶಕವರುಷ ೧೪೬೪ ಚಿತ್ರಭಾನು
10 ಸ್ರಾವಣಶು ೮ . . ಕುಪ್ಪಗಡೆಯ
11 ಶ್ರೀನಾರಸಿಂಹ್ವದೇವರಿಗೆ
12 . . . . ಮಾನ್ಯಧಾರೆ
13 ಮದಸಾವಂತಿಕಯದೆಸಹ
14 ಗ ೧೬ ೩ ವನೂಪಾಲ್ಸಿಬಹೆವು
15 ಯೀಧರ್ಮ್ಮವನಾರುಅಳುಹಿದ
16 ವರುವಾರಣಾಸಿಯಲಿಕವಿಲೆ
17 ಯನುಬ್ರಾಹ್ಮರಕೊಂದಪಾಪಕೆಹೋ
18 ಹರು

187

ಅದೇ ಹೋಬಳಿ ಕುಪ್ಪಗಡ್ಡೆಯ ಮಜರೆ ಎಕ್ಕಸಿ ಗ್ರಾಮದಲ್ಲಿ ಪುಟ್ಟಮ್ಮನ ಗದ್ದೆಯಲ್ಲಿ ನೆಟ್ಟ ಕಲ್ಲು.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂ
2 ಭಮೂಲಸ್ತಂಭಾಯಶಂಭವೇ ॥ ಹರಿರವತುಕಿರವಪೂರ್ವ್ವೋಯಸ್ಯರ
3 ದಾಂಕೂರಕೋಟಿಪೀಠಾಸಾ ಸಿತಕಮಳಮುಕುಳಮಿಳದಳಿಲಲನಾನೀಲಾಂಬಿಭರ್ತ್ತಿ
4 ಭೂಕಾಂತಾ ॥ ಸ್ವಸ್ತಿಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂಬನವಾಸಿ
5 ಪುರವರಾಧೀಶ್ವರಂಜಯಂತೀಮಧುಕೇಶ್ವರದೇವರಲಬ್ಧ ವರಪ್ರಸಾದಂಮೃಗಮದಾಮೋ
6 ದಂಸತ್ಯರಾಧೇಯಂಶರಣಾಗತವಜ್ರಪಂಜರಂಕದಂಬಕುಳಕಮಳಮಾ
7 ರ್ತ್ತಾಂಡಂಕಲಿಗಳಂಕುಶಂಗಂಡರಡಾವಣಿಶ್ರೀವೀರಕಾವರಸರುಸುಖಸಂಕಥಾವಿನೋ
8 ದದಿಂರಾಜ್ಯಂಗೆಯ್ಯುತ್ತಮಿರೆತತ್ಪಾದಪದ್ಮೋಪಜೀವಿಶ್ರೀಮನ್ಮಹಾಪ್ರಧಾನಂಮಂಡ

9 ಳಿಕವಾಕೊಕ್ಕಿರ್ಲಭೈರವಂಣಂವಡಿರಾವುತ್ತರಾಯವೀರಬದಕಿಸೆಟ್ಟಿಯರು
10 ಶಕವರ್ಷದ ೧೨೦೦ ನೆಯಬಹುಧಾನ್ಯಸಂವತ್ಸರದಚೈತ್ರಶು ೫ ಗುರುವಾ
11 ರದಂದುಸ್ವಸ್ತಿಶ್ರೀಮದನಾದಿಯಪಟ್ಟದಪಿರಿಯಗ್ರಹಾರಂಕುಪ್ಪಗೆಡ್ಡೆಯ
12 ಹೆಗ್ಗಱೆಯಕೆಲಸಕೆನೆಕ್ಕಸಿಯಬಯಲೊಳಗೆಮತ್ತರುಕೆಯ್ಯಅಱಂ
13 ದ್ರಾರ್ಕ್ಕಸ್ಥಾಯಿಯಾಗಿಧಾರಾಪೂರ್ವ್ವಕದಲುಕೊಟ್ಟರುಮಂಗಳಮ
14 ಹಾ ಶ್ರೀ ಶ್ರೀ ॥ ಸ್ವದತ್ತಂಪರದತ್ತಂವಾಯೋಹರೇತಿವಸುಂಧರಾ । ಷಷ್ಟಿರ್ವ್ವ
15 ರ್ಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿ ॥ ದಾನಂವಾಪಾಲ
16 ನಂವಾಪಿದಾನಾಚ್ಛ್ರೇಯೋನುಪಾಲನಂದಾನಾಸ್ವರ್ಗ್ಗಮವಾಪ್ನೋತಿಪಾ
17 ಲನಾದಚ್ಯುತಂಪದಂ ॥ ಇಧರ್ಮ್ಮವನುಪಾಲಿಸದೆಅಳಿಪಿದ
18 ವಗಂಗೆಯಲಿಗೋವನುಂಬ್ರಾಹ್ಮಣರನುಂಕೊಂದಾತಮಂಗ
19 ಳಮಹಾ ಶ್ರೀ ಶ್ರೀ

188

ಅದೇ ಹೋಬಳಿ ಸಾರೆಕೊಪ್ಪ ಗ್ರಾಮದ ಕಲ್ಲೇಶ್ವರ ದೇವಾಲಯದ ಬಳಿ ೧ ನೇ ವೀರಕಲ್ಲಿನಲ್ಲಿ.

1 ಸ್ವಸ್ತಿಸಮಸ್ತಪ್ರಸಸ್ತಿಸಹಿತಂಶ್ರೀಮತುಕಾದಂಬಚಕ್ರವರ್ತ್ತಿಮಲ್ಲಿದೇವರಸರುಸು
. . . .
4 . . . . ರಮ
5 ಹಾ . . . . ॥ ಸಾರೆಯಭೈರವನಾ
6 ಯಕನಾಳ್ವಮಿಗಿಲಾಗಿರಣದೊಳಿಱಿಯಲುತದನಾಳುವರಂಸಂಕೆಯ
7 ನಾಯಕಬಿಱಿಯದೇವನಸಮಗ್ರಬಲಮಂಕೊಂದನು ॥ ಎರಡುಬಲಂ
8 ಮೆಚಲುಬಿರುಸನಬಯಲೊಳಕಾದಿತಾಂಬಸವಳಿಯಲುಸುರಗ
9 ಣಿಕೆಯರೊಲುದಂ . . . . . . ಯೊಡನೆಸುರವಿಮಾನದೊಳೊಯಿದರು ॥

189

ಅದೇ ಸ್ಥಳದಲ್ಲಿ ೨ನೇ ವೀರಕಲ್ಲಿನಲ್ಲಿ.

1 ಶ್ರೀನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾ
2 ರಂಭಮೂಲಸ್ತಂಭಾಯಶಂಭವೇ ॥ ಸ್ವಸ್ತಿಸಮಸ್ತಪ್ರಶಸ್ತಿಸಹಿತಂ
3 ಯಾದವನಾರಾಯಣಭುಜಬಳಪ್ರತಾಪಚಕ್ರವರ್ತ್ತಿ
4 ಶ್ರೀರಾಮಚಂದ್ರದೇವರಾಯರಾಜ್ಯವರ್ಷದಸುಭಾನುಸಂ
5 ವತ್ಸರದಯಾಶ್ವೀಜ . . ೩ ಸೋಮವಾರದಂದುಬೀರಯಹತಕಳ್ಳರುಮಂಮಿಗೆಹತಿ
6 ಪಮಂನೆಯಪಸಾಯವರನಕೂಡಿಕಾದಿದಲಿತರಣರವತ್ತಿಗಾಡನಬೊಂಮ
7 ಯನುಮಾರಸೂಳಬಿದ್ದುಸಾಮರ್ಥ್ಯೆಯಕುಪ್ಪೆಯೊಳಮೊಷ್ಟಿತಳ್ತಿಱಿದು . .
8 ಕರಂಗೆಯಲಹನಗೆಲ್ದುಮೆಱೆದುಸುರಲೋಕಪ್ರಾಪ್ತನಾದ
9 ಮಂಗಳಮಹಾ ಶ್ರೀ ಶ್ರೀ ಶ್ರೀ

190

ಅದೇ ಸ್ಥಳದಲ್ಲಿ ೩ನೇ ವೀರಕಲ್ಲಿನಲ್ಲಿ.

1 ಸ್ವಸ್ತಿಸಮಸ್ತಮಹಾಮಣ್ಡಳೇಸ್ವರವೀರಕಾಮದೇವರಸಂಸಿ
2 ದ್ಧರಾಜ್ಯಂಗೇವಲಿಮಹಾಪ್ರಧಾನಕಲ್ಲಮೆಗ್ಗಡೆಗುಡ . . .
3 ಕೆಱೆಯಲಿಚೆಸದೊಳು . . . . ಲಾಗಿಜ . .
4 ಲ್ಲಸಾರಯಬದಳೆಯರಾಜತಾಗಿತಳ್ತಿಱಿ
5 ದುಸುರಲೋಕಪ್ರಾಪ್ತನಾದನು ॥
6 ಯರಜೊಂಮ . . . .
7 . . . .

191

ಅದೇ ಸ್ಥಳದಲ್ಲಿ ೪ನೇ ವೀರಕಲ್ಲಿನಲ್ಲಿ.

ಪ್ರಮಾಣ 3′ × 1′ 6″.

1 ಶ್ರೀಪ್ರಿಥ್ವೀವಲ್ಲಭಮಹಾರಾಜಾಧಿರಾಜಪ . . .
2 . . . ರಕಜಯಸಿಂಘದೇವಪ್ರಿಥ್ವೀರಾಜ್ಯಂಗೆಯೆ . . .
3 . . . . ಸಿ ೧೨೦೦೦ . . ಬ್ರಹ್ಮದೇವಸಾಳುತ್ತಿರೆಸಕನ್ರಿ . . .
4 ತೀತಸಂವರ್ಸರಸತಙ್ಗ ೯೩೪ ನೆಯಆಂಗೀರಸಂವ . . .
5 ತ್ತಿರ್ಗಸ್ವಸ್ತಿಸಮಧಿಗತಪಞ್ಚಮಹಾಶಬ್ದಮಹಾಸಾ . . .
6 ಪತಿಮದವದರಿನ್ರಿಪತಿಜಿತಲಕ್ಷ್ಮೀಪತಿತ್ರಿಕೂ
7 . . ವರೇಸ್ವರಪರಮಮಹೇಸ್ವರಮಾಟೂರವಂಸೋದ್ಭವ
8 . . ಜೋಳವಂಸನನ್ದನತನಕ್ಷತ್ರಸರಣಾಗತತನುತ್ರಂಹ . . .
9 . . ನಾಶ್ರಿತಜನಕಾಞ್ಚನದರ್ಪ್ಪಣಧ್ವಜಸುರತಮ . .
10 ಬ್ರಹ್ಮಕ್ಷತ್ರಿಯಸೂತ್ರಧಾರಸಾಮನ್ತಗೋಪಾ . . .
11 . . . ಲಬ್ಧವರಪ್ರಸಾದನಾಮಾದಿಸಮಸ್ತಪ್ರಸಸ್ತಿಸಹಿತ .
12 . . . ಯ್ಯದೇವನುಮನೆಯಪ್ರಧಾನರುಎಡೆನಾಡೆರ್ಪ್ಪ . . .
13 . . ಬಲ್ಲವಣೆಗೆಪೂರ್ವ್ವನಪಟ್ಟಿಯಸಾರೆಯೊಳ್ . .
14 . . ಸರೆಯುಪಳಪೂರ್ವ್ವನಪಳಿಯೆಂಬುದಿಲ್ಲ . . .
15 . . ಸಾಸನವಿಟ್ಟನಾವನಾನುಮೞಿದನ್ದು ವಾರಣಾಸಿ . .
16 . . . ಯುಮಸಾಸಿರ್ವ್ವರುಪೂರ್ವ್ವರುಮನೞಿದ

192

ಅದೇ ಸ್ಥಳದಲ್ಲಿ ೫ನೇ ವೀರಕಲ್ಲಿನಲ್ಲಿ.

1 ಶ್ರೀನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಲೋಕ್ಯನಗರಾರಂಭ
2 ಮೂಲಸ್ತಂಭಾಯಶಂಭವೇ ॥ ಸ್ವಸ್ತಿ ಸಮಸ್ತಪ್ರಶಸ್ತಿ ಸಹಿತಂಭುಜಬಳಪ್ರಾ
3 ಢಪ್ರತಾಪಚಕ್ರವರ್ತ್ತಿ ಶ್ರೀವೀರರಾಮದೇವರಾಜ್ಯೋದಯದಯಿ
4 . ತ್ತನೆಯವಿರೋಧಿಸಂವತ್ಸರದಫಾಲ್ಗುಣಸು ೧ ಗಿಸೋ
5 ಯಿ:ದೇವರಾಣೆಯಡೆನಾಡೆಮತ್ತಆಳುತ್ತಿದಲ್ಲಿ
6 ನರಬಲಿಗವಿಯಸೋವನಾಯಕತುಱುಸೆಱೆಕೊಂಡುಹೋ
7 ಹಲಿರಾಯ . . . . . . ಸಾರೆಯಕಾಳಗೌಡಸೋವಬವರಾನವು
8 ದೆಹಲವಾಳ್ಪಡುನೆಯಕೂಡೆನೌಱಿಯು:ದುಮಲಪಸುರ
9 ಲೋಕಪ್ರಾಪ್ತನಾದಅದಕೆವೃಚಿನಾಡಲುಮೂಱುಮೂವತ್ತುಕಂಬ
10 ಕೆಯಕೊಟರುಅದಕೆಮಲದೇವರಿಗೆಬಳೊ
11 ವಾರಣಾಸಿಯಲಿಸಾಸಿರ್ವ್ವಂಕವಿಲೆಯಕೊಂದವರು
12 ಮಂಗಳಮಹಾ ಶ್ರೀ ಶ್ರೀ ಶ್ರೀ

193

ಆದೇ ಹೋಬಳಿ ಕೂಳಗ ಗ್ರಾಮದ ರಾಮಲಿಂಗದೇವಸ್ಥಾನದ ಮುಂದೆ ನಟ್ಟ ವೀರಕಲ್ಲು.

ಪ್ರಮಾಣ 5′ × 2′ 6″.

1 . ಮತುಕಳಚುರ್ಯ್ಯಭುಜಬಳಚಕ್ರವರ್ತ್ತಿಬಿಜ್ಜಣದೇವವರ್ಷ .
2 . . ನುಸಂವತ್ಸರದವೈಸಾಖಸುದ್ಧ ೭ ಸೋಮಶ್ರೀಮನು . . . .
3 . . ಂಎಕ್ಕಲರಸರುಜಗದೇವನಮೇಲೆನಡೆದಹೆಱಗೆಹೆ . . . .
4 . . . ಗಿಹರಿತಂದುಕೂಳುಗನೂರಕವಿಯೆಹಾಯಿದ. ತುಱುವಂಕೊ .
5 ಗಅತನಮಾಗಿಕ್ಕಿನುಂಹೋಗಿತಾಗಿಕಲರಂಕೊಂದುತುಱುವಂಮಗು .
6 . . ಪ್ತರಾದರು ॥ ಬಮ್ಮನವಳ್ಳಿಯುಸನೆಯಿಂತಂನಮಗಂಶಾನುಖಸ್ಯಮೆ

7 ..ತಾಗಿತಳ್ತಿಱಿದುಮಾಱಾಂತರಿಬಳಮಂಕೊಂದುಮಗುೞ್ಚಿದಂತು .
8 ..ವಿರಹಳ್ಳಿಗವುಟ್ಟಿದಗ್ರಾಮವನೆಱಿಂದುಹೊಯ್ಸಣಹಾದಂದಟ್ಟಿಪಲಂ . ೪ .
9 ..ತುಱುವನುಗುೞಿದಂಜಗವಱಿಯೆ ॥ ಆಱಿಯಟ್ಟಿಹೊಯ್ಸಣಾಂಕಂತುಱುವಂಮ .
10 .ೞ್ಚಿವೆಡೆಯೊಳುಕಿಳ್ಳಂತಱಿಸಂದುವೀರರರೆಬರತ್ಳ್ತಿಱಿದಂದೇವಲೋಕಪ್ರಾಪ್ತರಾದರು .
11 ...ಮಗತಂದೆಯುಕಾದುರೆಯಂತಳ್ತಿಱಿದುಕಿಳ್ಳನುಂಹಳ್ಳಿಗನುಂಕದನದೊಳು . . . . .
12 ..ತ್ತಿಯಗೊಡಗೊಂಡುಪೋದರಾಸಿವಪುರಕೆ ॥ ಕೂ . . ಗನಳಿವಿನರಣದಲುವಿ .
13 ..ಳ್ಳನುಂತಾಗಿತಳ್ತಿಱಿದುಕಾದುರೆಯುಮೋಗಣರಾಹುತರಂಕೋದುನಿಂದುಜಸವಂ . .
14 ...ವಿನಿತುಱುಗೊಳ್ೞೊಳುಪೆಂಡಿರುಡೆಯಿನುೞ್ಚುವೆಡೆಯೊಳು . . ಳ್ಳಂಕಿಳ್ಳಂನು . . . . .
15 ..ಂಮಗುೞ್ಚಿಸುರಲೋಕಪ್ರಾಪ್ತರಾದರು ॥ ಸ್ವಸ್ತಿಶ್ರೀಮತುಹಾಯುದಬೆಳಗೌಡನತಮ್ಮಕಿಳ್ಳಿಗೌಡ
16 ...ಗುವತಿಹೊಯ್ಸಣಮಂಡಳಿಕಕವಿಯೆಹಾಯ್ದು . . . . ರರಹಳ್ಳಿಯಂ . . ಕಿಳ್ಳಗಂ . .
17 ..ಗೌಡಕಿತ್ತಿಗೌಡನುಅಱುವತೊಕ್ಕಲುಂಜವಣ್ಣಿಗರುಂಬಿಟ್ಟೊಂಬಳಿಗದ್ದೆಮಂಜಕೊಳಗಧರ್ಮ್ಮ . .
18 ..ತಾರಂಬರಂಪ್ರತಿಪಾಳಿಸುವರುಕಾವುಂಬಳಿಯನಳಿದವಗಂಗೆಯತಡಿಯಕವಿಲೆ . .
19 ..ರುಮಂಕೊಂದರು ಜಿತೇನಲಭ್ಯತೇಲಕ್ಷ್ಮೀರ್ಮ್ಮೃತೇನಾಪಿಸುರಾಂಗನಾಕ್ಷಣವಿಧ್ವಂಸಿನೀಕಾಯೇಕಾಚಿ . .
20 ..ರಣೇ ॥ ಕುಪ್ಪಟೂರಬಿಂಮ್ಮರಬಾಚಿಮಯ್ಯನಪುತ್ರಚಟ್ಟಮಯ್ಯಂಬ . . . . .

194

೨ನೇ ವೀರಕಲ್ಲಿನ ತುಂಡಿನಲ್ಲಿ.

ಪ್ರಮಾಣ 2′ 6″ × 1′ 3″.

1 ರಾಕ್ಷಸಸಂ
2 ವಾರದಂದು
3 ಕಾಗೆನೆಲೆಯ
4 ಕೇತಇನುಂತಮ್ಮುತ್ತಿಸ್ವರ್ಗ್ಗರುಂಸು
ರಲೋಕ
5 ಪಂಡಯ್ಯನಸ್ತ್ರೀಲಟ್ಟ್ಯಯಚ್ಚಿಕ
ಲ್ಲನಿಱಿಸಿಬಸ

195

ಅದೇ ಹೋಬಳಿ ತವನಂದಿ ಗ್ರಾಮದ ಕೋಟೆಯಲ್ಲಿ ಬಸ್ತಿಯ ದಕ್ಷಿಣಕಡೆ ನೆಟ್ಟಿರುವ ೧ನೇ ಸಮಾಧಿಕಲ್ಲಿನಲ್ಲಿ.

1 ಸ್ವಸ್ತಿಶ್ರೀಮತುಸರ್ವ್ವಧಾರಿಸಂವತ್ಸರದಆಷಾಢಸುದ್ಧತ
ದಿಗೆ
2 ಬ್ರಿಹಸ್ಪತಿವಾರದಶ್ರೀಮತುಕಾಣೂರ್ಗ[ಣ]ದಮಾಧವ
3 ಚಂದ್ರದೇವರಗುಡ್ಡಿಶ್ರೀಮಂನಾಳುಪ್ರಭುಮಾ
4 ೞಿಗಉಡನಸೊಸೆಅಪ್ಪೆಗಉಡನಹೆಂಡ
5 ತಿಶ್ರೀಮಂನಾಳುಪ್ರಭುಉದಯ್ಯೆಯನಮಗಳು
6 ಸಿರಿಯುವ್ವೆಸಮಾಧಿವಿಧಿಯಿಂಮುಡಿಪಿಸ್ವ
7 ರ್ಗಸ್ತೆಯಾದಳುಮಂಗಳಮಹಾ ಶ್ರೀ ಶ್ರೀ ಶ್ರೀ

196

ಅದೇ ಸ್ಥಳದಲ್ಲಿ ೩ನೇ ಸಮಾಧಿಕಲ್ಲಿನಲ್ಲಿ.

1 ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂಜೀಯಾತ್ತ್ರೈಲೋಕ್ಯನಾಥಸ್ಯ
2 ಶಾಸನಂಜಿನಶಾಸನಂ ॥ ಶ್ರೀಮನ್ಮಹಾಮಂಡಳೇಶ್ವರಂಅರಿರಾಯವಿಭಾಡಭಾ
3 ಷೆಗೆತಪ್ಪುವರಾಯರಗಂಡಹಿಂದೂರಾಯಸುರತ್ರಾಣಪೂರ್ವ್ವದಕ್ಷಿಣಪಶ್ಚಿಮ
4 ಸಮುದ್ರಾಧೀಶ್ವರಶ್ರೀವೀರಬುಕ್ಕರಾಯನಕುಮಾರಶ್ರೀಹರಿಹರರಾಯನುರಾಜ್ಯಂಗೆಯು
5 ತ್ತಮಿರ್ಪ್ಪಲ್ಲಿ ॥ ಸ್ವಸ್ತಿಶ್ರೀಜಯಾಭ್ಯುದಯಶಕವರುಷ ೧೩೦೧ ನೆಯಕಾಲಯುಕ್ತಿನಾಮಸಂ
6 ವತ್ಸರದಪುಸ್ಯಬ ೩ ಸೋಮವಾರದಲುಶ್ರೀಮಂನಾಳುವಮಹಾಪ್ರಭುಪ್ರಜೆಮೊಚ್ಚೆಗಂಡಅಲ್ಲಿಯ

[7]ಹದಿನೆಂಟುಕಂಪಣಕ್ಕೆ ಸಿರೋಮಣಿಎನಿಪಮಹಾಪ್ರಭುಗಳಾದಿತ್ಯತವನಿಧಿಯಬೊಂಮಗೌಡ
[8]ನುಸಕಲಸನ್ಯಸನವಿಧಿಯಿಂಮುಡಿಪಿಸ್ವರ್ಗ್ಗಪ್ರಾಪ್ತನಾದನೂ ॥ ಆತನಗುಣಾವಳಿಎಂತೆಂದಡೆ
[9]ಪರಾವಾರತ್ರಯಾಧೀಶ್ವರನತುಳಬಲಂಬುಕ್ಕರಾಯಂಗೆಲೋಕಾಧಾರಂಗಂ . . . . . ಮಾ ಡಿದ
[10]ವನಿಯಧರ್ಮ್ಮಂಗಳಂಜೈನ . . ಳಾಚಾರಂ . ಳಂಗಡಂಕಾಗಿದ್ದರ್ಮರ . . . . . .ಂಮಾಡಿಪುಂ
[11]ಣ್ಯಾಕಾರಂ . ಕೀರ್ತ್ತಿವೃತ್ತಂತವನಿಧಿಯಧಿಪಂಬೊಂಮಣಂಮೇರುಧೈರ್ಯ್ಯನೂ ॥ ಪರಸ .
[12]ಯಾದಿದೇವಪದಯಿ . ತಾನೆಱಗಂಪ್ರತಿಗೆಯಂದರಿಸಿದಜಯಿನನೂಬ್ರ್ಬಕಲಿನಿಂಬ
[13] . . ಪಾಳಕನಿಂದುಭಕ್ತಿಯಿಂಪರಮಜಿನೇಸ್ವರ . . . . ನೆನೆಂಬನೊ
[14] . ದ್ರುಢಚಿತ್ತನಿತವನಿಧಿಪ್ರಭುಬ್ರಹ್ಮನಿಳಾಕಲೋಕದೊಳು ॥ ಜಿನಪತಿಯಂತರಂಗದೊಳಗಿರ್ಪ್ಪ

(ಮುಂದೆ ಕಾಣುವದಿಲ್ಲ)

197

ಅದೇ ಸ್ಥಳದಲ್ಲಿ ೪ನೇ ಸಮಾಧಿಕಲ್ಲಿನಲ್ಲಿ.

[1]ಕ್ರೋಧಿಸಂವತ್ಸರದಅಸ್ವಯಿಜಸು ೧೩
[2]ಸುಕ್ರವಾರದಲೂತವನಿಧಿಯಭಯಿರವ
[3]ಗಉಡರಮದವಳಿತಿಬೊಂಮಿಗಉ
[4]ಡಿಸ್ವರ್ಗಸ್ತೆಯಾದಳು ॥

198

ಅದೇ ಸ್ಥಳದಲ್ಲಿ ೫ನೇ ಸಮಾಧಿಕಲ್ಲಿನಲ್ಲಿ.

[1]ಕಲಿಭಲಿಮಹದೇವಣ್ಣನಕುಲಮುಮನುದ್ಧರಿಸಲೆಂದುರಾಮನ ಬ
[2]ನುಱೊಳ್ಸಲೆಪುಟ್ಟಕೀರ್ತ್ತಿವಡೆದಂಬಲಯುತದಂಡೇಶಮಾಧವಂ
[3]ವಸುಮತಿಯೊಳು ॥ ಸಕಳಗುಣಭರಿತಂಜಿನಪಾದಕಮಳ
[4]ಯುಗಭಕ್ತಿಅರಸಲಾಂಗನೆಯಾಚಕಸುಕವಿಸುರಭೂಜದ
[5]ಣ್ನಾಯಕಮಾಧವನೆಸದನಖಿಳವಸುಧಾತಳದೊಳ್ ॥
[6]ಶ್ರೀಮನ್ನಂದನವತ್ಸರೇಪರಿಲಸಜ್ಯೇಷ್ಟೇತುಮಾಸೇಸಿತೇಪಕ್ಷೇ ರುದ್ರ
[7]ಮಿತೇದಿನೇಗುರೌಚವಿಮಳೇವಾರೇಕಳಾಕೋವಿದಃಶ್ರೀಮನ್ಮಾಧ
[8]ವಚಂದ್ರದೇವಚರಣಾಂಭೋಜಾತಭೃಂಗೋಜಗದ್ವಿಖ್ಯಾತಾಶ್ರಿತಕಲ್ಪವೃಕ್ಷ
[9]ಸದೃಶಶ್ರೀಮಾಧವಾಖ್ಯಪ್ರಭುಃ ॥ ಸ್ವಾಮಿವಂಚಕರೊಳ್ಗಂಡಸ್ವ ರ್ವ್ವಸಾಂ
[10]ಸಾರಿಕಂಪುರಾ ತ್ಯಕ್ತ್ವಾಜಿನಾಲಯಂಕೃತ್ವಾಖ್ಯಾತಂತವನಿಧಾ
[11]ವಳಂ ॥ ಸೋಯಂಪ್ರಭುಗಳಾದಿತ್ಯಸ್ಸಮಾಧಿವಿಧಿನಾಭು
[12]ವಿ ನಾಕಲೋಕಮಗಾದ್ದಂಡನಾಥಶ್ರೀಮಾಧವಪ್ರಭುಃ ॥ ಶ್ರೀಮ
[13]ದ್ಯಾದವನಾರಾಯಣಂಭುಜಬಳಪ್ರೌಢಪ್ರತಾಪಚಕ್ರವರ್ತ್ತಿಶ್ರೀ ವೀ
31ಶ್ರೀಕೌಸೀಗೆ . . . . ಹಾಗತ್ರ್ಯಮ್ಬೈಲಾಕರಾಯ
32ಕ್ಯಪುರಬುರಿಹಾನಬಸಸ್ತವಾಪೇಠವಾರ
33ಕೊವಪರ . ಮೂಲಿಗ ೧ ಕುಪಾತೊ ೫ . ೨ . ಕೊಳ ೨ ಏನ ೧
34ಪುರವರ್ಗಗೌಡಿಕೆಮಾನ್ಯಪೇಠೆವಡಿಕೆಉಂಬಸಿದ್ಧಾಯದಾಯಕಾ
35ರಕಕಂಟವಣವೊದಲವಿಧ್ಯಪನುಂಟಾದನುವುವುಡಿಸಿ
36ಕೊಂಡಿದ್ದಾ ಕುಪುಟೂರಗ್ರಾಮದಲುಸಂತಾನಪಾರಂಪರ್ಯವಾಗಿಲ
37ಲಿಅನುಭವಿಸಿಕೊಂಡುಅಯಚಿತಅಭ್ಯಾಗತಮಾರ್ಗಸ್ಥರಾ
38ಗಿಬಂದವ್ರಾಣಿಗಳಿಗೆಶಕ್ತ್ಯಾನುಸಾರಧರ್ಮದಾನೋಹವನು
39ನಡಸಿಕೊಬಾಹದುಯಿಂದುಅಮೂಲಸಾಧನವನ್ನುಶ್ರೀವೀರಭದ್ರೈ
40ಯ್ಯಗೆಸೀಮೆಯವರಕ್ಯಂದಕೊಡಸಿಬರದುಪಾಲಿಸಿದಮೂಲ
41ಸಾಧನಪಟ್ಟ ಶ್ರೀಆದಿತ್ಯಚಂದ್ರಾವನಿಲೋನಳ
42ಶ್ಚದ್ಯೌರ್ಭೂಮಿರಾಪೋಹೃದ[ಯಂ]ಯಮಶ್ಚ ಅಹಶ್ಚ ರಾತ್ರಿಶ್ಚ ಉಭೇಚ
43ಸಂಧ್ಯೌಧರ್ಮಶ್ಚ ಜಾನಾತಿನರಸ್ಯವೃತ್ತಂಶ್ರೀನರ . . . . ಕುಪಟೂರ .
44ಹೊ . ೨ ಸ್ವಾ ೨ ನೆರಿದಿ .
45* ಶ್ರೀಸದಾಶಿವಬಾಹಗನಾ ೧ ವೀರಕೃತೋ ೭
46ವರಹ ೪ ಗ ೧ . . ವಾ ೨॥ ನೆ ೩ ಸಮ ೨ ॥ ತಲು ೩॥
47ಕುರೆ ೪೦೨೫೨೨।= ವಿಂಗಡಕಾಕೊಡಿ ೧೪೯೨॥ ಹೊಸಗೆ ೩೩೭೪ ವೇಂ
48ಠೆಗ ೧೩೪೪೨ ತಿಂವುಗ ೧೧೨॥೩= ಆನೆಗೆ ೨೪೦೪೨ ॥ ಲಕ್ಕಲಿಗೆ
49ಕೊಡಿದುಗ ೪ ಅಂತು ೯೭೨। ಕುಪಟೂರರೇಖೆ ೩೨೪೨ ॥. ಗತ್ತಿಡ ೩ ವೊ ೫॥
50ಗ ೧೪೩= ಹಾಗ ೨ ನೆ ೨ ತಿಂವು ೧೪೨ ಕರಿತೋಗ ೨ ತಾ ೩ ಹ್ವ ೪೨ ಕೆಂ
51 ೨೦ ಕುಪಟೂರಬ್ರಹ್ಮಪುರೀದ್ವಾರದಹಳಾಆನೆಗುಂಡಿಗ ೩॥೦ ನೆ ೨ . .
52ನಂದಿಬಲುಸುಗ ೪ ಸಗ ೨೦ ಹೋ ೧॥ ತಿಂವುಲಾಗ ೩॥೦ ತಲು ೨ ಮೂಲದಾ
53 . ಮತೋಠ ೩ ಗ ೩॥೦೨ ಸೊತೋಟ ೨ ಗ ೩೪೩= ಅಶ್ವಥನಾತೋಠದ ೫
54॥೦೦। ಜೀವಿತಗೆ ೨ ಗ ೩॥೦೨ ನೆ॥೦ ವಿನಯೊ ೧॥೦ ಗ ೨।೦ ಕೊಡವೀಸ ಡೆ ೧ ಕೆ
55ವೀಸಲಲಿತೊ ೨ ಗ ೪॥ . . . . ಗ ೧ ಸ ೧೨. . . ತಿ ೨ ಸಿಡಲಹ
56ಪೇಠೆವೀರಲ ೨ ಕೊಮ ॥ ೨ ಚ ೧॥ ಜೊ ೧೨ ಕೊ ೧॥ ಹಿ ೧೨ ಹೊ ೩॥ ೩॥॥ ವಿಕ
57 . . . ೯॥೩॥॥ ಪುರಕೊವಿರುಮೊಠಹಾ ॥ ದೇಶದ. . . ೧ ಕೆ ॥ ದಹಾಗ. . . .

* ಕನ್ನಡಿಕರ.

58 . ೪೭ ॥ . . ಕುಪಟೂರಗ ೧ ಸೇನಭೋಗ ೩೭ ತೊ ೩ ವ ೨ . . . . . .
59 . . ೧೨ ಬ ೧॥ ತೋಟ ೩ ॥ ಬೋರ ೨॥ ಚಂ ೨ ॥ ಆಗಡಿಪ . . . . . . ಬಸಾ .

267

ಅದೇ ಗ್ರಾಮದ ೩ನೇ ತಾಮ್ರಶಾಸನ.

ನಂದಿನಾಗರಾಕ್ಷರ

1 ಶ್ರೀಕೈಟಭೇಶ್ವರದೇವ . . . .
2 ಶ್ರೀಕೆಲದೀವೆಂಕಟಪನಾಯಕರವರು
3 ಸೀಬಪಂತದೊಡ್ಡಕುಪ್ಪಟೂರಗ್ರಾಮಕ್ಕೆ . . . .
4 ರಾ . ೧೪೯೮ ॥ ಕೊಟ . . . . .
5 . . . . ಹೋಪಕೇರಳ . . . ಕಾಲುವತ್ತು
6 . . . . ದೊಡ್ಡಗೆ . . . ಸತ್ರಕೆಭಾರಂಗೀಗ
7 ೧೨ . . ಕಂದಾಯ ಉಭಯಂಗದೇ
8 . . . . ಮೂರುಹಣವಿನಹರದೇವ .
9 . . . . ದಾರಿಯವರೆಉತ್ತರಗೋತ್ರ . . ಮಾನ್ಯನಾಡು . . . .
10 . . . . ಮೊದಲು . . . . ಶಾಲೆಯವರುಗಂಡಿ . . . .
11 ಸೇನಬೋವರಸ್ಥಳಸ್ಥರುಅಗ್ರಹಾರಚತ್ರಸಹ
12 . . . ಮಾಡಿದನಾಣ್ಯದಕುಪಟೂರಿಂಗೆ . ಹಾಗನ . . . .
13 ನಪುರದಹನಗುರಿಗೆ . . . . । ಮನಮುದ್ರೆ . . . . .
14 . ಕ್ಷೇಣಿನಾಗಮುದ್ರಾ . . . ಮುದ್ರೆ೨ಹೊನ್ನಾಗಿ . .
15 ಪೃಟ್ಟಿಭಟ್ಟರಮೂ . . . .
16 . . . . ಲಿಂಗಮುದ್ರಾಶಾ . . . . . .
17 ದೇವರಿಗೆಅಗಸಸಹ . . . ಆನೆಪೇಂಟೆ ೧ . . .
18 ಕಾರಿ ೪ . . . . ವೇಣಿಗೆರ . . . .
19 . . ತಾಹ . . . ಮಾರ್ಗಧಾತ್ರಿಕೊಪ ೧ ಪುರವರ್ಗ . . . .
20 . . . . ಕೊಟವು ೩೫ ಒಸವಾವನುನೇರಳೆಯಶ್ರೀವೀರಭ
21 ದ್ರದೇವರಿಗೆ ೧ . . . . ಪಾಲಿಸಿದ್ದುಗ್ರಾಮಾನುಗ್ರಾಮದ . . . .
22 ಕೆಅಗ್ರಹಾರಕೆ ೧। ದಲು ಕಾರಕ . ಕಂಮುಡಿಪಣಮೂ . .
23 ಕುಪಟೂರಗೌಡಿಕೆಯ . ಸಮಕೊಟ್ಟು ಹಾಪುರ ।
24 ಮಹೀಪುರ । ಗೇಕ್ರ . । ದ್ವಾರವಹ । ತೊರವಂದ ॥
25 ಕೊಗಿಹಳ್ಳಿ । ಸೇರಳಿಗೆ । . . ತದ್ದಲೂರು । . . . .
26 . . . ಮಂತಾಹಳ್ಳಿ । ಸಕಂಟ ।
27 ಹಾಯಿ । ಹರಲುಕೊಪ್ಪ । ಸಮಬಪಲ । ದೊಡ್ಡಹಾಲ
28 ವಸೂರುಮುಖ್ಯಾಸಾದಭಾರಂಗಿ . . . ಗ್ರಮ.
29 . . . . . . । ಕಾಣಿತೆಪ್ಪ । ತೆವರಾತೆಪ್ಪ । ಬನ . . ಕೊಪ

(ಹಿಂಭಾಗ ಅಸ್ಪಷ್ಟವಾಗಿದೆ)

268

ಅದೇ ಹೋಬಳಿ ದೇವಸ್ಥಾನಹಕ್ಕಲು ಗ್ರಾಮದ ಕೈಟಭೇಶ್ವರ ದೇವಾಲಯದ ರಂಗಮಂಟಪದ ಈಶಾನ್ಯ ಕಂಭದಲ್ಲಿ.

ದಕ್ಷಿಣಮುಖ.

1 ಸ್ವಸ್ತಿ ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನುಷ್ಠಾನಪರಾಯಣಜಪಸ್ಸ
2 ಮಾಧಿಸೀಲಾದ್ಯನೇಕಗುಣಸಂಪಂನರುಂ । ವಿಬ್ಧಪ್ರಸಂನರುಂ । ಅಹಿಛತ್ರಪುರೀಲಲನಾ
3 ಲಲಾಟತಿಳಕರು । ಶ್ರೀವೀರನಾರಾಯಣಭಗವತೀದೇವೀಲಬ್ಧವರಪ್ರಸಾದನ . ಗಂಡಸ್ತಬಪು
4 ಳಕರುಂ । ಚಾಳುಕ್ಯವಂಸಾಭ್ಯುದಯಕರಣಪರಮಾಸೀರ್ವ್ವಾದ ಶತಸಹಸ್ರವಚಸೋದ್ಯೋಗಪ್ರಪಂಚರುಂ । ಸಾ
5 ಪಾನುಗ್ರಹಸಮರ್ತ್ಥವಿರಿಂಚರುಂ । ಸ್ವರ್ಗ್ಗಾಪವರ್ಗ್ಗದುರ್ಗ್ಗಮಾರ್ಗ್ಗಸಾಧನಾನುಷ್ಠಾಣಪರಾಯಣರುಂ ।
6 ಯಜನಯಾಜನಅಧ್ಯಯನಅಧ್ಯಾಪನದಾನಪ್ರತಿಗ್ರಹಷಟುಕರ್ಮ್ಮನಿಯ
7 ತರುಂ । ರುಗ್ಯಜುಸಾಮಾಥರ್ವ್ವಣಚತುರ್ವ್ವೇದವೇದಾರ್ತ್ಥಪ್ರಮಾಣಪ್ರವೀಣರುಂ । ತರ್ಕ್ಕವ್ಯಾಕರಣಛಂ
8 ದಸುನಿಘಂಟುಭರತವಾದಿಯಾದಿ ಅನೇಕಶಾಸ್ತ್ರಪ್ರಮಾಣಪ್ರವೀಣರುಂ । (ವಾದಿಕುಳಕೋಳಾಹ)
9 ವಾದಿಕುಳಕೋಳಾಹಳರುಂ । ಅಪುಪಾಸನಾಗ್ನಿಹೋತ್ರದ್ವಿಜಗುರುಪೂಜಾತತ್ಪರರುಂ । ವಿದ್ವಾಂಸಕದಂಬ
10 ಹ್ರುತುಪದುಮಿನೀರಾಜಹಂಸರುಂ । ಭಾರತೀಕರ್ಣ್ನಾವತಂಸರುಂ । ಕಟುತರ್ಕ್ಕಕಂಜವಂ
11 ಜರೀಪುಂಜರಂಜಿತಬಾಲದಿವಾಕರರುಂ । ಬ್ರಹ್ಮವಂಶವಾರ್ದ್ಧಿವರ್ದ್ಧನಸುಧಾಕರರುಂ ।
12 ಹರಿಹರಹಿರಂಣ್ಯಗರ್ಭ್ಭಪಾದಾಂಭೋಜಚಂಚರೀಕರುಂ । ಹರಹಾಸಕಾಸಗಂಗಾ
13 ಜಳಧವಳತರತ್ತರಂಗನೀಹಾರಹಾರತಾರತಾರಾಚಳಿತಾರಾಧೀಶದಿವಿಜಪುದ್ದಂಡ
14 ಪುಂಡರೀಕದುಗ್ಧಾರ್ಣ್ನವಡಿಂಡೀರಪಿಂಡಪಾಂಡುರಹಿಮವದಚಳವಿಚಕಿಳಪಾಂಚಜನ್ಯೋಪಮಾನ
15 ನಿರ್ಮ್ಮಳಕೀರ್ತ್ತಿಪತಾಕರುಂ । ಅಷ್ಟಾದಶಪುರಾಣಕಾವ್ಯನಾಟಕ ನಾನಾಕಳಾಚಮತ್ಕು
16 ತಾರಭಂಗೀಭಾಸಣಕವಿಗಮಕವಾದಿವಾಗ್ಮಿಹ್ರುದಯಾಕ್ರುಷ್ಟಮಂತ್ರಾಕ್ಷರರುಂ । ಪ್ರತಿಪಂ
17 ನಸಿಲಾಕ್ಷರರುಂ । ದ್ವಾತ್ರಿಂಸತುಸಹಸ್ರವಿಪ್ರಚೂಡಾಮಣಿಗಳುಂ । ಪರೋಪಕಾರಚಿಂತಾ
18 ಮಣಿಗಳುಂ । ಚತುಸ್ಸಮಯನಿಸ್ತಾರಕರುಂ । ವೀರಬಣಂಜುಸಮಯಸಮುದ್ಧರಣರುಂ । ಪ್ರ
19 ಚ್ಚಂಡಸಮಯಕದಳೀಕೋದಂಡನಕುಠಾರರುಂ । ಪರಸಮಯಗಜಕೇಸರಿಗಳುಂ । ಸ್ವದೇಸಪ
20 ರದೇಸಸ್ವಸ್ತಾನ ಪರಸ್ಥಾನ ಧರ್ಮ್ಮಾಧರ್ಮ್ಮನಿರ್ಣ್ನಯ ಸೂಕ್ಷ್ಮವಿಚಾರಪರರುಂ । ಅರಾತಿಬಳ
21 ಕಂಜಕುಂಜರರುಂ । ಶರಣಾಗತವಜ್ರಪಂಜರರುಂ । ಮಾರ್ತ್ತಂಡೋಜ್ವಳಕೀರ್ತ್ತಿಯುತರುಂ ।
22 ಶ್ವೇತಛತ್ರಚಾಮರಾದ್ಯನೇಕರಾಜ್ಯಲಕ್ಷಣಾಲಕ್ಷಿತರುಂ । ರಾಜಗ್ರಿಹಪೂಜಿತರುಂ । ಸ್ವಸ್ತಿ ಸಮಸ್ತ
23 ವಸ್ತು ವಿಸ್ತೀರ್ಣ್ನಘೂರ್ಣ್ನಿತಾರ್ಣ್ನವಪ್ರಣೂತಾನೂತಭುವನವಿಖ್ಯಾತಪಂಚಶತವೀರಶಾಸನ
24 ಲಬ್ಧಾನೇಕಗುಣಗಣಾಲಂಕ್ರಿತಸತ್ಯಸಾಚಾಚಾರುಚಾರಿತ್ರನಯವಿನಯವಿಗ್ನಾನವೀರವೀರಾ
25 ವತಾರವೀರಬಣಂಜುಸಮಯಧರ್ಮ್ಮಪ್ರತಿಪಾಲಕರುಂ । ನಯವಿನಯವಿಶುದ್ಧಗುಡ್ಡಗರು
23 ಡಧ್ವಜರುಂ । ವಿರಾಜಿತಮಾನಾನೂನವೀರಲಕ್ಷ್ಮೀಪುಳಕಿತಹರ್ಷಸದಾನಂದನರುಂ । ಸಾಹಸಸತ
27 ಬಳತ್ರಿಭುವನಪರಾಕ್ರಮೋಂನತರುಂ । ಬಲದೇವವಾಸುದೇವಖಂಡಳಿಮೂಲಭದ್ರವಂಸೋದ್ಭ
28 ವರುಂ । ಬಲುಕಿದಂಡಹಸ್ತರುಂ । ತಂಮೊಳೇಕಹಸ್ತರುಂ । ಏಕಯಿಕವೀರರುಂ । ಲೋಕೈಯ್ಕಮಾನ್ಯರುಂ । ನುಡಿ
29 ದಂತೆಗಂಡರುಂ । ಗಂಡರೊಳುಗಂಡರುಂ । ಕದನಪ್ರಚಂಡರುಂ । ಭಯಲೋಭದುರ್ಲ್ಲಭರುಂ । ಸತ್ಯರಾಧೇಯರುಂ ।
30 ಸಾಚಗಾಂಗೇಯರುಂ । ಆಹೆತ್ತುಂ ಯೆಡೆಮಱಿಯದೆಸೋಲದರುಂ । ನೆರೆದಡೆನಂಜುಗಳುಂ । ಹರದಡೆಮಂ

ಪೂರ್ವಮುಖ.

31 . . ಗಳುಂ । ಹೊಗೆವಲ್ಲಿಹುಲ್ಲನಿಕ್ಕುವರುಂ । ಅಳಿಕಾಱರುಂ ಬಂಡಾಱಕಾಱರುಂ । ಕೊಲ್ಪುದಕೆಜವನಂನರುಂ । ಬಲದಲ್ಲಿ
32 ಬಾಲಿಯಂನರುಂ । ಛಲದಲುದುರ್ಯ್ಯೋಧನರುಂ । ತ್ಯಾಗದಲುಕರ್ಣ್ನನಂನರುಂ । ಭೋಗದಲುಇಂದ್ರನಂನರುಂ ।

[33]ಗುಂಪಿನಲುಮಹಾಸಮುದ್ರಮಂಪ್ಪೋಲವರುಂ । ದುಷ್ಟಚತುಷ್ಟಯರಲಟಿಹೊಟಿನಿಟಿ
[34]ಉಗೋನಾಳಿಯುಂಮುಱಿದುತೇದುಬೂದಿಕೊಂಬರುಂ । ಬ್ರಹ್ಮರಾಕ್ಷಸಂಗೆಹೊಱಗೊಡ್ಡನೊ
[35]ಡ್ಡುವರುಂ । ಕೆಸಱಕಿಚ್ಚಿಡುವರುಂ । ದೆಸೆಗೆಬೊಬ್ಬಿಱಿವರುಂ । ಹೋಹಮಾರಿಯಚಲ್ಲವಾಡುವರುಂ । ಬಹ
[36]ಮಾರಿಯಗಿದಿಗ್ಗೊರ್ಗಂಬರುಂ । ಬಾರದಮಾರಿಗೆಬಳಿಯನಂಟುವರುಂ । ಯಿದ್ದಮಾರಿಗೆಬಿದ್ದನಿಕ್ಕುವರುಂ ।
[37]ಬಂಟೆಱಿಮಿತ್ತುವಕರೆವರುಂ । ಜವನಮೀಸೆಯನೊಲದುಯ್ಯಲಾಡುವರುಂ । ಮಿತ್ತುವಂತೊತ್ತಮ
[38]ಡಿಯಾಳುವರುಂ । ಅರಳಿಯಹೂತವಳಿಯತಿಗುಡರಕ್ಕಸನದಾಡೆಯಬೆಳುದಿಂಗಳನೊರೆಯ
[39]ಹೆಬ್ಬುಲಿಯಗಿಂಣಿಆಸಱೆಯಗೊಸನೆಯೆಂಬಿದಿಬೆಜಡವಂಪಿಡಿದುಪಾದಮಾರ್ಗಜಲಮಾರ್ಗ
[40]ದಿನಾನಾಪಟ್ಟಣವಂಪೊಕ್ಕುಚಕ್ರವರ್ತ್ತಿಯಮಾಣಿಕ್ಯಭಂಡಾರವಂತೀವಿಮಿಕ್ಕದ್ರಬ್ಯವನಾಹಾರ
[41]ಭಯಪೈಶಜ್ಯಶಾಸ್ತ್ರದಾನವಿನೋದಿಗಳುಂ । ಕಸ್ತೂರಿಕಾಮೋದರುಂ । ಹಯವತ್ಸರಾಜರುಂ । ರಾ
[42]ಜಗ್ರಿಹಪೂಜಿತರುಂ । ಆಶ್ರಿತಜನಕಲ್ಪವ್ರಿಕ್ಷರುಂ । ಗೋತ್ರಪವಿತ್ರಚಿಂತಾಮಣಿಗಳುಂ । ಕನಕಕಂಚುಳಿಕೆ
[43]ಕಾಮದೇವರುಂ । ಚೇಳಾಭರಣಭೂಸಿತರುಂ । ಶ್ರೀಮತುಕನಕದೇವನಕರುಮಾಡದಲುಹೊನಂಬತೆತ್ತಿಸಿದಅ
[44]ಗಣಿತಪ್ರತಾಪಲಂಕೇಶ್ವರರುಂ । ಶ್ರೀವೀರಲಕ್ಷ್ಮೀನಂದನವನಾಭೀಷ್ಟವಸಂತರುಂ । ಚೋಳಕುಲಾಂತಕರುಂ । ನಾಮಾದಿ
[45]ಸಮಸ್ತಪ್ರಶಸ್ತಿಸಹಿತಂ । ಚತುರುಯುಗಚತುರಾಭಿಧಾನಪರಂಪರಾಯಮಾನಮಪ್ಪಶ್ರೀಮದ
[46]ನಾದಿಯಗ್ರಹಾರಂಬಣಂಜುದಾದಿಪಟ್ಟಣಂಜಂಬೂದ್ವೀಪಶಿರೋಮಣಿಶ್ರೀಮತುಭಗವತೀದೇವೀಲಬ್ಧವರಪ್ರಸಾ
[47]ದೋಂನತರುಮಪ್ಪಅಯ್ಯಾವಳೆಯಅಯ್ನೂರ್ವ್ವಸ್ವಾಮಿಗಳುಂ । ಎಪ್ಪತ್ತೇಳುಕೋಟಿಘಟಿಕಸ್ಥಾ
[48]ನಕ್ಕೆ ಆಚಾರ್ಯ್ಯರಪ್ರತಿಷ್ಠಿಸುವಲ್ಲಿಸಮಸ್ತಪ್ರಶಸ್ತಿಸಹಿತದಕ್ಷಿಣಅಯ್ಯಾವಳೆ . .
[49]ಹಕೋಟೇಶ್ವರದಶ್ರೀಮದ್ರಾಜಗುರುಮಹಾವಾದಿರುದ್ರಶಕ್ತಿದೇವರ್ಗ್ಗೆಕೊಟ್ಟಶಾಸನಕ್ರಮ
[50]ವೆಂತೆಂದಡೆ ಆಕೋಟೇಶ್ವರದೇವರಯಂಗಭೋಗರಂಗಭೋಗಕ್ಕೆನಡಬಿಪ್ರಥಮಸ್ಥಳ । ಯಾಹಳ್ಳಿಗಣ
[51]ವ್ರಿತ್ತಿವ್ರತವರ್ತ್ತನೆಗೆಯ । ಧರ್ಮ್ಮಕ್ಕೆ । ಸಕಳಸಾಮ್ಯವೆಲ್ಲವಯಾಚಂದ್ರಾರ್ಕ್ಕತಾರಂಬರಂಧರ್ಮ್ಮಸ್ತಿರವಾಗಲಿಎಂ
[52]ದು । ಧಂರ್ಮ್ಮವಪ್ರತಿಷ್ಠಿಸಿದರುಯಾಸ್ತಳಕ್ಕೆಯುಂ । ಯಾಧರ್ಮ್ಮಕ್ಕೆಯುಂ । ಯಾಚಾರ್ಯ್ಯರುದ್ರಶಕ್ತಿ
[53]ದೇವರ್ಗ್ಗೆಯುಂ । ಯಾವನಾನೊಬ್ಬನುರಾಜಗಾಮಿತ್ವವಮಾಡಿದಡೆ । ಚೋರಗಾಮಿತ್ವವಮಾಡಿ
[54]ದಡೆ । ದುಜ್ರನತ್ವವಂಮಾಡಿದಡೆ । ಪುರುಷದ್ವೇಷವಮಾಡಿದಡೆ । ವಿಕರ್ಮ್ಮಯಕರ್ತ್ತಬ್ಯಗತ್ಯಗಮನವಂ
[55]ಮಾಡಿದವನು ಬ್ರಾಹ್ಮಣ । ಕ್ಷತ್ರಿಯ । ವೈಶ್ಯ । ಶೂದ್ರಯೀನಾಲ್ಕುಜಾತಿಯೊಳಗೆಯಾವವನ
[56]ಕೊಂದಡಂಜಾತಿವಿಜಾತಿಯಾತಿಯೆಂದುಹಿಡಿಹಿಡಿದುಎಳೆಯೆತಿನುಡಿವವನುಯಷ್ಟಾಂಗದ್ರೋಹನುಂ
[57]ಯಯ್ನೂರ್ವ್ವರಿಗೆಯೂ । ಏಳುವರೆಹಂನ್ನೊಂದುವರೆಗೆಯೂ । ನಾಲ್ಕುನಾಡಿಗೆಯೂ । ಹದಿನೆಂಟುಸ
[58]ಮಯಕೆಯೂ ಕೂಡಿದ್ರೋಹಿನಾಡಾಳಕ್ಕೆಯ್ಯಸಾಯಸಾಲುವನು । ಯವಗೆಯಟ್ಟಸಾಱಿಸಲಿಲ್ಲ ।
[59]ವ್ರಟ್ಟಬೈಸಲಿಲ್ಲ । ಅವನೊಡ್ಡಿದಹತಹಱಿಯಿತೆಹಣಿದ । ಬಿದ್ದುದೆಕೊರಡು । ಯಿಱಿದವನೆಬೀರವಣಿ
[60]ಗಸಮುದ್ರಮದ । ಯಿಕಂಗೆಮಾಡುತಯಿರಲುಅಯ್ಯಾವಳೆಯಯಯ್ನೂರ್ವ್ವರುಕೊಟ್ಟಕೆಲಸ ।
[61]ಕಂಡವರೆನೆಱೆವರು । ಯಿಱಿದವನೆಬೀರವಣಿಗವಿಜಯ । ಯಿಮರ್ಯ್ಯಾದೆಯನುಸೆಟ್ಟಿಗುತ್ತವಿಂಡ
[62]ಸಾದರೆಬೀರವಣಿಗಬಾರಿಕರುಮುಖ್ಯವಾಗಿಸಮಸ್ತಸಮಯವಾದಿಗಳುಕೊಟ್ಟದು । ದ್ರೋಹಿಱಿಸಿಯಾ
[63]ರಕೊಂದಡಂರುದ್ರಶಕ್ತಿದೇವರುಪುಣ್ಯಕ್ಕೆವೊಳಗು । ಇಪಾಪಕ್ಕೆಹೊಱಗು । ಸಮಯವಾದಿಗಳೆಮಾಡಿದ
[64]ವರು । ಕೋಟೇಶ್ವರವೆಂಬುದುದಕ್ಷಿಣಅಯ್ಯಾವಳೆಆಬಾಲಬ್ರಹ್ಮಚಾರಿಯಾದಿಯಾಗಿಆರುಮತಗೊ
[65]ಟ್ಟಡಂಅಈನೂರ್ವ್ವರುಮುಖ್ಯವಾಗಿಸಮುದ್ರಮತವಾಗಿಕೊಟ್ಟುದು । ಮಂಗಳಮಹಾ ಶ್ರೀ ಶ್ರೀ ಶ್ರೀ

269

ಅದೇ ದೇವಸ್ಥಾನದ ಅಂಗಳದಲ್ಲಿರುವ ವೀರಕಲ್ಲು.

ಪ್ರಮಾಣ—3′ 6″ × 2′ 3″.

[1]ಸ್ವಸ್ತಿಶ್ರೀಮತುಯಾದವನಾರಾಯಣಂಭುಜಬಳಪ್ರತಾಪಚಕ್ರವರ್ತ್ತಿ
[2]ಶ್ರೀಸಿಂಘಣದೇವವರುಷದಮನ್ಮಥಸಂವತ್ಸರದಆಶಾಡಬ ೯ ಆ । ದಂದು

3 ಶ್ರೀಮನುಮಹಾಮಂಡಳೇಶ್ವರಂಹುಸಿವರಸೊಲಗಂಡರದಾವ
4 ಣಿನಿಗಳಂಕಮಲ್ಲಚಲದಂಕರಾಮಬಂದಣಿಕೆಯಸೋಯಿದೇವರ
5 ಸರುವುಬ್ಬ್ಬಡಿಯೊಳಿರ್ದ್ದುಸಾಂತಳಿಗೆಯವರಕೂಡೆಕಾದುವಲ್ಲಿವು
6. ಯುಬಸವನುಹಲವಾಳುಕುದುರೆಯಂ ತಳ್ತಿಱಿದುಮೊಱೆ
7. ಸುರಲೋಕಪ್ರಾಪ್ತನಾದನು ॥ ದ್ವಿತೇನಲಬತೇಲಕ್ಷ್ಮಿಃ
8. ತೇನಾಪಿಸುರಾಂಗನೇಕ್ಷಣವಿದ್ವಂಶನೀಕಯಾ
9. ಚಿತಾಮರಣೇರಣೇ ॥ ಶ್ರೀಮಂಗಳಮಹಾ ಶ್ರೀ

270

ಅದೇ ದೇವಸ್ಥಾನದ ಪೂರ್ವದ್ವಾರದ ಬಲಭಾಗದ ೨ ನೇ ಕಂಭದಲ್ಲಿ.

1 ಜಾಣಜನಸೇವ್ಯಸತುಕವಿವಾಣೀಸ್ತುತಿಪಾತ್ರಸಕಳಸೌಖ್ಯನಿಧಾನಂಕ್ಷೋಣೀತ
2 ಳದೊಳಂಚೆಲ್ವಿನಗೌಹೋತ್ತರವೆನಿಕುವಾಣಬೇಡಸುದೇಸಂ ॥ ಆನಾಡಂದೆ
3 ಣಗಾವೆಯುಮಾನೋಂನತಸೋಮದೇವವಾಣೆಯನಧಿಕಂದೀನಾನಾಥಸುಮಿ
4 ತ್ರಂನಾನಾಗುಣಭೂಷಣಂಜಿತಾಹಿತಗೋತ್ರಂ ॥ ಸತುಪುತ್ರನಪ್ಪರವಿದೇವವಾಣೆಯನ
5 ಪ್ರತಾಪೋಂನತಿಯೆಂತೆಂದಡೆ ॥ ವರಮೂರ್ತ್ತಿಕಾಮದೇವಂಪರನಾರಿಸಹೋದರಂಪ್ರತಾಪನಿಧಾ
6 ನಂಧರೆಮೆಚ್ಚೆಸತ್ಯಸಾಗರಅರಿನೃಪಕಾಳಾಗ್ನಿರುದ್ರನೀರವಿದೇವಂ ॥ ಸರ್ಬ್ಬೇಸ್ವರಸಖ್ಯಪ್ಯಂಸರ್ಬ್ಬ
7 ರ್ತ್ಥಿಬ್ರಾತಕಲ್ಪಕುಜನತಿತೇಜಂಪರ್ಬ್ಬದಕೀರ್ತ್ತಿಗಧೀಸಂಸರ್ಬ್ಬಕಳಾಕುಶ
8 ಳನೂರ್ಜಿತಂರವಿದೇವ ॥ ವಂದಿಜನ[ಕ]ಲ್ಪವೃಕ್ಷಂಸಂದಣಸಿಹ್ವಾದಿಬಿರುದಭೂಷಿತ
9 ಸೌರ್ಯ್ಯನಂದೀಸನಾಥಭಕ್ತಂಕುಂದೇಂದುವಿಳಾಸಕೀರ್ತ್ತಿಯೀರವಿದೇವಂ ॥ ಅಂತು
10 ನೆಗಳ್ದರವಿದೇವನಪಟ್ಟಮಹಾದೇವಿಯಪ್ಪಮಲ್ಲಬಾಯಿಯರಗುಣಗಳೋಂ
11 ನತಿಎಂತೆಂದಡೆ ॥ ಪತಿಇತೆಸಾಧುಸದುಗುಣಿಯಸೋವತಿಮುಂನತಧರ್ಮ್ಮಮೂರ್ತ್ತಿಊ
12 ರ್ಜ್ಜಿತನಿಜಗೋತ್ರಭೂಷಣೆಜನಸ್ತುತೆಯಾಚಕಕಾಮಧೇನುಸಂನುತಮಹನೀಯವೈ
13 ಭವಗುಣಾಸ್ಪದೆಮಲ್ಲಬಾಯಿಯೆಂದತಮುದದಿಂದೇಂಬಣ್ಣಿಸುಉದೀರವಿದೇವನಕಾಂತೆ[ಯಂ]ಜ
14 ನಂ ॥ ಅನ್ತುನೆಗಳ್ದರವಿದೇವವಾಣೆಯಗಂಮಲ್ಲಬಾಯಿಗಂಜನಿಯಿಸಿದಸುಪುತ್ರಕುಲದೀ
15 [ಪ]ಕಎಂದೆನಿಸಿದಸೋಯಿದೇವನಪ್ರತಾಪವೆಂತೆಂದಡೆ ॥ ಜಳನಿಧಿವೇಷ್ಟಿತವಸುಧಾವ
16 ಳಯನುತಂಪ್ರಲದಬಲದವಿಕ್ರಮಗುಣದುಜ್ವಳಕೀರ್ತ್ತಿಸೋಯಿದೇವಂಪಲಿತಸುರ
17 ಕ್ಷಾಮಾದಿವಂದಿಜನತಾನಂದ ॥ ಧರೆಯೊಳುಮಾಱಾಂಪದಟರಯಿರುಳುಹಗಲಱ
18 ಸಿತೊಳಲ್ದುಕಾಣದೆಸೋಯಂಸುರಲೋಕದೊಳಗೆಕಲಿಗಳನಱಸುವತೆಱದಿಂದಯಿಂದ್ರಪು
19 ರಮಂಪೊಕ್ಕಂ ॥ ಆಸೋಯಿದೇವನಿಂಕಿಱಿಯಎಕ್ಕಮದೇವನಪ್ರತಾಪಂಎಂತೆಂದಡೆ ॥ ಅರಿಬಿರುದ
20 ಸೂಱೆಕಾಱಂಪರಹಿತನಿರತಪ್ರಿತಪ್ರತಾಪಸಹಾಯಸ್ಫುರದುರುಕೀರ್ತ್ತಿವಿಳಾಸಂ
21 ವರಪುತ್ರಂಮಲ್ಲಬಾಯಿಎಕಮದೇವಂ ॥ ತದನುಜನಪವಿಕ್ರಮದೇವನಪ್ರತಾಪ
22 ಯೆಂತೆಂದಡೆ ॥ ವೀರದೊಳುವಿಕ್ರಮಾಂಕನುದಾರದರವಿಸೂನುಧೈರ್ಯ್ಯಸಾಗರನಮಳಂ
23 ಚಾರುಚರಚರಿತಗುಣಗಣರಾರಾಜಿತನಿಜಕುಳಾಬ್ಧಿವಿಕ್ರಮದೇವಂ ॥ ಕಾಳಾಮು
24 ಖಚೂಡಾಮಣಿಭಾಳೇಕ್ಷಣಮೂರ್ತ್ತಿಸಪ್ರಸಕ್ತಿಯತಿಪಂಪಾಳಿತವಿಬುಧಬ್ರಾ
25 ತನೃಪಾಳಕಸಿಂಹಣವಿನೂತಚಾರುಚರಿತ್ರನು ॥

ಪಶ್ಚಿಮಮುಖ.

26 ಜಯತಿವಿತತಕೀರ್ತ್ತಿಃಸಜ್ಜನಾನಂದಮೂರ್ತ್ತಿಃಶ್ರಿತಜನಪರಿಪೂರ್ತ್ತಿರ್ಧರ್ಮ್ಮಕಾರಿ
27 ಏಕ್ಯತಾರ್ತ್ತಿ । ನತಜನಗತಭೀತಿರ್ವೈರಿಣಾಂದತ್ತಭೀತಿಃಸ್ರುತಿನಿಕರಸುನೀತಿರ್ಭ್ಭೂತ
28 ಳೇರುದ್ರಶಕ್ತಿಃ ॥ . . . . ಸರ್ವ್ವೇಸ್ವರದೇವನಗುಣೋಂನತಿಯೆಂತೆಂದಡೆ ॥ ಸೋ
29 ಯಂಸರ್ವ್ವೇಸ್ವರೋಭೂತಿಜಿತಕಲ್ಪದ್ರುಮೋಂನತಃಬ್ರಹ್ಮಾಂಡಮಂಡಳೀಕೀರ್ತ್ಯಾ
30 ಯ . . ಮಾಂತಃಪುರಾಯತೇ ॥ ಅನ್ತನೆಗಳ್ದವಿಕ್ರಮದೇವನಸಕವರುಷ
31 ದ ॥ ೧೦೭೦ ಸೌಮ್ಯಸಂವತ್ಸರದಸ್ರಾವಣದಪೂರ್ನ್ನಮಿಸೋಮವಾರಬ್ಯತೀಪಾತದಂದು
32 ಶ್ರೀಕೋಟೀಶ್ವರದೇವರಸಂನಿಧಾನದಲ್ಲಿತನ್ನ ಪುಣ್ಯಸತಿಎಲ್ಲಹದೇವಿಸಹಿತಶ್ರೀಮದ್ರಾಜಗುರು
33 ಮಹಾವಾದಿಏಕ್ಕೋಟೀಚಕ್ರವರ್ತ್ತಿರುದ್ರಶಕ್ತಿದೇವರಕಯಲುಸರ್ವ್ವೇಶ್ವರದೇವರಮುಂದಿಟುಮೂ
34 . ದೆಯಲುಗದ್ಯಾಣದಭತಕೊಟ್ಟುಮತ್ತ . . . ಬೆಯಕೆಳಗೆಸಿರದಗದ್ದೆಯ
35 ನುಕೊಂಡುತಂನತಂದೆರವಿದೇವವಾಣೆಯಮಲ್ಲುಬಾಯಿಸೋಯಿದೇವಏಕ್ಕದೇವ
36 ಯಿಂತಿವರುಸಹಿತತಂದೆಯದೆಸೆಯಲಿಇಪ್ಪತೊಂದುತಾಯದೆಸೆಯೊಳುಇಪ್ಪತೊಂದು
37 ಕುಲವನುಸಲಿಸಲುವೆಡಿದೆವಸಹತ್ತುಮಾನಿಸಬ್ರಾಹ್ಮಣಭೋಜನಕ್ಕೆ ಛತ್ರಧರ್ಮ್ಮ
38 ವನುಮಾಡಿರುದ್ರಶಕ್ತಿದೇವರಕೈಯಲುಎಡಗೈಯನುಕೊಟ್ಟುಆರು
39 ದ್ರಶಕ್ತಿದೇವರುತಮ್ಮಸಂತಾನಗಾಮಿಯಾಗಿಚಂದ್ರಾದಿತ್ಯಕೋಟಿನಾಥನುಳ್ಳನ
40 ನಡಸಿಪಾಲಿಸುವರು ॥ ನಡಸದಿದ್ದಡೆವಾರಣಾಸಿಯಲಿಸಹಸ್ರಕವಿಲೆಯ
41 ಕೊಂದದೋಷ ॥ ಸ್ವದತ್ತಾಂಪರದತ್ತಾಂವಾಯೋಹರೇತ್ತುವಸುಂಧರಾಂಷಷ್ಟಿರ್ವ್ವರುಷಸ
42 ಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿಃ ॥ ದಾನಂವಾಪಾಲನಂವಾಪಿದಾನಾಚ್ಛ್ರೇಯೋ
43 ನುಪಾಲನಂದಾನಾಸ್ವರ್ಗ್ಗಮವಾಪ್ನೋತಿಪಾಲನಾದಚ್ಯುತಂಪದಂ ॥ ಯೀಧರ್ಮ್ಮ
44 ವನುಮಾಡಿದಏಕ್ಕದೇವಎಲ್ಲಹದೇವಿಚಂದ್ರಾರ್ಕ್ಕತಾರಂಬರೆಸ್ತಿರಜೀ
45 ವಿಮಂಗಳಮಹಾಶ್ರೀ ಶ್ರೀ

271

ಅದೇ ಕಂಭದ ಪೂರ್ವ್ವಮುಖ

46 ಶ್ರೀಮತುಸಂಧಾಣಿಸಿಹ್ಮವಿ
47 ಕ್ಕದೇವವಾಣೆಯನುಮಾ
48 ಡಿದಛತ್ರದಧರ್ಮ್ಮಗಳು

272

ಅದೇ ದೇವಾಲಯದ ರಂಗಮಂಟಪದ ಪೂರ್ವ್ವ ಬಾಗಿಲ ೨ನೇ ಕಂಭದಲ್ಲಿ.

1 ಜಾಣಜನಸೇವ್ಯಸತುಕವಿವಾಣೀಸ್ತುತಿಪಾತ್ರಸಕಳಸೌಖ್ಯನಿಧಾನಂ
2 ಕ್ಷೋಣೀತಳದೊಳುಚಲ್ವಿನಗೌಣೋತ್ತರವನಿಕುಮಾಣಬೇಡಸುದೇಸಂ ॥
3 ಆನಾಡಂದೆಣಗಾವೆಯಮಾನೋಂನತಸೋಮದೇವವಾಣೆಯನಧಿಕಂದೀ
4 ನಾನಾಥಸುಮಿತ್ರಂನಾನಾಗುಣಭೂಷಣಂಜಿತಾಹಿತಗೋತ್ರಂ ॥ ಸತುಪುತ್ರನಪ್ಪ
5 ರಯಿದೇವವಾಣೆಯನಪ್ರತಾಪೋಂನತಿಯೆಂತೆಂದಡೆ ॥ ವರಮೂರ್ತ್ತಿಕಾಮದೇವಂಪ
6 ರನಾರೀಸೋದರಪ್ರತಾಪನಿಧಾನಂಧರೆಮೆಚ್ಚೆಸತ್ಯಸಾಗರಅರಿನೃಪಕಾಳಾಗ್ನಿರುದ್ರನೀರವಿದೇವಂ ॥
7 ಸರ್ವ್ವೇಶ್ವರಸಚ್ಛಿಷ್ಯಂಸರ್ವ್ವಾರ್ತ್ತಿಬ್ರಾತಕಲ್ಪಕುಜನತಿತೇಜಂಪರ್ವ್ವಿದಕೀರ್ತ್ತಿಗಧೀಶಂಸರ್ವ್ವಾಕ
8 ಳಂಕುಷಳನೂರ್ಜ್ಜಿತಂರವಿದೇವಂ ॥ ವಂದಿಜನಕಲ್ಪವೃಕ್ಷಂಸಂದಣಿಸಿಂಹಾದಿಬಿರುದಭೂಷಿ
9 ತಸಾಯ್ಯ್ರನಂದೀಶನಾಥಭಕ್ತಂಕುಂದೇಂದುವಿಳಾಸಕೀರ್ತ್ತಿಯೀರವಿದೇವಂ ॥ ಅನ್ತನೆಗಳ್ದರವಿದೇವನ

10ಪಟ್ಟಮಹಾದೇವಿಯಪ್ಪಮಲ್ಲಬಾಯಿಯರಗುಣಗಣೋನ್ನತಿಯೆಂತೆಂದಡೆ ॥ ಪತಿಹಿ
11ತೆಸಾಧುಸದ್ಗುಣಿಯಶೋವತಿಮುನ್ನತಧರ್ಮ್ಮಮೂರ್ತ್ತಿಪೂಜ್ಜಿತನಿಜಗೋತ್ರಭೂಷಣೆ
12ಜನಸ್ತುತೆಯಾಚಕಕಾಮಧೇನುಸಂನುತಮಹನೀಯವೈಭವಗುಣಾಸ್ಪದೆಮಲ್ಲಬಾ
13ಯಿಯೆಂದತಿಮುದದಿಂದೆಬಣ್ಣಿಸುವುದೀರವಿದೇವನಕಾಂತೆಯಂಜನಂ ॥ ಅನ್ತುನೆಗಳ್ದರವಿ
14ದೇವಮಾಣೆಯಂಗಂಮಲ್ಲಬಾಯಿಗಂಜನಿಯಿಸಿದಸುಪುತ್ರಕುಲದೀಪಕಎಂದೆನಿಸಿದಸೋಈ
15ದೇವನಪ್ರತಾಪಯೆಂತೆಂದಡೆ ॥ ಜಳನಿಧಿವೇಷ್ಟಿತವಸುಧಾವಳಿಯನುತಛಲದಬಲದವಿಕ್ರ
16ಮಗುಣದುಜ್ವಳಕೀರ್ತ್ತಿಸೋಯಿದೇವಪಲಿತಸುರಕ್ಷುಮಾಜವಂದಿಜನತಾನಂದಂ ॥ ಧರೆಯೊಳು
17ಮಾಱಾಂಪಡಟರಯಿರುಳುಹಗಲಱಸಿತೊಳಲ್ದುಕಾಣದೆಸೊಯ್ಯುಸುರಲೋಕದೊಳ
18ಗೆಕಲಿಗಳನಱಸುವತೆಱದಿಂದಯಿಂದ್ರಪುರವಂಪೊಕ್ಕಂ ॥ ಆಸೋಯಿದೇವನಕಿಱಿಯವಿ
19ಕ್ಕಮದೇವನಪ್ರತಾಪಯೆಂತೆಂದಡೆ ॥ ಅರಿಬಿರುದಸೂಱೆಕಾರಂಪರಹಿತನಿರತಬ್ರತಪ್ರತಾಪ
20ಸಹಾಯುಸ್ಫುರದುರುಕೀರ್ತ್ತಿವಿಳಾಸವರಪುತ್ರಮಲ್ಲಬಾಯಿಗೆಕ್ಕಮದೇವ ॥ ತದನುಜನಪ್ಪ
21ವಿಕ್ಕದೇವನಪ್ರತಾಪವೆಂತೆಂದಡೆ ॥ ವೀರದೊಳುವಿಕ್ರಮಾಂಕನುದಾರದರವಿಸೂನುಧೈರ್ಯ್ಯಸಾ
22ಗರನಮಳಚಾರುತರಚರಿತಗುಣಗಣರಾಜಿತನಿಜಕುಳಾಂಬುಧಿವಿಕ್ರಮದೇವಂ ॥ ಕಾಳಾಮು
23ಖಚೂಡಾಮಣಿಭಾಳೇಕ್ಷಣಮೂರ್ತ್ತಿರುದ್ರಶಕ್ತ್ತಿಯತೀಶಪಾಳಿತವಿಬುಧಬ್ರಾತನುಪಾಳಕಸಿಂಹಣ
24ವಿನೂತಚಾರುಚರಿತ್ರನು ॥ ಅನ್ತುನೆಗಳ್ದವಿಕ್ಕಮದೇವನುಸಕವರ್ಷ ೧೧೬೩ ನೆಯ ಪ್ಲವಸಂವತ್ಸರದ
25ಶ್ರಾವಣದಮಾವಾಸೆಸೋಮವಾರಬ್ಯತೀಪಾತದಂದುಶ್ರೀಕೋಟೀಶ್ವರದೇವರಸ್ಥಾನಾಚಾರ್ಯ್ಯ ಸರ್ವ್ವೇಶ್ವರದೇ
26ವರಸತುಪುತ್ರರುದ್ರಶಕ್ತಿದೇವರಪಾದಪ್ರಕ್ಷಾಳನಂಮಾಡಿಶ್ರೀಕೋಟೀಶ್ವರದೇವರಭೌ
27ಯಾರವಂಮಾಡಿಸಲೆಂದುರಾಯ ಗ ೧೬೫ ಕೊಟ್ಟುಮತ್ತಂಶ್ರೀಕೋಟೀಶ್ವರದೇವರ ೧ ಹೊತ್ತಿನವುಪಹಾರ
28ನಂದಾವಳಕ್ಕೆದುಗ ೧೦೦ ಕೊಟ್ಟುಕೃತಾರ್ತನಾದನುಮಂಗಳಮಹಾ ಶ್ರೀ ಶ್ರೀ ಶ್ರೀ ॥

273

ಅದೇ ಕಂಭದ ಪೂರ್ವಭಾಗದಲ್ಲಿ.

1ಶ್ರೀಮತುಸಾವಂತಸದಾಣ
2ಸಿಹ್ವವಿಕ್ಕದೇವಭೌಯಾರಕೆಕೊ
3ಟ್ಟ ೧೧೬೩ ಮತ್ತಉಪಾರ
4ನಂದಾವಳಕೆಗ ೧೦೦ ಕೊಟ್ಟ
5ಬರಸಿದಸಾಸನವು ॥

274

ಅದೇ ರಂಗಮಂಟಪದ ಕಂಭದಲ್ಲಿ.

1ಜೇಂಟಿಮನಾಗದೇವಕೋಟನಾಥದೇವರ
2ಲಿಈನಂದಿಯಪ್ರತಿಷ್ಟೆಯಮಾಡಿದ
3ಮಂಗಳಮಹಾ ಶ್ರೀ ಶ್ರೀ ಶ್ರೀ ॥

275

ಅದೇ ರಂಗಮಂಟಪದ ದಕ್ಷಿಣದ್ವಾರದ ಒಳ ಜಗಲೀಮೇಲೆ ಹಾಸಿರುವ ಒಂಡೇಮೇಲೆ ಬರೆದಿರುವದು.

ಪ್ರಮಾಣ 4′ × 3′ 6″.

1ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಳೋಕ್ಯನಗರಾರಂಭಮೂಲಸ್ತಂಭಾಯಶಂಭವೇ ॥ ಶ್ರೀಮತೇಕೋ
ಟಿನಾಥಾಯಪರಮಾನಂದಮೂರ್ತ್ತಯೇಸರ್ವ್ವಭೂತಹಿತಾರ್ತ್ಥಾಯ ಜಗತ್ಕಾ

2ರಣಕರ್ತ್ತಯೇ ॥ ಶ್ರೀಮದ್ಗಂಗಾತರಂಗೋಚ್ಛಳಿತಕಣಲವನ್ಮೌಕ್ತಿಕೋದ್ಭಾಸಿಜೂಟಂವ್ಯೋಮಾತ್ಮೇಂದೂಗ್ರರೋಚಿಃಪ್ರಥು ವಿಹುತವಹಂಮಾರುತಾಂಭಷ್ಟಮೂರ್ತ್ತಂವಾಮಸ್ಸದ್ಯೋದ್ಭವೇಶಾಂನ್ಯಥತ

3ತ್ಪುರುಷಾಘೋರಸತ್ಪಂಚವಕ್ತ್ರಂಶ್ರೀಮತ್ಕೋಟೀಶನೀಶಂಸಕಳಜನಮನೋಭೀಷ್ಟಮಂಮಾಡುಗೆಂದುಂ॥ ಕ ॥ ಬಪ್ಪವನಾಗ ರಖಂಡದೊಳಿರ್ಪ್ಪ ಬ್ರಹ್ಮತಾನಗ್ರಹಾರವಸುಧಾರಮಣೀದ

4ರ್ಪ್ಪಸ್ತನಾಗ್ರಹಾರಂತಪ್ಪದೆನಲ್ಕುಪ್ಪಟೂರುರಮಣೀಯತೆಯಂ ॥ ತರದಿಂದೊಪ್ಪುವದೇವತಾಭವನದಿಂಪೊಂಗೋಂಟೆಯಿಂಚೆಲ್ವ ನಾಳ್ದಿರೆಸಾಧಗ್ರಹದಿಂಲಸದ್ವಿಪಣಿವೀಧೀಮಾರ್ಗ್ಗದಿಂಖಾತಿಕಾ

5ಪರಿವೇಷ್ಟ್ಯಂತರದಿಂಚಳತ್ಸ . . . . ಮಾಸಳಿಂವೇಶ್ಯಮಂದಿರದಿಂದಂನೆಬಿಕುಪ್ಪಟೂರ್ಕ್ಕರಮದೇಂಕಣ್ಗೆಂಪಡಂಗಾದುದೋ ॥ ಏಳಿಸಿತಳಕಾಪುರಮಂಜೋಳಿಸಿತಮರಾವತೀಲಸತ್ಪುರವರಮಂ

6ಮೇಳಿಸಿತುಭೋಗವತಿಗೆನೆಪೋಲಿಪು . . . . . . ಂನಭಿರಾಮತೆಯಂ ॥ ಅನ್ತಾಗ್ರಾಮಾಂತರದೊಳು ॥ ಕೈಳಾಸಾದ್ರಿಯನೇಳಿಸಿಪಾ ಳಿಸುವೆಂಭಕುತಜವಮನೆಂಬಭರದಿಂಶೂಳಿಭವಾನಿಸಮೇತಂಲೀ

7ಲೆಯಿನೆಳ್ತಂದುನಿಂದಕೋಟೀನಾಥಂ ॥ . . . . . . ದ್ರಿಯವಿಶ್ವಕರ್ಮ್ಮನಭವಂಗೆಂದೊಲಿದುಸದ್ಭಕ್ತಿಯೊಳ್ಬರದಿಂಕಂಡರಿಸಿಟ್ಟನೆಂಬಿ ನೆಗನೇಕದ್ರಾವಿಡಂಭೂಮಿಜಂಪಿರಿದುಂನಾಗರಮೊಂಬಬಹುವಿಧ(ದ)ಭದ್ರೋ

8ಪೇತದಿಂಕಣ್ಗೆಮಂದಿರೆಕೋಟೀಶಭವಾಲಯಂಸುಲಲಿತಂಸಾಮ್ಯಂಕರಂಸಾಷ್ಟಮಂ ॥ ತಳಿರಿಂದೊಪ್ಪುವಶಾಕೆಪಣ್ಭರದಿನಿಂಬಾಗಿದ್ದ ರಂಭಾವನಂತಿಳಿನೀರಂತಳೆದಿರ್ಪ್ಪಕಾಯ್ಗುಡಿಗಲಂಪೇರಿರ್ದ್ದಚೆಂದೆಂಗುಕತ್ತ

9ಲೆಯಂಸಂದಿಪನಾಗವಳ್ಳಿಕೊನೆಯಿಂಚೆಲ್ವಾದಪೂಗಾರ್ತ್ಥಮಂಕಳಿಕಾಬ್ರಾತಮನಾಂತಜಾತವೆಸೆಗುಂಕೋಟೀಶಪಾರಾನ್ಯದೊಳು ॥ ಕ ॥ ಪಾಡುವತುಂಬಿಗಳಿಂಕಡುಗೋಡುವಪುಳಿಲಿಂತಳಿ

10ರ್ತ್ತವೆಸರಾಜಿಗೆಬಂದಾಡುವನವಿಲವಿರಹಿಗೆಸೂಡಂಮಾಡುವಲತಾವನಂಪಾಳವನಂ ॥ ತಾಮರಸಕುಮುದಕುಟ್ಮಳಹೇಮಸರೋಜಂರಥಾಂಗಕುರವಕನಿನದಂಕೋಮಳಭರಿತಂಚಲಿ

11ತಂಸಾಮಜನಿವಹಂತಟಾಕಪಾರತಟಾಕಂ ॥ ವ ॥ ಅನ್ತುವಿರಾಜಿಸುವನಂತಕೋಟೀಶ್ವರತ್ರಿಭುವನೈಕರಕ್ಷಾಮಣಿಯನಾಶ್ರ ಯಿಸಿರ್ದ್ದ ॥ ಸ್ವಸ್ತಿಯಮನಿಯಮಸ್ವಾಧ್ಯಾಯಧ್ಯಾನಧಾರ

12ಣಮೌನಾನುಷ್ಠಾನಜಪತಪಸಮಾಧಿಶೀಲಗುಣಸಂಪಂನರುಂಸಕಳವಿದ್ವಜ್ಜನಪ್ರಸಂನರುಂಋಗ್ಯಜಸ್ಸಾಮಾಥರ್ವ್ವಣಚತು ರ್ವ್ವೇದವೇದಾರ್ತ್ಥಪ್ರವೀಣರುಂಯತಿಚತುರಕಿತ್ರಕಾರಕರುಂ ॥

13ಪ್ರತಿಪಕ್ಷತಾರ್ಕ್ಕಿಕಮನೋಗರ್ವ್ವಪರ್ವ್ವತಭೇದನವಜ್ರದಂಡರುಂಉಪನ್ಯಾಸಗೀರ್ವ್ವಾಣವಾಣೀತರತ್ತರಂಗರುಂಶಿವಾಗಮವಾ ರ್ದ್ಧಿವರ್ದ್ಧನಸುಧಾಕರರುಂವಾದಿಗಜಮಸ್ತಕ

14ಶೂಲರುಂಚತುರ್ದ್ದಶಪ್ರಮಾಣಾಂನ್ವಿತಪ್ರಸಿದ್ಧಪ್ರತಿಪತ್ಯನವದ್ಯಹೃದ್ಯನಿತ್ಯಜ್ಞಾನಾನಂದಪರಶಿವಸ್ವರೂಪಾವಳೋಕನತತ್ಸ್ವ ರೂಪರುಂಯತಿಸಾರ್ವ್ವಭೌಮರುಂಯೆಕ್ಕೋಟಿಸಮ

15ಯಚಕ್ರವರ್ತ್ತಿಸಪ್ತಾಹತ್ತರಸ್ಥಾನಾಚಾರ್ಯ್ಯರುಂಶ್ರೀಸ್ವಯಂಭುಕೋಟಿನಾಥದಿವ್ಯಶ್ರೀಪಾದಪದ್ಮಾರಾಧಕರುಂದುಃಕರ್ಮ್ಮ ಬಾಧಕರುಮಪ್ಪರುದ್ರಶಕ್ತಿದೇವರತಪಪ್ರಭಾ

16ವಮೆಂತೆಂದಡೆ ॥ ವೃ ॥ ಕಾಮವನೇರ್ವ್ವಿಕ್ರೋಧಮನಡರ್ಪ್ಪಿಸಿಲೋಭಮನೆಯ್ದೆತೂಳ್ದಿಮತ್ತಂಮುಳಿಸಿಂದೆಮೋಹದಳವಂಪಿ ಚಿಪಿಂಗಿಸಿಯುನ್ಮದಂಗಳಂಸಾಮದಿನೂಂಕಿಮಾತ್ಸರ್ಯ್ಯಮಂಬಿಡೆಪಾ

17ಱಿಸಿದಂದೆನಲ್ಕೆಮತ್ತಾಮುನಿಪುಂಗವಂಗೆಹರಮೂರ್ತ್ತಿಗೆಯಾದ್ವೊರೆರುದ್ರಶಕ್ತಿಯೊಳು ॥ ಗಿರಿಜೆಯಸಂಗವಿಲ್ಲದಮರುಂನದಿ ಯೊಳ್ಸಮಸಲ್ಲದಾವಗಂಮರುಳಗಣಂಗಳೊಳ್ಬೆರಸಿಯಾ

18ಡವೆಡಕವಾಳಹಸ್ತದೊಳ್ಧರಿಸದಚಂಡಮಾಳಕೊರಳಲ್ಲಿನಿಸಿಲ್ಲದಶಂಭುವೆಂಬುದೀಶ್ವರವರಮೂರ್ತ್ತಿಯಂಬುದುಯತೀಂದ್ರನತಂ ದ್ರನರುದ್ರಶಕ್ತಿಯಂ ॥ ವ ॥ ಅನ್ತೆನಿಸಿದ್ದಯತೀಶ್ವರಂ

19ರುದ್ರಶಕ್ತಿಮಹಾಮಹಿಮರಪ್ರೇಮಾನುಜಂವಿನೇಯಜನಕಳ್ಪಭೂಜನೇಕೈಕವಾಕ್ಯನುಭಯಭವಸಾಫಲ್ಯತ್ರಿಕರಣಶುದ್ಧಚ ತುರ್ವ್ವಿಧತಂತ್ರಸಾರಪಂಚಬಾಣವಿಧ್ವಂಸನಅರಿಷಡ್ವರ್ಗ್ಗವಿಚ್ಛೇದ

20ನಸಪ್ತವ್ಯಸನವರ್ಜ್ಜಿತಅಷ್ಟಮದನಿವಾರಣನವನಿಧಿಸನಾಥದಶದಿಶಾಧವಳಿತಕೀರ್ತ್ತಿಯೇಕಾದಶರುದ್ರಾವತಾರದ್ವಾದಶಾದಿತ್ಯಪ್ರ ತಾಪನೆನಿಸಿದಚಿಕ್ಕಸರ್ವ್ವೇಶ್ವರಶಕ್ತಿ

21ದೇವರಮಹಾಮಹಿಮೆಯೆಂತೆಂದಡೆ ॥ ವೃ ॥ ವನಮಂಪೊಕ್ಕವಸಂತಕಂಭಯದೆಪುತ್ರಂಪೊಕ್ಕನಾಚಂದ್ರಮಂಜೆನುಗುತ್ತುಂಬಿ ಡೆಪಾಱಿದತ್ತಳಿಕುಳಂತೆಂಗಾಳಿಮೆಯ್ಯೊಕ್ಕುವಿಂನೆನಗಾರುಂ

22 ನೆರೆವಿಲ್ಲಮತ್ತಗೆಲಲಿಂಸೇನಾಪ್ಪೆನೆಂದಂಗಜಾತನುಮಂಬೀ[.]ಸಿಭೀತಿಗೊಂಡನೆನಲಿಂನೇನೆಂಬೆಸರ್ವ್ವೇಶನಾ ॥ ಕಾಳಾಮುಖಬ್ರ
ಹ್ಮಾನ್ವಯಶೀಲಗುಣಂಶಿವಕಥಾದ್ಯನೇಕಸ್ಮೃತ್ಯರ್ತ್ಥಾಳಂಕಾರಸಾರವಾಕ್ಯಂ

23 ಪಾಳಿತಸಜ್ಜನವಿನೂತಯತಿಸರ್ವ್ವೇಶಂ ॥ ಕೊರಲೊಳಂಕಱೆಸಿರದೊಳುಪೆಱೆಪಿರಿದುಂಜಡೆಯುಳ್ಳಿಗಂಗೆತೊಡೆಯೊಳಂಶಿವೆಮತ್ತು
ರದೊಳಂಕರೋಟಿತೊಲಗಿದಹರನೆಭೂಪ

24 ಯತಿವರೇಣ್ಯಸರ್ವ್ವೇಶ್ವರನಾ ॥ ವೃ ॥ ಜಡೆಯಿಂದೊಪ್ಪುವಪುಪ್ಪಚಾಪಸಿತಭಸ್ಮೋದ್ಧೂಳಿತಾಂಗಕ್ಕೆನೇಪ್ಪಡೆದಿರ್ದ್ದಂಗಜ
ಮಿತ್ರಚಾರುತರಕಾಶಪ್ರಚ್ಛದಚ್ಛಾದಿತಕ್ಕೆಡಗೊ

25 ಟ್ಟಪ್ಪಶಶಾಂಕನೆಂಬನುಡಿಯುಂಲೋಕಕ್ಕೆನಿಶ್ಚಯಿಸ್ಸಿದಂಗಡತಾನೆಂದೊಡದೇವೊಳ್ಗದ್ಧಪುದೊಪೇಳ್ಸರ್ವ್ವೇಶಯೊಗೀಂದ್ರನಾ ॥ ಉಗ್ರ
ತಪಶ್ಚರಣದಿಲೋಕಾಗ್ರಣಿಯುಂವರಳೆಗೆಲ್ದಭರದಿಂಮದನಂನಿಗ್ರ

26 ಹದಿಂದೆಸೆವಯೋಗಸಮಗ್ರತೆಯಿಂನಿಂದನೆಸೆಸುವಂಸರ್ವ್ವೇಶಂ ॥ ಶೂಲಿಯುಹೊಸಲುರಿಗಣ್ಣನೆಭೂಳೀಂದುಪ್ರಭನಕೋಪದುಪು
ತರಶಿಖಿಯುನೆಕಾಳಾಗ್ನಿರುದ್ರನೆಂದೆನೆಸಾಲ್ವಂಸರ್ವ್ವೇಶಮು

27 ನಿಪಂದೋರ್ವ್ವಳವಿಜಯಂ ॥ ವೃ ॥ ಭರದಿಂದಂಬಲುವಿಲ್ಲುದಿವ್ಯಶರಮೆತ್ತಾಸುಂಕರಂಕೈಗೆವಂದಿರದತ್ತಾದೊಡೆಪೇಳಲೇನಱಿಯೆ
ನೆತ್ತಂಬಂದುಸಂನದ್ಧನಾಗಿರೆನಿಂದಿದ್ರೋಡೆವುಗ್ರಕೋಪಶಿಖಿಯಿಂದಂಭಸ್ಮಮೇ

28 ನಾಗದೇಧರಣೀಮಂಡಳಮುಂಹರಂತ್ರಿಪುರಮಂಸುಟ್ಟಂತೆಸರ್ವ್ವೇಶನಾ ॥ ಸಿಡಿಲಪೊಡಪ್ಪುವುಗ್ರತರಮಾರಿಯುಮಾಮುಸಕಂ
ಗಜಾರಿಯೊಳ್ತೊಡದಂಪರಾಕ್ರಮಂತರಣಿಮಂಡ

29 ಳದೆಡೆಯತೇಜರಾಜಿನೋಪ್ಪಡೆಲಯಕಾಲರುದ್ರನುರುಮೂರ್ತ್ತಿತೆಭೈರವನಾಂತರೌದ್ರನೇಪ್ಪಡಿದಿರೆಚಿಕ್ಕದೇವಯತಿಪಾಗ್ರ
ಣಿಯೊಳ್ನೆಲೆಗೊಂಡುನಿಂದುದೋ ॥ ಕ ॥ ನಚ್ಚಿನಬಿಲ್ಲು

30 ವಾಕಂಉಚ್ಚಿರ್ಕರಂಪಾಯ್ವಬಾಣಪಾಶುಪತಾಸ್ತ್ರಂಹೆಚ್ಚಿದಕೋಪಾನಳನೊಸಲಚ್ಚಿಯೆನಲುಕಲಿಕಾಲರುದ್ರನೀಸರ್ವ್ವೇಶಂ
॥ ವ ॥ ಅನ್ತುನೆಗಳ್ತೆವೆತ್ತರುದ್ರಶಕ್ತಿದೇವರುಂಸರ್ವ್ವೇಶ್ವರಶಕ್ತಿದೇವ

31 ರುಂತದಗ್ರಜಾನುಜರುಶ್ರೀಮದನಂತಕೋಟಿನಾಥದಿವ್ಯಶ್ರೀಪಾದಪದ್ಮಸೇವನೋಪಜೀವನದಿಂ ಸಕಳಸೇವ್ಯಜನಮಂಪ್ರತಿಪಾಳಿ
ಸುತ್ತುಮಿರೆ ॥ ॥ ಸ್ವಸ್ತಿಸಮಧಿಗತಪಂಚಮಹಾಶ

32 ಬ್ದಂದ್ವಾರಾವತೀಪುರವರಾಧೀಶ್ವರಂವಿಷ್ಣುವಂಶೋದ್ಭವಂಯಾದವಕುಳಕಮಳಕಳಿಕಾವಿಕಾಸಭಾಸ್ಕರಂಅರಿರಾಯಜಗಝಂಪ
ಮಾಳವರಾಯಮದನತ್ರಿಣೇತ್ರಗುರ್ಜ್ಜರರಾಯಭ

33 ಯಂಕರಂತೇಲುಂಗರಾಯಸ್ಥಾಪನಾಚಾರ್ಯ್ಯಇತ್ಯಾದಿನಾಮಾವಳೀಸಮಾಳಂಕೃತಶ್ರೀಮತ್ಪ್ರೌಢಪ್ರತಾಪಚಕ್ರವರ್ತ್ತಿಶ್ರೀಸೇ
ಉಣವೀರಸಿಂಹಣರಾಯಂಸುಖದಿಂರಾಜ್ಯಂಗೆಯ್ಯುತ್ತುಮಿರ್ದ್ದ

34 ಶ್ರೀಮದನನ್ತಕೋಟಿನಾಥನಮಹತ್ಮೆಯಂಕೇಳ್ದುವಿಕಸಿತಹೃದಯನಾಗಿ ॥ ವಾಸುಗಿನಾಯಕಗೆಂದಂವಾಸುಗಿಭೂಷಣನೆನಿಪ್ಪ
ಕೋಟೀಶ್ವರಲೋಕೇಶಂಗೆನೋಡಿದಕ್ಷಿಣದೇಶ

35 ದೊಳೊಂದೂರನೀವುದತ್ಯಂನತಮಂ ॥ ವ ॥ ಎಂದುಸಿಂಹಣರಾಯಂನಿರೂಪಿಸೆಸ್ವಸ್ತಿಶ್ರೀಶಕವರ್ಷದ ೧೧೫೭ ಖರಸಂವತ್ಸರ
ದಚೈತ್ರದಮಾವಾಸೆಆದಿತ್ಯವಾರಬ್ಯತೀಪಾತಉತ್ತರಾಯಣ

36 ಸಂಕ್ರಮಣದೊಳಶ್ರೀಕೋಟಿನಾಥಂಗೆಧಾರಾಪೂರ್ವ್ವಕದಿಂಸಿಂಹಣದೇವನಪ್ರತಿಹಸ್ತದಿಂಬಾಸೂರನಾಡಕಾಗಿನೆಲೆಯತಡಸ
ಮಂಸರ್ವ್ವನಮಸ್ಯದಿಂಕೊಟ್ಟುವಿಶೇಷತರಮಪ್ಪ

37 ಪುಣ್ಯಮಂಸಾಧಿಸಿದನನಂತರಂ ॥ ವೃ ॥ ಬಾಗಿಲೊಳಿರ್ದ್ದ...... ವೆಂಬವನಾಗ್ಗಳಜೇಯಭಟ್ಟನಿಂತಿಗಿವನಂಪುಗಲೋ
ಡಿಸಿದಂನೆಱೆಮಾರಿಯನೆಯ್ದಿತಂದನಿಂನೆಗುವೆನಾವಬುದ್ಧಿಗ

38 ಳಿವೆಂಪಳಿಗಂಜಿದೊಡಾಗನೊಂಕುಪೋಪೋಗಲಿಯೆಂಬಲೋಭಿಗಳ ... ಡವೊಹೊಂನರಾಯನಂ ॥ ವ ॥ ಅನ್ತುನೆಗಳ್ತೆವೆತ್ತಾದಿಗ
ಣಾವತಾರಂಹೊಂನಬೊಮ್ಮಿಸೆಟ್ಟಿಯರುಶ್ರೀಸ್ವಯಂ

39 ಭುಕೋಟಿನಾಥಂಗೆಯಂಗರಂಗಭೋಗಕ್ಕಂಪಾತ್ರಪಾವುಳಕ್ಕಂಸತ್ತುಗನಾಡಬಂನಿಹಳ್ಳಿಯುಂಸರ್ವ್ವಾಭ್ಯಂತರವಾಗಿಧಾರಾಪೂ
ರ್ವ್ವಕದಿಂಕೊಟ್ಟುಯಶೋವೃದ್ಧಿಯುಂಪುಣ್ಯಾವೃದ್ಧಿಯುಂಸಾಧಿ

40 ಸಿದನಲ್ಲಿಂಬಳಿಕ್ಕೆ ॥ ಯಾದವರಾಯಸಿಂಹಣದಳಪ್ರಮುಖಂನಿಜವಿಕ್ರಮಪ್ರತಾಪೋದಯಮೂರ್ತ್ತಿಕೀರ್ತ್ತಿವನಿತಾಮುಖ
ಮಂಡನಗಂಡತೀರ್ತ್ಥಸಂಪಾದಿತಸಚ್ಚರಿತ್ರಸುಭಟಾ

41 ಗ್ರಣಿವಿದ್ವಿಷಗರ್ವ್ವಪರ್ವ್ವತಚ್ಛೇದನಶಂಬನೆಂದುಪೊಗಳ್ಗಂಭುವನಂಕಲಿವಂಕದೇವನಂ ॥ ವ ॥ ಅನ್ತುನೆಗಳ್ತೆವೆತ್ತವಂಕ
ದೇವಂಶ್ರೀಮದನಾದಿಸ್ವಯಂಭುಕೋಟೀಶ್ವರಮಹಾತ್ಮೆಯಂಕೇಳ್ದು ॥ ಕ ॥ ನಾಗರಖಂಡದೊ

[42]ಳಿರ್ಪ್ಪಿದುನಾಗವಿಭೂಷಣನನನ್ತಕೋಟೀಶಗೆತಾಸಾಗಳೆಯಕ್ಕಟಿಯುಂಮದನಾಗಬಳಂಕೊಟ್ಟವಂಕದೇವಗುಣಾಢ್ಯಂ ॥ ವ ॥ ಅನ್ತುಧಾರಾಪೂರ್ವ್ವಕದಿಂಯೆಕ್ಕಟಿಯುಂವಂಕದೇವಂಕೊಟ್ಟುವಿಶೇಷಮುಪ್ಪಫಳಮಂಪಡೆ
[43]ದನು ॥ ॥ ವರಕೋಟೀಶ್ವರಧರ್ಮ್ಮವಂಭರದಿನಾವಂಪಾಳಿಸುತ್ತಿರ್ದ್ದವಂಪಿರಿದುಂಕೋಟಿಸಹಸ್ರಧೇನುವಸವತ್ಸಾಂಕಂಕುರುಕ್ಷೇತ್ರದೊಳುನಿರುತಂವಿಪ್ರರಿಗಿತ್ತಪುಣ್ಯಾದನಿತಕ್ಕುಂಮತ್ತೆತತ್ಕ್ಷೇತ್ರದೊಳ್ಪ
[44]ತದ್ಧೇನುವನೆಯ್ದೆಕೊಂದಫಳವಕ್ಕುಂಸ್ವಿದಂಪಾತಕಂ ॥ ಸ್ವದತ್ತಂಪರದತ್ತಂವಾಯೋಹರೇತಿವಸುಂಧರಾಂಷಷ್ಟಿರ್ವ್ವರ್ಷಸಹಸ್ರಾಣಾಂವಿಷ್ಠಾಯಾಂಜಾಯತೇಕ್ರಿಮಿಃ ॥ ಸರ್ವ್ವೇಶ್ವರಸ್ಥಿರಂಜೀಯಾತ್ ॥ ಶ್ರೀ
[45]ಬಾಗಡಗೆನಾಡಕಬ್ಬಿನಸಿರಿವೂರಸಿದ್ಧನಾಥದೇವರಸ್ಥಾನಂಕೋಟೀಶ್ವರದಪ್ರತಿಬದ್ಧ ॥ ॥ ಎಕ್ಕೋಟಿಸಮಯಚಕ್ರವರ್ತ್ತಿಬಳಿಗೆಚಾತುರ್ಯ್ಯಗದಪಟ್ಟಣಂಕಲ್ಲಮುಳುಗುಂದದಸ್ವಯಂಭುದೇವರ
[46]ಸ್ಥಾನಂಕೋಟೀಶ್ವರದಪ್ರತಿಬದ್ಧ ॥..............॥ ಂಎಮ್ಮನೂರರಾಮನಾಥದೇವರಸ್ಥಾನಂಕೋಟೀಶ್ವರ
[47]ಸಂವಂಧ ॥ ॥ ಕಿಱುವಡೆಯರಾಮನಾಥದೇವರಸ್ಥಾನಂಕೋಟೀಶ್ವರಪ್ರತಿಬದ್ಧ ॥ ॥ ಅಬ್ಬಲೂರಗ್ರಾಮೇಶ್ವರಸ್ಥಳಂಕೋಟೀಶ್ವರಪ್ರತಿಬದ್ಧ ॥ ॥ ತಿಳುವಳ್ಳಿಯಮೂಲಸ್ಥಾನಪೂಸ
[48]ವಂತೇಶ್ವರಂಕೋಟೀಶ್ವರಪ್ರತಿಬದ್ಧ ॥ ॥ ದೇವಂಗೆರಿಯಜ್ಯೈತಾಪುರಂಕೋಟೀಶ್ವರಸಂಮ್ಮನ್ಧ ॥ ಹಾನುಗಲ್ಲಮೂಲಸ್ಥಾನಂಕೋಟೀಶ್ವರಪ್ರತಿಬದ್ಧ ॥ ಕುಪ್ಪಟೂರರಾಮನಾ
[49]ಥದೇವರಸ್ಥಾನಂಕೋಟೀಶ್ವರಪ್ರತಿಬದ್ಧ ॥ ॥ ಸಾಮಾನ್ಯೋಯಂಧರ್ಮ್ಮಸೇತುರ್ನ್ನೃಪಾಣಾಂಕಾಲೇಕಾಲೇಪಾಲನೀಯೋಭವದ್ಭಿಃಸರ್ವ್ವಾನ್ಯೇತಾನ್ಪಾರ್ತ್ಥಿವಾಃಪಾರ್ತ್ಥಿವೇಂದ್ರಾಭೂ
[50]ಯೋಭೂಯೋಯಾಚತೇರಾಮಚಂದ್ರಃ ॥ ಮಂಗಳಮಹಾ ಶ್ರೀ ಶ್ರೀ ಶ್ರೀ
[51]ಸ್ವಸ್ತಿಶ್ರೀಮತುಯಾದವನಾರಾಯಣಭುಜಬಳಪ್ರತಾಪಚಕ್ರವರ್ತ್ತಿ ಶ್ರೀರಾಮದೇವರಾಯವಿಜಯರಾಜ್ಯೋದಯದ ೧೨ ನೆರಡನೆಯವಿಕ್ರಮಸಂವತ್ಸರದಕಾರ್ತ್ತಿಕ ಬ ೧೦
[52]ಆದಿವಾರದಲುಸ್ವಸ್ತಿಶ್ರೀಮತುಯೆಕೋಟಿಚಕ್ರವರ್ತ್ತಿಶ್ರೀಕೋಟಿನಾಥದೇವಶ್ರೀಪಾದಪದ್ಮಾರಾಧಕರುಮಪ್ಪಸರ್ಬ್ಬೇಸ್ವರಶಕ್ತಿದೇವರಮುಂದೆಯಾಕುಪಟೂರಯಾರಿಯಸಂಕಣ
[53]ನೇಱಿಲಿಗೆಯಸಿವಪಗವುಡಆಕಾಳಗವುಡಮೂವಡಿಯಲಖಗವುಡನೇಱಿಲಿಗೆಯರಾಮನಾಥದೇವರಮಾದಜೀಯಕವಿಜನಪೂಜ್ಯರಾಮಂಣಯಿಂತಿವರಮುಂದೆ . . .
[54]ಗೆಱೆಯಸೋವಗವುಡನುತಂನವುಂಬಳಿಯನುಶ್ರೀಕೋಟಿನಾಥನನಂದಾವಳಕೆಕೊಟ್ಟನು ॥ ಶ್ರೀಮತ್ತ್ರೈಳೋಕ್ಯನಾಥಂಸುರನರಮುನಿಸಂಪೂಜ್ಯಪಾದಂಭವಾಂನ್ಯಾಪ್ರೇ
[55]ಮಸ್ಥಾನಂಸುವಿದ್ಯಾನಿಕರವಿಳಸಿತಂಕೋಟಿನಾಥಂಗೆಭಕ್ತ್ಯೋದ್ದಾಮಪ್ರಾಂಚದಿಂತೆಂಭಣಗೆಱೆಯಧಿಪಂಭಾವಗೌಡಾತ್ಮ[ಜಾತಂ]ಸೋಮಂನಂದಾವಳಕ್ಕುಂಬಳಿಯುಮನನಿತಂಕೊ
[56]ಟ್ಟನ . ಯ್ಯಾಸಾಯ್ಯಂ ॥

276

ಅದೇ ಬಾಗಿಲ ವಳಭಾಗದ ಜಗಲಿಯಲ್ಲಿ.

ಪ್ರಮಾಣ 7′ × 3′ 8″.

[1]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಲಸ್ತಂಭಾಯಶಂಭವೇ ॥ ಶ್ರೀಮದ್ದೇವಾಧಿದೇವಂಸುರನರಭುಜಗಾರಾಧ್ಯ . . . . ಪಕಾಮೋದ್ದಾಮ
[2]ಪ್ರತಾಪಪ್ರಬಳಘನಸಮೀರಂತ್ರಿಳೋಕ್ಯೈಕನಾಥಂಶ್ರೀಮತ್ಸರ್ವ್ವೇಶ್ವರಶ್ರೀಗುರುಹೃತ್ಕಮಳಾಂತ್ರಸ್ಥಿತಂಕೋಟಿನಾಥಂಪ್ರೇಮಂಕೈಗ . . ಚ್ಚಂ . . . . ಶಾನಂದಮಂಮೂ
[3]ಡುತಿಕ್ಕುಂ ॥ ಉದಧಿಪ್ರಾವೃತಜಂಬುದ್ವೀಪದೊಳುತೋರ್ಪ್ಪಮಂದರಕ್ಷ್ಮಾಧರೇಂದ್ರದದಿಗ್ದಕ್ಷಿಣಭಾಗದಲ್ಲಿಭರತಕ್ಷೇತ್ರಂಕರಂರಂಜಿಸಿಕ್ಕ.ಱೊಳ . . . ದೆಸೆವೆಸೆಗುಂತದ್ದೇ
[4]ಶದೊಳುಸಂತತಂಪದಪಿಂನಾಗರಖಂಡಮೆಂಬುದುಕರಂಚೆಲ್ವಾಯ್ತುನಾಡಾಡಿಯಿಂ ॥ ಕ ॥ ಆನಾಡಗ್ರಾಮಾಗ್ರಣಿನಾನಾಬುಧಜನವಿನುತಗರ್ಚ್ಚಿಪ್ರಿತದಿಂತಾನೆಸೆವುದಗ್ರಹಾ

5 ರಂಸಾನಂದದೆಕುಪ್ಪಟೂರನಾಮಾವಳಿಯಿಂ ॥ ಅಳಿಗಳಿವಿಂಡಿನಿಂದುಲಿವನಂದನದಿಂಕಳಹಂಸಮತ್ತಕೋಕಿಳಕಳನಾದದಿಂದೆಸೆವ ಲಗ್ಗೊಗಳನಿಂಬೆಳೆದೊಪ್ಪಿತೋರ್ಪ್ಪಕೆಯ್ವೊಲನೊಳನೇಕರತ್ನ

6 ಮಣಿಕೂಟದಿನೊಪ್ಪುವದೇವತಾಲಯಂಗಳಿನೆಚಿಕುಪ್ಪಟೂರ್ಕ್ಕರಮೆರಂಜಿಸುಗುಂಧರಣೀತಳಾಗ್ರದೊಳು ॥ ಮತ್ತಮಾಗ್ರಾಮದ್ಯೆಂದ್ರೀಭಾಗದೊಳು । ಪದಪಿಂಶ್ರೀಗಿರಿಜೇಶ್ವರಂಸಕಳಧರ್ಮ್ಮ

7 ಧರ್ಮ್ಮಮಂಪಾಳಿಸಲ್ಕಿದುತಾಂಸೇಬ್ಯವಿಳಾತಳಾಗ್ರದೊಳೆನುತ್ತಂನೋಡಿಕೈಳಾಸದಿಂತ್ರಿದಶಸ್ಸ್ವಂಯುತನಾಗಿಪಾರ್ವ್ವತಿಯೊಳಂನೇರ್ಪ್ಪಟ್ಟುಬಂದಾವಗಂಸದಯಂಭಾಕ್ತಿಕಮಂಗಳಂನೆಲಸಿದಂಕೋಟೀಶ್ವರಂಪ್ರೀ

8 ತಿಯಿಂ ॥ ಕ ॥ ಆದಿಯಕೃತಯುಗದೊಳಂಭೇದಿಸಿಬಾಣಾಸುರಂಪ್ರತಿಷ್ಠಾವಿಧಿಯಿಂದಾದರದೆರಚಿಸಿದಂತ್ರಿಜಗೋದರನಂಪಡೆದನಂತಕೋಟೀಶ್ವರನಂ ॥ ಭರದಿಂದಂ

9 ವಿಶ್ವಕರ್ಮ್ಮಂಪುದಿದಭಕ್ತಿಯಿಂಮಾಡಿದಂತಾನೆನಲ್ಕಂಪಿರಿದುಂವೈಚಿತ್ರಚಿತ್ರಂಗಳೊಳೆವಿವಿಧಭದ್ರಪ್ರಕಾರಂಗಳಿಂದಂವರಮುದ್ಯತ್ಕಾಂಚನಾನಾವಿಧಮಣಿಕಳಶಾನೀಕದಿಂಕೂಡೆಚೆಲ್ವಾಗಿರೆತೋರ್ಕ್ಕಂ

10 ಕೋಟನಾಥಾಹ್ವಯಭವಭವನಂಮೇಘಮಂಚುಂಬಿಸುತ್ತಂ ॥ ಕೆಂದಳಿರಿಂಕಂಕೆಲ್ಲಿಗಳಿನಂದನದಿಂತಿಳಿಗೊಳಂಗಳಿಂದಳಿಕುಳದಿಂಬಂದೆಳೆಮಾವಿನಪುದುವಿಂಭಂದಂ . ತಾ . . ಮಾಲಯಂಪರಿವೃತದಿಂ ॥

11 ವ ॥ ಅನ್ತಸೆದಳಮೆಸೆವನಂತಕೋಟೀಶ್ವರತ್ರಿಭುವನೈಕರಕ್ಷಾಮಣಿಯಚರಣಸರಸೀರ್ಹಸರಣಪರಿಣತಾಂತಃಕರಣಶ್ಯಮಾಗಮಪಥಾಚರಣಪ . . ಗ . ಸಮಯಸಮುದ್ಧರಣನಬಂಧಿ

12 ತಪ್ರತಾಪದಿವಾಕರಕಿರಣಪರಮತವಾದಿಮದನಿವಾರಣನುಮೆನಿಸಿದಶ್ರೀಮತ್ಸರ್ವ್ವೇಶ್ವರದೇವರತಪಃಪ್ರಭಾವಮೆಂತೆಂದೊಡೆ ॥ ವೃ ॥ ಎನಗಿಂನಾಸ್ಸರಿಮೂಜಗಂಗಳೊಳಗೆಂದ . . . ಜ್ವಾ

13 ಸ್ತ್ರನಂನನೆಯಂಬಂಮುಜಿ . . . . ಧನುಮಂ . ಗರ್ವತ್ತಿಮೀನಾಂಕಮಂಚುನದಿಂಮುಂಪಱಿದಿಕ್ಕಿಗೆಲ್ದುದತುಳಗೆಲ್ದಗೌಂಡನೆಂದೆಂದೊಡೇಂಮುನಿಸರ್ವ್ವೇಶ್ವರಶಕ್ತಿದೇವರು . . ನೇಮಣ್ಣಿಪಂಬಣ್ಣಿಪಂ ॥ . . . .

14 ದಶರುದ್ರರಿಂದೆಬಳಿಕಂಮ . . . ತೋಳ್ಪುಟ್ಟಿದನೆಂದೆನೆನಲ್ಕೆಬಲುಪುಂಸಾಮರ್ತ್ಥ್ಯಮುಂತೇಜಮುಂಮಿಗೆಕೀರ್ತ್ತಿಪ್ರಭೆಯುಂಸವತ್ಸಳತೆಯುಂಸರ್ವ್ವಜ್ಞಸಂ . . . ಬಗೆ . . . . . .

15 ಡೆಪೊಲಂಯೋಗೀಂದ್ರಸರ್ವ್ವ . ಳು . ರಾಜಗುರುಯೆಕ್ಕೋಟಿಸಮಯಚಕ್ರವರ್ತ್ತಿಸಪ್ತಹತ್ತರಿಸ್ಥಾನಾಚಾರ್ಯ್ಯರಪ್ಪಸರ್ವ್ವೇಶ್ವರಶಕ್ತಿದೇವರುಶ್ರೀಮದನಾ . . . .

16 ವರ್ಗ್ಗನೇಕಭೂಜಾಚರ್ಚ್ಚನೋ . . ಸುಖದಿಂತಪೋರಾಜ್ಯಂಗೆಯ್ವುತ್ತುಮಿರೆ ॥ ॥ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪೃಥ್ವೀವಲ್ಲಭಂಮಹಾರಾಜಾಧಿರಾಜಂಪರ . ರೆ

17 ಮಭಟ್ಟಾರಕಂಸತ್ಯಾಶ್ರಯ. . . ಮನೈಕಮಲ್ಲಸೋಮೇಶ್ವರದೇವವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂಸ . . . ರೆ ॥

18 ತತ್ಪಾದಪದ್ಮೋಪಜೀ . . . . ಯ . . ಸಂಪಂನಸಕಳವಿದ್ವಜ್ಜನಪ್ರಸಂನಮಹಾಮಾತ್ಯಶಿಖಾಮಣಿಚಾತುರ್ಯ್ಯದಕಣಿಭುಜಬಳಪ್ರತಾಪಚತುರ . . . . .

19 ಚಾಪನಿತ್ಯಾದಿನಾಮಾ . . . ರವಿಪುರನೆಲೆವೀಡಿಲಂಕೇಶ್ವರನಂತೆನೆಗಳ್ದಬನವಸೆನಾಡಂಬಿಕದೊಳಾಳುವನಾಸಿಸ್ಸಂಕವಿಜಯಾಂಗ . ನುದಯಾದಿತ್ಯ . . ಖ

20 ದಿನಾಳುತ್ತಿರ್ಪ್ಪಲ್ಲಿ ॥ . . . . . ಧಾರಣಮೋನಾನುಷ್ಠಾನಜಪಸಮಾಧಿಶೀಲಗುಣಸಂಪಂನರುಂಬೆಮಾಸನಾಗ್ನಿಹೋತ್ರದ್ವಿಜಗುರುದೇವತಾಪೂಜಾತತ್ಪರ . . ನ

21 ಯಾಜನಅಧ್ಯಯನ . . . . . . ರುಗ್ಯಜಸ್ಸಾಮಾಥರ್ವ್ವಣಚತುರ್ವ್ವೇದವೇದಾರ್ತ್ಥತತ್ವಜ್ಞರುಂಸರಸ್ವತೀಕರ್ಣ್ನಾವತಂಸರುಂನಿರ್ಮ್ಮಳಮಹಾಪ್ರಚಂಡರುಂಪ . . . . . ಚಿತ

22 ಬಾಲದಿವಾಕರರುಂ . . . . . ನಾಟಕಇತಿಹಾಸಮೀಮಾಂಸಾಭರತಗಣಿತವಾಚ್ಯಾಯನಾದಿಸಕಳಶಾಸ್ತ್ರಪ್ರವೀಣರುಂಶ್ರೀಮದನಾದಿ . . ಚೇರ್ಣ

23 ಸುರಪ್ರತಿಷ್ಠಾಲಿಂಗಂಶ್ರೀಪಾದ . . . . . ಪಾದಪದ್ಮಾರಾಧಕರುಮಪ್ಪಶ್ರೀಮದನಾದಿಯಗ್ರಹಾರಂಕುಪ್ಪಟೂರನಾಸಿರ್ವ್ವರುಂದೇಶಾಧಿಪತಿಗಳುಂಮುಂನೆಯರುಂನಾ . . . ತಂ

24 ಮೊಳೇಕಸ್ಥರಾಗಿತಂಮ . . . . . . ಕೊಟ್ಟಸ್ಥಳವೃತ್ತಿಯಸೀಮಾಸ್ಥೈರ್ಜ್ಞೆಯೆಂತೆಂದಡೆಪಡುವಲುಹುಣಿಸೆಯಕೊಳಬಡಗಲುಸೆಟ್ಟಿಯಕುಳಿಮೂಡಲುಸೆಟ್ಟಿಯಕೆ . . . . ರೆ

25 ಕಟ್ಟಿನಸರಿವುಂಟೆಂದ . . . . . . ಗೆಱೆಯುಂಪೆರ್ಗ್ಗೆಱೆಯುಮೆಂಬಿವುಮೇರೆಯಾಗುಳ್ಳಭೂಮಿಯನಿತುಮಂಮತ್ತಂದೊಡ್ಡಿ
ಯಕೆಱೆಕೆಳಗಡ್ಡೇರಿಯಿಂತೆಂಕಲೇಳು . . . . ಭೂ

26 ಮಿಯುಂಬಿಟ್ಟರುಮತ್ತ . . ವನಿತೊಳವನಿತಱೊಳಗೆವಾನಯೆಣ್ಣೆಯುಂತಂಬುಲಿಗರುಗೋತ್ರಕ್ಕೊಂದುಪಣಮಂಸಲಿಸುವರುನಾ
ಗರಖಂಡದಗಾಡುಗಳು . . . .

27 ದುಪಣಮುಂನಂದಾದೀವಿಗೆಗೆ . . . ॥ . . ದಾಣವಣಮ್ಮೆದೆಱೆವಂನೆಯತೀರ್ಪ್ಪಸುಂಕಸಂಮನಿಸುವಬೂರಗೂಳ್ಳೆಳಿವಣಂ
ಪಡಿಗೆಱೆಸ್ಸಲೆಪಾತಿಕಾಯಮತ್ತೆನಿಸ . . . .

28 ನವಪುತ್ರಿಕವಾದಿಯಾಳುವಂಜನ . . ಸ್ಸಹಿತಬಿಟ್ಟರುತತ್ಪುರದಲ್ಲಿಸಂತತಂ ॥ ವ ॥ ಅನ್ತು ಶ್ರೀಮದನಂತಕೋಟಿನಾಥಂಗೆಯಾ
ಪುರಮಂಸ್ಥಳವೃತ್ತಿಯುಮಂಸರ್ವ್ವಾಭ್ಯಂತರವಾಗಿ . . . .

29 ಯಾದಿತ್ಯದಂಡನಾಯ್ಕನುಕೊಟ್ಟ . . . . ಮಂಕೇಳ್ದುಸಾಸಿರ್ವ್ವರುಮಂತದೀಯಸ್ಥಾನಾಚಾರ್ಯ್ಯರುಮಂಕರಸಿಸೋಮೇಶ್ವ
ರಚಕ್ರವರ್ತ್ತಿಯಸಮೀಪಕ್ಕೆವಂದುಕರಕಮಳಮುಕುಳಿತ . . . ॥ ವೃ ॥

30 ಕೃತಯುಗದಾದಿಲಿಂಗ . . . . ಕುಪ್ಪಟೂರನೋಳ್ಸತತಮನಂತಕೋಟಿಗಿರಿಜೇಶ್ವರನುಂನೆಲಸಿರ್ಪ್ಪನಾವಗಂಕ್ಷಿತಿಯೊಳುದ
ಗ್ರಪುಣ್ಯಾಸಿಳಯಂನೆಱೆದ್ರಿಷ್ಟವ . ಸಾಧನಕ್ಕ

31 ತಿಶಯಮಪ್ಪಧರ್ಮ್ಮ . . . . . ದೇವಭೂಪತಿ ॥ ವ ॥ ಎಂದುಬಿಂನಪಂಗೆಯ್ಯಲದಗೆಮನದೆಗೊಂಡುಸ್ವಸ್ತಿಶ್ರೀಶಕವರ್ಷದ
೯೯೩ ಸಾಧಾರಣಸಂವತ್ಸರದಚೈತ್ರದಮಾ

32 ವಾಸೆಆದಿತ್ಯವಾರ . . . . ತ್ತರಾಯಣಸಂಕ್ರಮಣದಪುಣ್ಯಾತಿಥಿಯೊಳುಧಾರಾಪೂರ್ವ್ವಕದಿಂ ॥ ವೃ ॥ ಧರಣೀವಲ್ಲಭಸೋಮ
ದೇವನೃಪಚಕ್ರೇಶಂಮನೋರಾಗದಿಂಪರಮಶ್ರೀಮದ

33 ನನ್ತಕೋಟಿಭುವನೇಶಂಗಂಗರಂಗಕ್ಕೆವಿಸ್ತರನಂದಾವಳಪಾತ್ರಪಾಳುಳಮಹಾಪ್ರಾಸಾದಕೂಟಕ್ಕೆಬಿತ್ತರದಿಂದಂಕೆಱೆಹಳ್ಳಿಯುಂ
ಪರಸುಪುಂಡಗ್ರಾಮಮಂಕೊಟ್ಟಪಂ ॥ ವ ॥ ಅನ್ತುಧಾರಾಪೂರ್ವ್ವಕದಿಂಪುಂ

34 ಡವರ್ದ್ಧನಮಂಕೆಱೆಹಳ್ಳಿಯು . . . ಧರ್ಮ್ಮಮಂಸಾಸಿರ್ವ್ವರ್ಗ್ಗಂಉದೆಯಾದಿತ್ಯಂಗಂಪ್ರತಿಪಾಳಿಸುವುದೆಂದುಸಿಯಾಮಿಸಿಯು
ಕೋವೃದ್ಧಿಯಂಪುಣ್ಯಾವೃದ್ಧಿಯುಮಂಸಾಧಿಸಿಕೃತಾರ್ತ್ಥನಾದ . . . ರಂ ॥

35 ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂಜಯಂತೀಮಧುಕೇಶ್ವರದೇವರಲಬ್ಧವರಪ್ರಸಾದಸಾಹಸೋತ್ತುಂಗ
ಸತ್ಯರಾಧೆಯ . . . ಗಳಂ . . . . ಗ

36 ತವಜ್ರಪಂಜರಕದಂಬಕುಳಕಮಳಮಾರ್ತ್ತಂಡಕದನಪ್ರಚಂಡನುದ್ದಂಡಮಂಡಳಿಕಗಂಡಗರ್ವ್ವಶುಂಡಾಳಮಸ್ತಕಪಿಂಡಖಂ
ಡನಕಂಠೀರವಇತ್ಯಾದ್ಯನೇಕನಾಮಾ . . . . ನಿಸಿದ . . . ॥ . .

37 ದಂಬಚಕ್ರೇಶ್ವರಹರ . . . . . . ನಂಭಾಳನೇತ್ರೋದ್ಧಾಮಸ್ವದ್ವಂಶರಾಮಂನಿಜಭುಜಬಳವದ್ವಿಕ್ರಮಂವಿಕ್ರಮಾಂಕಂಸೋಮಪ್ರ
ದ್ಯೋತಕೀರ್ತ್ತಿಪ್ರಕಟಿತದಶದಿಗ್ಭಿತ್ತಿ . . . ಳೇಪಂ . . . ಕಾ

38 ಮದೇವಕ್ಷಿತಿಪತಿಗಣನಾತೀತತೇಜಪ್ರತಾಪಂ ॥ ವ ॥ ಅನ್ತುಪೊಗಳ್ತೆಗಂನೆಗಳ್ತೆಗೆನೆಲೆಯಾದಕಾದಂಬಚಕ್ರೇಶ್ವರಕಾಮದೇವ
ಮಹೀಭುಜಂಗುತ್ತಿಯೊಳ್ . . . ಜ್ಯಂ . . . . . .

39 ತ್ಪಾದಪದ್ಮೋಪಜೀವಿಸಮಸ್ತವಸ್ತುವಿಸ್ತೀರ್ಣ್ಣಘೂರ್ಣ್ಣಿತಾರ್ಣ್ಣವಗಂಭೀರಚಾತುರ್ವ್ವಿಧಪುರುಷಾರ್ತ್ಥಸಾರಮಂತ್ರಮಾ
ಣಿಕ್ಯನೀತಿಚಾಣಿಕ್ಯನಿಯೋಗಯೋಗಂಧರಂಪತಿಕಾರ್ಯ್ಯಧುರಂಧ . . . . . .

40 ರನಿಯೋಗಾಧಿಪತಿಸಕಳಲಕ್ಷ್ಮೀಪತಿವಿವಿಧಸಾಹಿತ್ಯವಿದ್ಯಾಧರನಖಿಳಬುಧಜನಾಧಾರಭೂದೇವತಾಕುಳಪವಿತ್ರನಗಣಿತಪುಣ್ಯಾ
ಗಾತ್ರನೆನಿಸಿದಸೋವಿದೇವದಂಡಾಧೀಶ್ವ . . . . . ಪ್ರ

41 ಭಾವೋನ್ನತಿಯೆತೆಂವೊಡೆ ॥ ಮಾಳಿನೀ ॥ ಅಗಣಿತಗುಣದಾಮಃರ್ವಿಪ್ರವಂಶೋರ್ಜ್ಜಲಾಮಃಮೃಗಧರನಿಭಕೀರ್ತ್ತಿಃಯಾಚಕಾಧಾ
ರಮೂರ್ತ್ತಿಃಸುಗುರಿತಕೃತಪುಣ್ಯಃಸಜ್ಜನಾನಾಂವರೇಣ್ಯಃಮುಗು . ಯು .

42 ತ್ರಿಭಾವಃಭಾಸ್ವತೇಸೋಯಿದೇವಃ ॥ ಕುಲದೆಯ್ವಂಗಿರಿಜೇಶನಾದಿಕೃತಲಿಂಗಂಕೋಟಿನಾಥಾಹ್ವಯಂಸಲೆತಂನೀಶ್ವರಕಾಮದೇವ
ಮಹಿಪಂಕಾದಂಬಚಕ್ರೇಶ್ವರಂಕುಲವತ್ಯಂನತವಿಪ್ರವಂಶಮೆನಲಿಂತೀಸ್ವಾಮಿ

43 ದಂಡೇಶನಂಗೆಲೆವಂದಪ್ಪೆಱೆರಾರೊಭೂತಳದೊಳಂನಾಣ್ಗೆಟ್ಟರುಮ್ಮಂತ್ರಿಗಳು ॥ ವೃ ॥ ಪಲಕಾಲಂಪಱಿಪಟ್ಟುಪೋದುದಿದು
ಜೀರ್ಣ್ಣೋದ್ಧಾರಮಂಮಾಡಿಭೂತಳದೊಳ್ಕೀರ್ತ್ತಿಯುಮೊಂದನೂನವರಪಂ . . . ಣಿ . . .

44 ಸಾಧಿಪಂಪಲವರ್ಕ್ಕಂದುತದೀಯದೇವಭವನಂ . . . ಬಂದದೀಪಲವುಂಚಿತ್ರವಿಚಿತ್ರದಿಂರಚಿಸಿದಂಸ್ವಾಮಿಶನುದ್ಧಾಮನೂ ॥ ವ ॥
ಅನ್ತುಸ್ವಾಮಿದೇವದಂಡಾಧಿಪಂಶ್ರೀಮದನಂತಕೋಟೀಶ್ವರದೇವರ

45 ಜೀರ್ಣ್ಣೋದ್ಧಾರವುಂಮಾಡಿಸುವರ್ಣ್ನಕಳಶಪ್ರತಿಷ್ಠಾ . ರದೇವರ್ಗೆರಂಗಭೋಗಕ್ಕಂನಂದಾವುಳಪಾತ್ರಪಾಉಳಕ್ಕಂನೈವೇದ್ಯಕ್ಕಂಜೀರ್ಣ್ಣೋದ್ಧಾರಕ್ಕಂವೀಧರ್ಮ್ಮವಾಚಂದ್ರಾರ್ಕ್ಕತಾರಂಬರಂಸಲುವಂತುತಂನಸ್ವಾಮಿದೇ

46 ವ(ದೇವ)ಚಕ್ರೇಶ್ವರನನುಮತ್ಯದಿ ‖ ಶ್ರೀಸರ್ವ್ವೇಶ್ವರಸಕ್ತಿದೇವರಪದಾಂಭೋಜಂಗಳಂಕಚ್ಚಿರ್ಯಯಂದಾಸಾಸಿರ್ವ್ವನೆಗಳ್ತಿಯಂಬಿನೆಗಧಾರಾಪೂರ್ವ್ವಕಂಕೊಟ್ಟಧರ್ಮ್ಮಸಾರಂಕಲಿಸೋಯಿದೇ

47 ವ . ರದಂಡಾಧೀಶ್ವರಂನಿಶ್ಚಳಂಭೂಪಾರಂಬೆನವೂರೆನುರ್ವ್ವಿವನಿತಾಶೃಂಗಾರಹಾರಾಂಕಮಂ ‖ ವ ‖ ಅನ್ತುತಂನಕುಲಸ್ವಾಮಿಯಪ್ಪನಂತಕೋಟನಾಥಂಗೆಜೀರ್ಣ್ಣೋದ್ಧಾರವುಂಮಾಡಿಬೆನವೂರಸರ್ವ್ವಾ

48 ಭ್ಯಂತರವಾಗಿಶಾವದೇವರ್ಗ್ಗೆಬಿಡ್ಡಿಯನೂನಧರ್ಮ್ಮವುಂಸಾಧಿಸಿಕ್ರೀತಾರ್ತ್ಥನಾದನಲ್ಲಿಂಬಳಿಕ್ಕೆ ‖ ಸ್ವಸ್ತಿಸಮಸ್ತಪ್ರಶಸ್ತಿಸಹಿತಂಶ್ರೀಮನ್ಮಹಾಮಂಡಳೇಶ್ವರಂಶರಣಾಗತವಜ್ರಪಂಜರಂ

49 ಪರಬಳಭೀಮಗಂಡರೊಳುಗಂಡಗಂಡಮಾರ್ತ್ತಂಡಜಂಗುಳಿಮನೆಯರಗಂಡನಖಂಡಿತಪ್ರತಾಪನೆನಿಸಿದ ‖ ಕ ‖ ಜಂಗುಳಿಮನೆಯಗಂಡಂಸಂಗರದೊಳುಮಾಱಾಂತವೈರಿಮನೆಯವೆಂತೊಂ

50 ನುಂಗುವನಧಟಂಜಗದಳಸಿಂಗಂಸಲೆಬೊಪ್ಪದೇವನೀವಲದೇವಂ ‖ ವ ‖ ಅನ್ತೆನಿಸಿದಸತ್ತಳಿಗೆನಾಡಮನೆಯಜಸದಾಳಬೊಪ್ಪದೇವರಸರುತಂನನಾಡವೊಳುಗುಂದದೊಳುಸುಖದಿಂರಾಜ್ಯಂ(ಗೆ)

51 ಗೆಯ್ಯುತ್ತುಮಿರ್ದ್ದು ‖ ಬಾಣಾಸುರಪ್ರತಿಷ್ಠಾಸ್ಥಾಣುವಿನಾಲಯವಕೋಟಲಿಂಗಂನೆಱೆಪಾರಾಣೋಕ್ತಮೆಂದುಕೇಳ್ವಕ್ಷಣಬಳಂಭಕ್ತಿಭರದಿನಿರದೆಳ್ತಂದಂ ‖ ಅನ್ತುಬಂದು ‖ ವೃ ‖ ಕೈಳಾಸಂಬ್ರ

52 ಮನೊಲ್ದಿಲ್ಲಿಗಭವಂಬಂದಗಡಂರಯ್ಯವಿಶಾಲೀಲಾಸ್ಥಾನಮಿದಲ್ತುನಂದನವನಬ್ರಾತಂಸರೋಜಾಕರಂಕೇಳೀನಾದಮರಾಳಕೋಕಿಳಶುಕಾನೀಕಂಲತಾಮಂಡಪಂಬಾಳಾಬ್ದಾವಳಿಯೊಂದುನೋಡಿರ . .

53 ಱಲ್ಸಾನಂದದಿಂಶೂಲಿಯಂ ‖ ವ ‖ ಅನ್ತುನೋಡಿತನ್ನಸತ್ತಳಿಗೆಯನಾಡಳಹೂರಶ್ರೀಯನಂತಕೋಟನಾಥನಂಗರಂಗಭೋಗಕ್ಕಂಪಾತ್ರಪಾಉಳಕ್ಕಂಜೀರ್ಣ್ಣೋದ್ಧಾರಕ್ಕಂಧಾರಾಪೂರ್ವ್ವಕದಿಂಕೊಟ್ಟು

54 ಕ್ರಿತಕೃತ್ಯನಾದನು ‖ ಸ್ವಸ್ತ್ಯನವರತವಿನಯವಿನಮಿತವಂದಿಸಂದೋಹಸಂತುಷ್ಯಮಾನಾನೂನದಾನಮಾನಸೋದಾರನುಂಪರನಾರೀಸಹೋದರನುಂಸಿಂಧುಕುಳಾನ್ವಯ

55 ವಾರ್ದ್ಧಿವರ್ದ್ಧನಸುಧಾಕರನುಂಪರಮವೈಷ್ಣವಂವಿಷ್ಣುಪದಪದ್ಮಮಂದಮಕರಂದಸುಗಂಧಬಂಧುರಶಿಳೀಮುಖಂಶ್ರೀಮನ್ಮಹಾಮಂಡಳೇಶ್ವರಂಈಶ್ವರದೇವರಸರಪ್ರತಾಪಮೆಂತೆಂದಡೆ ‖

56 ವೃ ‖ ಚಲದಿಂಚಾರಹಮಂನೆಯಕ್ಕಳಮಹಾದುರ್ಗ್ಗಂಗಳಂತಂನದೋರ್ವ್ವಲದಿಂಸಾಧಿಸಿಬಂದಯಾದವರದಂಡಂದಿಂಡುಮಾಯ್ದಿಕ್ಕಿಬೆಳ್ವಲವೀರಾಜಱೊಳೆಯ್ದೆತೇಜದಪ್ರೌಢಪ್ಪಿಂಕಪ್ಪ

57 ಮಂಕೊಂಡುನಿಶ್ಚಳಮಪ್ಪೀಮಲಪರ್ಕ್ಕಳೊಳ್ವೆಸನುಮಂದೇನೀಶ್ವರಂಶೂರನೋ ‖ ವ ‖ ಅನ್ತುಪ್ರತಾಪಮಂಪೆರ್ಚ್ಚಿಸಿಕೀರ್ತ್ತಿಲತೆಯಂನಿಮಿರ್ಚ್ಚಿಸಿಕೊಪ್ಪಲೆತಳವೀಡಾಗಿಶ್ರೀಮನ್ಮ

58 ಹಾಮಂಡಳೇಶ್ವರಂಈಶ್ವರದೇವರ್ಸರುರಾಜ್ಯಂಗೆಯ್ಯುತ್ತುಮಿರ್ದ್ದು ‖ ಕ ‖ ನಾಡಾಡಿಯಲ್ತುಸಿತಕರೇಕೂಡನೆನಿಪ್ಪಮಳಕೋಟನಾಥಸ್ಥಾನಂರೊಡಿಯೊಳಾಚಂದ್ರಾರ್ಕ್ಕಂಕೇಡಿಲ್ಲ. . . .

59 ವೇಳ್ಕುಮೆಂಬೀಭರದಿಂ ‖ ಅನ್ತುತಱಿಸಂದುತಂನೆಳವಟ್ಟುನಾಡಮಾಸೂರಂಧಾರಾಪೂರ್ವ್ವಕದಿಂಈಶ್ವರದೇವಂಪುಣ್ಯಾತಿಥಿಯೊಳುಕೊಟ್ಟುದ್ರಿಷ್ಟಾದ್ರಿಷ್ಟಮಂಸಾಧಿಸಿಕ್ರಿತಾರ್ತ್ಥನಾದನು ‖

60 ಸ್ವಸ್ತಿಸಮಧಿಗತಪಂಚಮಹಾಶಬ್ದಂದ್ವಾರಾವತೀಪುರವರಾಧೀಶ್ವರಂವಿಷ್ಣುವಂಶೋದ್ಭವಂಯಾದವಕುಳಕಮಳಕಳಿಕಾವಿಕಾಸಭಾಸ್ಕರಂಅರಿರಾಯಜಗಝಂಪಮಾಳ

61 ವರಾಯಮದನತ್ರಿಣೇತ್ರಗುರ್ಜ್ಜರರಾಯಭಯಂಕರಂತೆಲುಂಗರಾಯಸ್ಥಾಪನಾಚಾರ್ಯ್ಯಇತ್ಯಾದಿನಾಮಾವಳೀಸಮಾಳಂಕೃತಶ್ರೀಮತ್ಪ್ರೌಢಪ್ರತಾಪಚಕ್ರವರ್ತ್ತಿ ‖ ಕ ‖ ವೆಲ್ಲಾಗಿದೇ

62 ವತನೂಜಂಭಿಲ್ಲನುನಾಚೆಲ್ವಮಂಗೆಪುಟ್ಟಿದನದಟಂಬಲ್ಲಿದಜೈತುಗಿಯವನಿಂಸಲ್ಲಲಿತಂಜನಿಸಿನೆಗಳ್ದಸಿಂಹಣಭೂಪಂ ‖ ಅನ್ತಾಸಿಂಹಣನಪ್ರತಾಪವೆಂತೆಂದೊಡೆ ‖ ವೃ ‖ ಚೆಲದಿಂಧಾತ್ರಿಯೊಳು

63 ಳ್ಳಭೂಭುಜರುಮಂದೋರ್ವ್ವಿಕ್ರಮೋದ್ಯತ್ಸಿಖೋಜ್ವಳನಿಂದಂನೆಱೆಸುಟ್ಟುವೈರಿಲಲನಾವೈಧವ್ಯಮಂಮಾಡಿಕುಂಡಲತಾಂತೋಜ್ವಳಕೀರ್ತ್ತಿಯುಂಮೆಱೆದುಪಾರಾವಾರಪರ್ಯ್ಯಂತಮಾರ್ತ್ತಲೆಯಿಲ್ಲೆಂಬನೆಗಳ್ತೆವೆತ್ತನ

64 ತುಳಂಶ್ರೀಸಿಂಹಣೋರ್ವ್ವೀಶ್ವರಂ ‖ ಗಿರಿದುರ್ಗ್ಗಂವನದುರ್ಗ್ಗಮಾಯ್ದುಜಲದುರ್ಗ್ಗಾನೇಕದುರ್ಗ್ಗಂಗಳಂಭರದಿಂಸುತ್ತಲುಮುತ್ತಲುಂಸುಡಲುಕಾದಲ್ಕಿಲ್ಲಮೆಂಬನ್ತೆನಿರ್ಭ್ಭರದಿಂಸಾಧಿಸಿಮುಱುರಾಯ

65ರದಟಂಕಿಲ್ತಿಕ್ಕಿ ರಾಜ್ಯಾಂಗನಾತರಳಾಪಾಂಗಸುಖಾವಲೋಕನದಿನಿಪ್ಪರ್ಂಸಿಂಹಣೋರ್ವ್ವೀಶ್ವರಂ । ವ । ಮತ್ತಮಾಪ್ರತಾಪಲಂ
ಕೇಶ್ವರನೀಶ್ವರಸಮಾರಾಧನೋಪಚಾರಚಾರುಚರಿತಗುಣಗಣ

66ಗಣನಾತೀತಭುಜಬಳಪರಾಕ್ರಮಕ್ರಮಕಮಳಯುಗಳವಿನಮಿತಾಖಿಳರಾಜರಾಜವಿದ್ಯಾಧರಧರಣೀಪಾಳಕುಳಕಮಳಮಾ
ರ್ತ್ತಂಡನೆನಿಸಿವಿಜಯರಾಜ್ಯಮುತ್ತರೋತ್ತರಾಭಿ

67ವೃದ್ಧಿಯಿಂಸಲುತ್ತುಮಿರೆತತ್ಪಾದಪದ್ಮೋಪಜೀವಿ ॥ ಸಂಗರದೊಳತುಳಭುಜಬಳತುಂಗಂಗೆಣೆಯಾರೊಪರಮವಿಶ್ವಾಸಿಯೊಳಂ
ಭಂಗವಿರಹಿತನುಚಿರುದರಕಂಗಳಮುಳ್ಳನಿಸಿನೆಗಳ್ದನಾಹಿರಜ್ಯೈತಂ ॥

68ವ । ಅನ್ತುನೆಗಳ್ದಾಹಿರಜ್ಯೈತುಗಿದೇವಹಿರಿಯಬಳ್ಳಿಗಾವೆಯನೆಲವೀಡಿನೊಳಿರ್ದ್ದುರ್ಜಿಡ್ಡುಳಿಗೆಮುಖ್ಯವಾದದಕ್ಷಿಣದಿಶಾವರಮಂದು
ಷ್ಟನಿಗ್ರಹಶಿಷ್ಟಪ್ರತಿಪಾಳನದಿಂಪಾಳಿಸುತ್ತುಮಿರ್ದ್ದು ॥

69ಪುರಾಣೋಕ್ತದೊಳಾದಿಲಿಂಗವಿದುದಿಬ್ಯಕ್ಷೇತ್ರವೀಧರ್ಮ್ಮವಂ(ಸಾರ)ಂಸಾರಂಮಾಡಿಸಿಪುಣ್ಯಮಂನೆರಪುವೆಂಪೋಮಣ್ಬದಿ
ಲ್ಲೀದುಗಂಭೀರಾವಾಮಧಿಯಾಗಳಂತೆಪರಮಶ್ರೀಕೋಟಿನಾ

70ಥಂಗೆತಾಂಧಾರಾಪೂರ್ವ್ವಕದಿಂದೆಚಿಕ್ಕಸಕುನಸ್ವಗ್ರಾಮವಂಕೊಟ್ಟಪಂ ॥ ವ ॥ ಅನ್ತುಚಿಕ್ಕಶಕುನಮಂಶ್ರೀಕೋಟಿನಾಥಂಗೆ
ಯಾಹಿರಜ್ಯೈತುಗಿದೇವಂಕೊಟ್ಟುವಿಶೇಷತರಮಪ್ಪಗಣ್ಯಾಪುಣ್ಯ

71ಮಂಸಾಧಿಸಿದನಾಮಹಾಪುರುಷನಧರ್ಮ್ಮವಂಕೇಳ್ದು ॥ ಅರಿಬಿರುದಮದನಿವಾರಣಪರಬಳವಿಜಯಂನಿಜೇಶಸಿಂಹಣಭೂಮೀ
ಶ್ವರನಪರಮವಿಶ್ವಾಸಿಯೆನಿರುಪಮಪೋತಾರ

72ನಾಯ್ಕಂಭುಜವೀರ್ಯ್ಯಂ । ವ ॥ ಅನ್ತೆನಿಸಿದಪೋತಾರನಾಯ್ಕಂವೈರಿಮಂಡಳಮಂದಂಡಧರಂಗೆಗ್ರಾಸನಮನಿತ್ತುಭುಜ[ಬ]
ಳಪರಾಕ್ರಮಂತಿಳುವಳ್ಳಿಯನೆಲೆವೀಡಿನೊಳನಾಗರಖಂಡಮಂಪ್ರತಿಪಾಳಿಸುತಿ

73ರ್ದ್ದು ॥ ಕ ॥ ಕ್ರಿತಯುಗದಾದಿಯಲಿಂಗಂಶ್ರುತಿದೂರಂಕೋಟಿನಾಥಪೂರ್ವ್ವತಿರಮಣಸ್ತುತಿವೆತ್ತಾಕ್ರಯುವೆಂದಾಮತಿವಂತಂಧ
ರ್ಮ್ಮಬುದ್ಧಿಯಿಂಚಿಂತಿಸಿದಂ ॥ ಅನ್ತುನೆನದು ॥ ಧಾರಾಪೂರ್ವ್ವಕದಿಂದಂಕಾರುಣ್ಯ . . . .

74ಕೋಟಿನಾಥಮಹೇಶಾಗಾರಂತಿರಾಲಹಳ್ಳಿಯಸಾರತರಂಕೊಟ್ಟುಧರ್ಮ್ಮವಂನಿರ್ಮ್ಮಿಸಿದಂ ॥ ವ ॥ ಅನ್ತುಪೋತಾರನಾಯ್ಕಂ
ಆಲಹಳ್ಳಿಯಂಬಿಟ್ಟುಯಿರತ್ರಯಸುಖಮಂಪರತ್ರಯಗತಿಯಂಪಡೆದ . . . .

75ಸ್ವಸ್ತಿಸಮಸ್ತಪ್ರಶಸ್ತಿಸಹಿತಂಶ್ರೀಮನ್ಮಹಾಮಂಡಳೇಶ್ವರಂ ಪರನಾರೀಸಹೋದರನುದ್ದಂಡಮಂಡಳಿಕವೇಶ್ಯಾಭುಜಂಗಸಂಗ್ರಾ
ಮಧೀರಭುಜಬಳಪರಾಕ್ರಮನತಿವಿಷಮಹಯಾರೂ

76ಢರೇಖಾರೇವಂತನುಂಪರಬಳಕಿರಾತಂತರ್ಶರಣಾಗತವಜ್ರಪಂಜರನೆನಿಸಿದದ್ರೋಣಪಾಳಪ್ರತಾಪಮೆಂತೆಂದೊಡೆ ॥ ಜೇರಗೆಯೊ
ಕ್ಕಿಲ್ಗಣೆಯೆನಿಪ್ಪೆಗಳ್ತುಳಿದುಕೋಳ್ವ . .

77ಳೋರಂನನೆನಲುಧಾರಿಣಿಯೊಳದ್ರೋಣಪಾಳನುರ್ವ್ವೀಪಾಳಂ ॥ ಅನ್ತಾದ್ರೋಣಪಾಳಂ ॥ ಜಳನಿಧಿಪರಿವೃತವಸುಧಾತಳ
ದೊಳಶ್ರೀಕೋಟಿವಾಥದೇವಸ್ಥಾನಕ್ಕಾಳಿದೀಶಭವನವೆಂತುಂಗೆಲೆವನಲೆ . .

78ರಂ ॥ ವ । ಅನ್ತುಸ್ಮೃತ್ಯರ್ತ್ಥದಿಂಕೇಳ್ದುದ್ರಿಷ್ಟಸಾಧನೋತ್ಸುಕಂಶ್ರೀಮತ್ಕೋಟಿನಾಥಂಗೆಉತರಾಯಣಸಂಕ್ರಾನ್ತಿವ್ಯತೀಪಾ
ತದೊಳಧಾರಾಪೂರ್ವ್ವಕದಿಂಜೀರ್ಣ್ಣೋದ್ಧಾರಕ್ಕೆಂದುತಳ . . . .

79ಪಡೆದನಲ್ಲಿಂಬಳಿಕ್ಕೆ ॥ ॥ ಸಕಳೋರ್ವ್ವೀಪತಿಸಿಂಹಣಕ್ಷಿತಿಪರಾಜ್ಯಾಂಬೋಧಿಪೂರ್ಣ್ನೇಂದುಸಂದೆಕಳಂಕಂಭುಜವಿಕ್ರ
ಮಪ್ರಬಳವಿಖ್ಯಾತಂಸದಾನಾನ್ವಿತಂಸುಕಳಾಧಾರಧರಾಧರೋನ್ನತ . . . . . .

80ರನೇಂಬುಕಾತೀಶಂಶಿವನಾಯ್ಕಂಶಿವಪದಾಂಭೋಜದ್ವಿರೇಫಾಹಯಂ ॥ ವ ॥ ಅನ್ತುನೆಗಳ್ತೆವೆತ್ತಶಿವನಾಯ್ಕಂಅನಂತಕೋಟಿ
ಶಿವನಾಯ್ಕಂಗೆಜಿಡ್ಡು[ೞ]ಗೆನಾಡಕಾಂಮೂರಂಧಾರಾ . . .

81ತರವಾಗಿಕೊಟ್ಟುಕೃತಾರ್ತ್ಥನಾದನು ॥ ॥ ಸ್ವಸ್ತಿಸಮಸ್ತಪ್ರಶಸ್ತಿಸಹಿತಂಶ್ರೀಮತ್ಸರ್ವ್ವಾಧಿಕಾರಿಸಕಳಜನಮನೋಹಾರಿ
ರಾಯಶ್ರೇಷ್ಟಿಸರೋಜನೀರಾಜಹಂಸವಿದಗ್ಧಯುವತೀ . . . . .

82ಮಾಳಂಕೃತನೆನಿಸಿದ ॥ ವೃ ॥ ಆದಿಗಣಾವತಾರನುದಿತೋದಿತಕೀರ್ತ್ತಿಲತಾವಿತಾನಪುಣ್ಯೋದಯಮೂರ್ತ್ತಿಬಂಧುಜನಕ
ಲ್ಪಕುಜಂಭುಜವಿಕ್ರಮಂಪರಚ್ಛೇದಿ . . . . . .

83ಪಯೋರ್ಹಮತ್ತಭೃಂಗನೀಂಮೇದಿನಿನಾಥಸಿಂಹಣನಮಂತ್ರಿಶಿಖಾಮಣಿಹೋಂನಬೊಂಮಿಗಂ ॥ ವ ॥ ಅನ್ತೆನಿಸಿದಹೊಂನರಾ
ಯಂಶ್ರೀಸ್ವಯಂಭುಕೋಟಿನಾಥಂಗೆಲು . . . .

84ಪುಣ್ಯತಿಥಿಯೊಳಜೀರ್ಣ್ಣೋದ್ಧಾರಕ್ಕೆಕಬ್ಬಿಲವಳಿಯಂಧಾರಾಪೂರ್ವ್ವಕದಿಂಕೊಟ್ಟುಕೃತಾರ್ತ್ಥನಾದನನಂತರಂ ॥ ॥ ಸ್ವ
ಸ್ತಿಸಮಧಿಗತಪಂಚಮಹಾಶಬ್ದಮಹಾ . . . . . .

85 ಕುಳತಿಳಕಂ ಅರಿರಾಯಗಜಾಂಕುಸಂಶ್ರೀಮತ್ಕಂದಾಉರದಬೀರದೇವರಸರು ‖ ಕ ‖ ಪೂರ್ವ್ವಕ್ರಿತಕೋಟಿನಾಥಂಪೂರ್ವ್ವತಿರಮೆಣಂಗೆಬೀರದೇವಂಧಾರಾಪೂರ್ವ್ವಕದಿಂದೊಸೆದಿ . . . .

86 ಗೆಱೆಯು ‖ ಅನ್ತುಬೀರದೇವಂತೆಳ್ಳಂಗೆಱೆಯಂಬಿಟ್ಟುಶಕ್ತಿಯಂಭಕ್ತಿಯುಮಂಪಡೆದನು ‖ ಸ್ವದತ್ತಂಪರದತ್ತಂವಾಯೋಹರೇತಿವಸುಂಧರಾಷಷ್ಟಿರ್ವ್ವರ್ಷಸಹಸ್ರಾಣಿವಿಷ್ಠಾಯಾಂ . . . . . .

87 ಮಂಗಳಮಹಾ ಶ್ರೀ ಶ್ರೀ ಶ್ರೀ ಕುಪ್ಪಟೂರತೋಟಸ್ಥಳದಸೀಮಾಮಾರ್ಗ್ಗಮತ್ತಿಕಟ್ಟದಮೋಣೆಯಲುಬಡಗಲುಬಿಜ್ಜಳಿಯಸಮರತೋಟ . . . . . .

88 ಟವೊಂತೆಂಕಲುಸೆಣಗಿಯರತೋಟವುಂಪಡುವಲುಹೆಬ್ಬಾಯಿಕಲ್ಲುಇನ್ತುಚತುರಾಘಾಟವುನುಳ್ಳಆಱುಸಾವಿರಕರಸ್ಥಳದತೋಟಂಸರ್ವ್ವ . . . .

89 ಸಾಮಾನ್ಯೋಯಂಧರ್ಮ್ಮಸೇತುಂನ್ರಪಾಣಾಂಕಾಲೇಕಾಲೇಪಾಲನೀಯೋಭವದ್ಭಿಃಸರ್ವ್ವಾನೇತಾರ್ಭಾವಿನಃಪಾರ್ತ್ಥಿವೇಂದ್ರೋಭೂಯೋಭೂಯೋ . . . .

277

ಅದೇ ರಂಗಮಂಟಪದ ಉತ್ತರಬಾಗಿಲ ಬಳಿ ಜಗಲೀ ಕಲ್ಲಮೇಲೆ ಬರೆದಿರುವದು.

ಪ್ರಮಾಣ 4′ 5″ × 3′ 6″.

1 ಅಬ್ಬಲೂರಗ್ರಾಮೇಸ್ವರದಶಾಸನ ‖ ನಮಃಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಲಸ್ತಂಭಾ

2 ಯಶಂಭವೇ ‖ ಶ್ರೀವಧುವಕ್ಷದೊಳುವಿಜಯಕಾಮಿನಿದೊರ್ವ್ವಲದೊಳುಲಸದುಯಶಃಶ್ರೀವಧುಧಾತ್ರಿಯುಂ . ನಿರ್ದಜಾಡತರಂಬರವಂಕೆಲಂ

3 ಬರಂತೀವಿರೆಕೂತ್ತುರಕ್ಷಿಸುತವಿಕ್ಕೆಗಜೇಶ್ವರನೀಶ್ವರಂಮಹಾದೇವಜಮೂಪನಂಪ್ರಬಳಚಾಪನನಪ್ರತಿಮಪ್ರತಾಪನಂ ‖ ಶ್ರೀವಲ್ಲಭನತುಳಜ

4 ಯಶ್ರೀವಲ್ಲಭನಮಳನಾಭಿಪದ್ಮೋದ್ಭವವಾಕುಶ್ರೀವಲ್ಲಭಭುಜಸಂಭ[ವ]ರೀವಸುಧೆಯೊಳೆಸದರಖಿಳಚಾಳುಕ್ಯೇಶರೂ ‖ ಅವರೊಳುವಿಕ್ರಾಂತಲಕ್ಷ್ಮೀನಿಧಿವಿತತ

5 ಭುಜಾ[ಟೋ]ಪದಿಂಲಾಳನಂಮಾಳವನಂಚೇರಂಮನಂಗೊಜ್ಜರನನಲೆದುಚಾಳುಕ್ಯಸಾಂಮ್ರಾಜ್ಯಲಕ್ಷ್ಮೀಧವನುದ್ಯದ್ಧಜದಿಂದಂ

6 ನಿಮಿರ್ದಮರ್ದಯಶೋರಾಸಿಯಿಂಲೀಲೆಯಿಂದಂಭುವನಪ್ರಸ್ತುತ್ಯತೈಲಕ್ಷಿತಿಪತಿತಳೆದಂವೀರಚಾಳುಕ್ಯರಾಯಂ ‖ ಆತನತನೂಜಂಧೈರ್ಯೋಪೇ

7 ತಂಸತ್ಯಾಶ್ರಯಕ್ಷಿತೀಶಂಭುವನಖ್ಯಾತಂನೆಗಳ್ದದತ್ತಮಜಾತಂವಿಕ್ರಮಹಿತನಪ್ರತಿರೂಪಂ ‖ ಅತಿಬಳನಾತನತಂಮಂಕ್ಷಿತಿಪತಿದಶಮರ್ಮನಾತ್ಮ . .

8 ಭೂನುತಜಯಸಿಂಹನ್ರಿಪಂತತ್ಸುತನಪ್ರತಿಮಲ್ಲನೆನಿಪನಾಹವಮಲ್ಲಂ ‖ ಆಹವಮಲ್ಲದೇವನತನೂಭವನಾಭುವನೇಕಮಲ್ಲನುದ್ಯೋ . .

9 ವಿಕ್ರಮಂವಿಭವಶಕ್ರನುದಗ್ರಪಯೋಧಿವೇಷ್ಟಿತಾಕ್ಷಿಹಿತಕಾರ್ಯ್ಯನಾತನನೂಜಂಸಮರಾಂಗಳಭೀಮನುಗ್ರವಿದ್ರೋಹಿವಿಮರ್ದಿವೀರಪರಮರ್ದಿವಿಶಾಳಭ . . .

10 ಜಭುಜಂ ‖ ಜವನೊಳುಸೌಯ್ಯಕ್ಕೆಧಾತ್ರೀಧರನಿಕರದೊಳುತುಂಗಧೈರ್ಯ್ಯಕ್ಕೆಕುಂಭೋದ್ಭವನೊಳುಬಿಣ್ಪಿಂಗೆವಾರಾಂನ್ನಿಧಿಯೊಳೆಸೆವಗುಣ್ಪಿಂಗೆಮಾಱಾಂಪನಾ . . . .

11 ನಂಗೈಯ್ಯಾನುಲೆಂಬಸಾವನತಿಶಯಮೂರ್ತ್ತಿಯಂತೋರ್ಪ್ಪನತ್ಯುಧ್ವತೇಜಸ್ವಕ್ರನುದ್ಯಂನಿಜಗುಣಗಣದಿಂವೀರಹೆಂಮಾಡಿರಾಯಂ ‖ ವಿಕ್ರಮದಿಂತನಗೆದಿಶಾಜ . . . . . .

12 ಕೆಯ್ಯವಿಕ್ರಮಾದಿತ್ಯಂಭೂಚಕ್ರಮನಾಳ್ದಂನತರಿಪುಚಕ್ರಂದಃಳ್ಲ್ರಂಭ್ಯಮೆನಿಸಲಾಜ್ಞಾಚಕ್ರಂ ‖ ಭೂಲೋಕಮಲ್ಲನುಬ್ಬಿನಪಾಳಕನಸುಹ್ರಿಂನ್ರಿಪಾಳಕುವಿಕ್ರಮಸಂ . . . .

13 ತನಯುಂಪಾಳಿಸಿದಂಸಕಳಿವೆುನಿಪವಿಶ್ವಂಭರೆಯುಂ ॥ ಧರೆಯಂತಾಳ್ದಲಹೀಶ್ವರಂನಿಜಭುಜಸಾಹಸ್ರಮಂತಾಳ್ದಿದಿಕ್ಕರಿಯಂಪೊರ್ದೆ
ಕಠೋರಪೀಠಕ . . . . .

14 ಶ್ರಮಾಸಾಸ್ವತತ್ಪರನೆಂದೀಕ್ಷಿಸೆಲೀಲೆಯಿಂನಿಜಭುಜಪ್ರಸ್ಫೂರ್ತಿಯುಂತಾಳ್ದಿದಂಧರೆಯತುಂಗಕುಚೈತೆಯೋಢರೆಯನೀಸೋ
ಮೇಶ್ವ[ರ]ಂರಾಗದಿಂ ॥ ಅ . . . . .

15 ಗೆನ್ನಲ್ಲಂನಿರ್ವ್ಮಿತಜಳರಿಪುವನಿತಾದರ್ಮ್ಮಲ್ಲಂಭೂಪಾಳಕುಳಕ್ಕೆಲ್ಲಂಜಗದೇಕಮಲ್ಲನಪ್ರತಿಮಲ್ಲಂ ॥ ಅರಿಧಾತ್ರೀಪತಿಕೋಳಗೂ
ರ್ಜ್ಜರಚಮೂಪಾ . . . . .

16 ಬಾಹುಮಂದರಮಂದಕ್ರಿಯೆಯಿಂದೆಪುಟ್ಟಿದದಟಂದಾ . ಣಿಯುಂಲಕ್ಷ್ಮಿಯಂತುರಗಾನೀಕಮನೆಯ್ದೆಕೊಂದುಜಗದೊಳುವಿಕ್ಷಾ
ತಿಯಿಂತಾಳ್ದಿ . . . .

17 ಗದೇಕಮಲ್ಲವೆಸರಿಂಚಾಳುಕ್ಯಚಕ್ರೇಶ್ವರಂ ॥ ವಚನ ॥ ತದನಂತರಂತದನುಜನಪ್ರತಾಪಮೆಂತೆಂದೊಡೆ ॥ ಯಿಂಮಡಿದಶಕಂಠಂ
ಗೆಪದಿರ್ಮ್ಮಡಿ . . . . . .

18 ಗೆರಾಮಂಗಾತನೂರ್ಮ್ಮಡಿತ್ತೈಲಪಹೀಪನೂರ್ಜಿತನಾದಂ ॥ ಧರೆಯಂವಿಸ್ತೀರ್ಣ್ನಲಕ್ಷ್ಮೀಧರೆಯ(ಂ)ನನುದಿನೋಪಾರ್ಜಿತಾಂಗಂ
ಣ್ಯಪುಂಣ್ಯೋಧರೆಯುಂಸಾ . . . . .

19 ದಸಪತಿನಿಸ್ಸೀಮಕೇಳೀಧರೆಯುಂನಾನಾವಿಧಾಸೀರ್ಧರೆಯನತಿಶಯಂಸ್ವಚ್ಛಸಂಕೀರ್ತ್ತಿವಲ್ಲೀಧರೆಯಂತ್ರೈಳೋಕ್ಯಮಲ್ಲಕ್ಷಿತಿಪತಿ
ತಳೆದಂವೀರಲಕ್ಷ್ಮೀವಿಳಾಸಂ . . . .

20 ನಿತಿಯಾದಳೆನಲ್ಕೆವಿಜಯಲಕ್ಷ್ಮೀಪೀಠಾನತಬಾಹುನಪ್ರತಿಹತತೇಜಂವೈರಿಹೃದೆಯಕ್ಕೆಲ್ಲಂತೈಲಂ ॥ ವ ॥ ಸ್ವಸ್ತಿಶ್ರೀಭುವನಾಶ್ರ
ಯಂಪ್ರಿಥ್ವೀ . . . . . .

21 ಜಾಧಿರಾಜಪರಮೇಶ್ವರಂಪರಮಭಟ್ಟಾರಕಸತ್ಯಾಶ್ರಯಕುಳತಿಳಕಂಚಾಳುಕ್ಯಾಭರಣಂಶ್ರೀಮಚಕ್ರವರ್ತ್ತಿತ್ರೈಳೋಕ್ಯಮಲ್ಲ
ದೇವಂನಿರುಪಮ . . . .

22 ಗೆಯಿಯುತ್ತಮಿರೆತತ್ಕಾಲದೊಳು ॥ ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂಕಾಳಂಜನಪುರವರಾಧೀಶ್ವರಂ
ಸುವರ್ಣ್ನವೃಷ . . . . .

23 ತೂರ್ಯ್ಯನಿರ್ಘೋಷಣಂಕಳಚೂರ್ಯ್ಯಕುಳಕಮಳಮಾರ್ತ್ತಂಡಂಕದನಪ್ರಚಂಡಂಮಾನಕನಕಾಚಳಂಸುಭಟರಾದಿತ್ಯಂ
ಕಲಿಗಳಂಕುಸಂಗಜಸಾಮಂತ . . . . .

24 ಜ್ರಪಂಜರಂಪ್ರತಾಪಲಂಕೇಶ್ವರಂಪರನಾರೀಸಹೋದರಂಶನಿವಾರಸಿದ್ಧಿಗಿರಿದುರ್ಗ್ಗಮಲ್ಲಂಚಲದಂಕರಾಮಂವೈರಿಭಟಕಂಠೀರವಂ
ನಿಸ್ಸಂಕಮಲ್ಲಂನಾಮಾದಿಸಮಸ್ತಪ್ರಶಸ್ತಿ . . . .

25 ನ್ಮಹಾಮಂಡಳೇಶ್ವರಂಬಿಜ್ಜಣದೇವರ್ಸ್ವರನಿರ್ಭ್ಭರಭರಪ್ರತಾಪಮೆಂತೆಂದೊಡೆ ॥ ವ್ರ ॥ ಮುಳಿಸಂಕೋಳಂಗೆಜೆಹ್ವಾಗ್ರದತುದಿಬೆ
ಳಗಂತೋರಿಲಾಟಂಗೆತತ್ತರಳ . . . .

26 ದಳ್ಳಿಸಿನಿರ್ವ್ಮಿದುರ್ನಿಜಜ್ವಳೆಯಿಂನ್ನಡಿವಿಧ್ವಿಟ್ಕುಳವಿತಾನ್ರಸ್ತಾಂತರಂ . ಚಲಚಿಮಿಸಲವಿಕ್ರಾಂತವಿಸ್ಫೂರ್ತ್ತಿಯಿಂದಸ್ಖಳಿತಶ್ರೀಬಿ
ಜ್ಜಣೇಶಕ್ಷಿತಿಪತಿವಿತತೇಜೋಪತೇಜ . . . . .

27 ದಿ.ಧೈರ್ಯ್ಯಂಧೈರ್ಯ್ಯದಿಂದಂಮೆಚಿವನಿಜಮೌಖಿರ್ಯ್ಯದಿಂದಾರ್ಜ್ಜಿತಕಾರ್ಯ್ಯಂಕಾರ್ಯ್ಯದಿಂದಗ್ಗಳಿಪನಿಜಮಹಾಸಾರ್ಯ್ಯ
ಮಾಸಾರ್ಯ್ಯ . .

28 ರ್ಜಿತಂತಾನದಂತಾನದಿಂದಿಕ್ತಟಘಟಿತಂಲಸತುಕೀರ್ತಿಯೊಂದುನ್ನತನೆಂದುಂವೈರಿಭೂಪಪ್ರತತಿಮತಭುಜಂಬಿಜ್ಜಣಕ್ಷ್ಮಾತಳೇ
ಶಂ ॥ ವ ॥ ಅಂತ್ತಪ್ರತಿಮ .

29 ಸಮ . . . ರಿಪುಪ್ರತಾಪನುಂದತಿತ್ರೀಚಕ್ರಮನಾಕ್ರಮದಿಂರಾಜ್ಯಂಗೆಯ್ಯುತಮಿರ್ದೊಂದುದೆವಸಂಶ್ರೀಮದ್ಬನವಸೆದೇಶಂ
ಸುಧಾಸಾರವಾಗೆ

30 ವಿಪುಳಲಕ್ಷ್ಮೀನಿವಾಸಮೊಳ್ವರಗಂಣ್ಯಪುಂಣ್ಯಾನಪ್ಪೆ(ಪುಂಣ್ಯವಪ್ಪೆ)ಮಣ್ಮನಕ್ಷಮನೆದಾವಿಚಾರಚತುರನಪ್ಪುದಂತದಭಿಪ್ರಾಯ
ಮನಱಿ . . . . .

31 ರೆಗತಿಜ್ಞನಂಮತಿಕಂಪ್ರಜ್ಞನುಮೆನಿಸಿ ॥ ಸ್ವಸ್ತಿಶ್ರೀಮನ್ಮಹಾಪ್ರಧಾನಂಸಕಲಜನನಿಧಾನಂಪೂರ್ವ್ವಶೀಪ್ರಿಯಪಾದಾರವಿಂದಭ್ರಿಂ
ಗ । ಸಿರ್ವ್ವಿತ . . . .

32 ಕುಳಮನೋಭಂಗಜಗಜ್ಜನಚಿಂತಾಮಣಿಯುಂ । ಸುಭಟಚೂಡಾಮಣಿಯುಂ । ನಿಖಿಳಾರ್ತ್ಥಿಪ್ರಾರ್ತ್ಥನಪ್ರಪೂರ್ತ್ತಿನಿಮು
ರ್ತ್ತಿಸಿತಯ

33 ಶಸ್ಸಚಂದ್ರಚಂದ್ರಿಕಾಧವಳೀಕೃತಜಗದ್ವಳಯನುಂ । ಪರಿಪಾಳಿತಮಹೀವಳೆಯನುಮೆನಿಪಶ್ರೀಮನ್ಮಹಾದೇವದಂಡನಾಯಕಂ
34 ವೈರಿಜಯಕಷಾಯಕನುಮೆನಿಸಿ ॥ ವೃ ॥ ಶ್ರೀಯುಂವಿಸ್ತೀರ್ಣ್ಣವಕ್ಷಸ್ಥಳವಳೆಯದೊಳಾಚಂದ್ರತಾರಾಸಹಶ್ರೀಯುಂಸಂಪನ್ನದೀರ್ಘಾಯುಷ್ಯಂನತಿ
35 ಶಯದಿಂತಾಳ್ದಿದೋರ್ದ್ದಂಡವೀರಶ್ರೀಯುಂತಾಕ್ರಾಂತಧಾತ್ರೀತಳವಖಿಳಪಯೋರಾಸಿವೇಳಾಂತವೆಂದುಂಜೇಯೇಂದೆಂಬಂನಮಾತ್ಯೋರ್ಜ್ಜಿತವಿಜಯಮಹಾದೇವದಂಡಾ
36 ಧಿನಾಥಂ ॥ ವಚನ ॥ ಆಚಮೂಪತಿಯನಿರ್ಮ್ಮಳಾನ್ವಯಮೆಂತೆಂದೊಡೆ ॥ ವೃ ॥ ಜನಪಂಮೂಳವರಾಜನಾತನಸತಿಪ್ರೋದ್ಭುಲ್ಲಪಂಕೇರುಹಾನನೆಪದ್ಮಾಂಬಿಕೆ
37 ಮಾತೆನಿರ್ಮ್ಮಳತರಾಂಗಸ್ತೋಕಸದ್ಗೋತ್ರಸಂಜನಿತಂತಜ್ಜನಕಾನುಜಂಜಿತರಿಪುಶ್ರೀಕಾಳಿದಾಸಂತದಂಗನೆತಾನೇಕಲದೇವಿತತ್ತನೆಯನೀಮಾದೇವದಂಡಾ
38 ಧಿಪಂ ॥ ವ ॥ ಆಕಾಳಿದಾ[ಸ]ಚಮೂಪತಿಯಪ್ರಭಾವಮೆಂತೆಂದೊಡೆ ॥ ನುಡಿದೊಡೆತಾಂಬ್ರಪತ್ರಲಿಖಿತಾಕ್ಷರಮಿತ್ತನೆಪೊಯ್ದಡಯಿಂಚಲಂಬಿಡಿದನೆವಜ್ರಲೇಪ
39 ಮಹಿತಾವನಿಪಾಳರನಾಜಿರಂಗದೊಳು ತೊಡರ್ದ್ದಗೆಕೊಂದನೆಂಬುದಿದುಭೇರಿಯಘೋಸನೆನಿಂನಮೆಚ್ಚುಮೇಣುನುಡಿಯಿಸುಜೇಡುಮೆಪ್ಪಿಡಿದೊಡ
40 ರುತೊದಳಾದುದೊಕಾಳಿದಾಸನೊಳು ॥ ವ ॥ ಯಿಂತೆನಿಸಿದಮಹಾಪ್ರಧಾನಂಕಾಳಿದಾಸಚಮೂಪತಿಯಪ್ರಿಯಪುತ್ರಮಹಾದೇವದಂಡೇಶ್ವರನಪ್ರತಾಪಮೆಂತೆಂದೊಡೆ ॥ ವೃತ್ತ ॥ ಅ
41 ರಿಪಾದಾಘಾತದಿಂಬಿಕ್ಕನೆಬಿರಿದಚಳಬ್ರಾತಮುತ್ತುಂಗಮಾಳೀಭಟಜಾಳಚ್ಛಂನ್ನದಿಗ್ಮಂಡಳವರುಣರಸೋಂನ್ವಂತಸಂಗ್ರಾಮಧಾತ್ರೀಧರಭೂತೋದ್ಧೂತನೀತಂಮೃಗನಿ
42 ಕರಸಮಾವಿಷ್ಟಗೇಹಂ[. . .]ನಿರುತಂಪೇಳಲ್ಕೆಸಾಮಾನ್ಯಮೆಸುಭಟಮಹಾದೇವಭೂರಿಪ್ರತಾಪ ॥ ಚಲದಭಿರಾಮನಣ್ಮಿನತವರ್ಮ್ಮನೆಭೆನ್ನರಚಕ್ರವರ್ತ್ತಿಭೂವಳೆಯ
43 ದಭೂಷಣಂಚದವರಾಜನುದಾರನುದಾತ್ತಮೂರ್ತ್ತಿನಿರ್ಮ್ಮಳತೆಯಜಲ್ಮಭೂಮಿಸುಜನತ್ವದಸುಗ್ಗಿವಿಳಾಸದಾಗರಂಕಲಿಗ[.]ದೇವನೆಂಬುದುನಿತಂಮಹದೇ
44 ವನೀಜಗಜ್ಜವಂ ॥ ವಚನ ॥ ಅಂನ್ತು[ನೆ]ಗಳ್ತ್ಗಂಪೊಗಳ್ತೆಗಂತಾನೆನೆಲೆಯೆನಿಸಿಶ್ರೀಮದುಬಿಜ್ಜಣೇಸ್ವರಮನೋರಥಸಮಾರೂಢನಾಗಿಬನವಸೆದೇಸವನಾಳುತಿರಲು
45 ತದ್ದೇಸವಿಳಾಸಮೆಂತೆಂದೊಡೆ ॥ ವೃತ್ತ ॥ ಫಳಭರದಿಂಮನಂಗೊಳಿಪಪೂಗವನಂವನದೊಳುಸರೋಜಖಂಡಖದಪೊನಲ್ಗಳಿಂಬೆಳದುಕತ್ತುಲಿಸಿಪ್ಪೆಲೆವಳ್ಳಿಬಳ್ಳಿಗೋಡು
46 ಲಿವಬಕಂಪಿಕಧ್ವನಿಗಳಿಂನಲಿದಾಡುವನಂಗನಂಗನಾಕುಳಮದೆಲಕ್ಷ್ಮಿಲಕ್ಷ್ಮಿಗೆಸಮೃದ್ಧಿಕರಂಬನವಾಸೆದೇಸದೊಳು ॥ ವಚನ ॥ ಆಬನವಾಸೆದೇಶಕ್ಕೆತಿಳಕಮಿ
47 ಪ್ಪಂತಿಪ್ಪಮಹಾಪಟ್ಟಣವಿನಿರ್ಜಿತಪುರಂದರಪುರಂಬಳ್ಳಿಪುರಮುದಬಿಳಾಸಮೆಂತೆಂದೊಡೆ ॥ ಕಂ ॥ ಕಳಹಂಸಗತಿಯುಮೃದುಕೋಕಿಳನಾದದನೀಳಕಜ
48 ದತನುಮಧ್ಯದಮಂಗಳಕಳಸಕುಚದಸೊಗಯಿಪಲಲಿತಮನೋಜನಮದೆತ್ತುಬಂಬಳ್ಳಿಪುರದೊಳು ॥ ವ ॥ ಮತಂಧನದೋಪರೆನಿಪ(ರೆನಿಪ)ನಗರಂಗಳಂತ್ರಿಪುರಾಂಗೆಲೀಲಾ
49 ನಿವಾಸಮೆನಿಪಮೂಱುಂಪುರಂಗಳಿಂಸ್ವದರುಶನಾನುಸಾರಿಸದಾಚಾರಾಚರಣದಿಂನಿಸ್ಸ್ವಾತ್ಯಮೆನಿಪಪಂಚಮಠಂಗಳಿಂಧರ್ಮ್ಮಪ್ರವರ್ದ್ಧನಕೆಂದುಮೂಱುಂವೃಥ
50 ಗಳುಂ । ಮನೆಕಟ್ಟದಂತಿರೊಪ್ಪುವಮೂಱುಂಬ್ರಹ್ಮಪುರಿಗಳಿಂ । ವಿವಿಧನಾನಾರಂಮ್ಯಹಂಮ್ಯ್ಯಂಗಳಿಂ । ನತಿಸೌಂದರ್ಯ್ಯಮೆನಿಪಬಲಿಪುರದೊಳುದುಷ್ಟ
51 ನಿಗ್ರಹವಿಶಿಷ್ಟಪ್ರತಿಪಾಲನದಿಂಶ್ರೀಮಂನ್ಮಹಾಪ್ರಧಾನಂಕರಿತುರೆಯಪಟ್ಟಸಹಣಿಸೇನಾಧಿಪತಿಹುಲಿಗೆಱೆ ನವಸೆನಾಡಸರ್ವ್ವಾಧಿಕಾರಿಶ್ರೀಮ(ನ್ಮ)
52 ನ್ಮಹಾದೇವದಂಡನಾಯಕಂಸುಕಸಂಕಥಾವಿನೋದದಿಂರಾಜ್ಯಂಗೆಯುತ್ತಮಿರ್ದ್ದೊಂದುದಿವಸಂ ॥ ವೃ ॥ ಕೆಲದೊಳುನೀಳಾಳಕಾಳಂಕೃತೆಸಸಿಮುಖಿನೀಳಾ[ರು]ಂಧತೀದೇವಿ
53 ಮತ್ತಂಕೆಲದೊಳುಲಾವಣ್ಯಲಕ್ಷ್ಮೀನಿಧಿನಿಜವಧುಪದ್ಮಾವತೀದೇವಿಯಂತ್ತೀಕೆಲದೊಳುಪೊರ್ದ್ದಿಲಕ್ಷ್ಮೀದ್ವಯಾಳಂಕೃತಂನವ

(ಮುಂದೆ ಬರವಣಿಗೆ ಇಲ್ಲ.)

278

ಅದೇ ದೇವಸ್ಥಾನದೊಳಗೆ ಅಮ್ಮನವರ ಗುಡಿ ದೂಲದ ಮೇಲೆ ಬರೆದಿರುವದು.

1 . . . .
2 . . . . ನಮಃಸ್ವಸ್ತಿಶ್ರೀಜಯಾಭ್ಯು
3 ಶಕವರುಷ ೧೪೪೦ನೆಯ ಬಹುಧಾಂನ್ಯಸಂ
4 ವತ್ಸರದಜೇಷ್ಟಶುಧ ೧೫ ಸೋಮವಾರಸೋ
5 ಮೋಪರಾಗಪುಂಣ್ಯಕಾಲದಲೂಶ್ರೀಮದ್ರಾ
6 ಜಾಧಿರಾಜರಾಜಪರಮೇಶ್ವರಶ್ರೀವೀರಪ್ರತಾ
7 ಪಶ್ರೀಕೃಷ್ಣರಾಯಮಹಾರಾಯರೂಕೋಟಿನಾ
8 ಥದೇವರಂಗಭೋಗವೈಭವಕೆಸಲುವಗ್ರಾಮಗಳು
9 ಖಿಲವಾಗಿಯಿದರೆಆಕೃಷ್ಣರಾಯಮ
10 ಹಾರಾಯರೂ . ಪುರದಬೀ
11 ಡಿನಲುಸುಖರಾಜ್ಯಂಗೈಉತಿಹಸ
12 ಮಯದಲುಕೋಟಿನಾಥದೇವ
13 ರಿಗೆಪೂಜಾರಗ್ರಾಮಗಳೊಳಗೆಜೀ
14 ರ್ಣೋಧಾರವಮಾಡಿಶಕವರುಷ
15 ೧೪೪೦ ನೆಯ ಬಹುಧಾಂನ್ಯಸಂ
16 ವತ್ಸರದಜೇಷ್ಟಶು ೧೫ ಸೋಮವಾರಸೋ
17 ಮೋಪರಾಗಪುಂಣ್ಯಕಾಲದಲು
18 ಜೇ . ಷ್ಟನಕ್ಷತ್ರದಲಿತುಂಗಭದ್ರಾ
19 ತೀರವಿರೂಪಾಕ್ಷಲಿಂಗಸಂನಿಧಿಯಲಿ
20 ಆಕೃಷ್ಣರಾಯಮಹಾರಾಯರೂಕೋ
21 ಟಿನಾಥದೇವರಿಗೆಬಿಟ್ಟಗ್ರಾಮ
22 ಕೋಟೇಶ್ವರಆನೆವಟಿ
23 ಬ್ಯನಕೆಜಿಅಸಗನಹಳಿಲೊ
24 ಕ್ಕ ವ ಯಿಾಆಯಿದುಗ್ರಾಮ
25 ವನೂಆಚಂದ್ರಾರ್ಕ್ಕಸ್ಥಾಯಿ
26 ಯಾಗಿನಡವಮರಿಯಾ
27 ದೆಯಲಿಕೋಟಿನಾಥದೇವರ
28 ಶ್ರೀಪಾದಕ್ಕೆ ಸಮರ್ಪ್ಪಿಸಿದನು
29 ದಾನಪಾಲನಯೋರ್ಮಧ್ಯೇದಾನಾಛ್ರೇ
30 ಯೋನುಪಾಲನಂ ದಾನಾಸ್ವರ್ಗಮವಾ
31 ಪ್ನೋತಿಪಾಲನಾದಚ್ಯುತಂಪದಂ
32 ಸ್ವದತ್ತಾದ್ವಿಗುಣಂಪುಂಣ್ಯಂಪ
33 ರದತ್ತಾನುಪಾಲನಂಪರದ
34 ತ್ತಾಪಹಾರೇಣಸ್ವದತ್ತಂನಿಷ್ಫ
35 ಲಂಭವೇತ್ಸ್ವದತ್ತಾಂಪ ದ
36 ತ್ತಾಂವಾಯೋಹರೇತಿವಸುಂಧರಾಂ
37 ಷಷ್ಟಿರ್ವರ್ಷಸಹಸ್ರಾಣಿವಿಷ್ಟಾಯಾ
38 ಂಜಾಯತೇಕ್ರಿಮಿಃಶುಭಮಸ್ತುಮಂ
39 ಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

279

ಅದೇ ಅಮ್ಮನವರ ಗುಡೀ ದೂಲದ ಮೇಲೆ ಬರೆದಿರುವದು.

(ನಾಗರಾಕ್ಷರ)

1 ಶುಭಮ
2 ಸ್ತು ॥ ಉಪ
3 ಮನ್ಯುಗೋ
4 ತ್ರದಕಠ
5 ಶಾಖೆಯ
6 ಸಿದ್ಧರ
7 ನಾರಣ
8 ಭಟ್ಟರ
9 ಮಕ್ಕಳು
10 ಹೇಮಣ
11 ಭಟ್ಟರು
12 ಆದೇವ
13 ನಾಯಕ
14 ರಮುಖ
15 ದಿಂದಲೂ
16 ಕೃಷ್ಣರಾ
17 ಯರಕೈ
18 ಯ್ಯಲೂ
19 ಕೋಟಿ
20 ನಾಥದೇ
21 ವರಿಗೆ
22 ಗ್ರಾಮಗ
23 ಳಬಿಡಿ
24 ಸಿಕೊಂ
25 ಡುಬಂದ
26 ರು ॥।
27 ಶುಭಮ
28 ಸ್ತು

280

ಅದೇ ದೇವಸ್ಥಾನದ ದಕ್ಷಿಣಕಡೆ ಹೊಂಡದ ಮಾರ್ಗದ ಬಳಿ ನೆಟ್ಟ ವೀರಗಲ್ಲು.

ಪ್ರಮಾಣ 4′ 6″ × 2′.

1 ಸ್ವಸ್ತಿ . . . . ಪಲುಗಸಂವತ್ಸರದಆಷಾಢ . . . .
2 ಶ್ರೀಕೋಟೀಶ್ವರಪುರದತುಱುವಂಹಿಡ . . . ಮೆಯುಕೊಂಡಲಿ . .
3 ಪರಹಿತಾಚರಿತನಪಾರಂಪರಮಪ್ರತಾಪ . .
4 . . ಲಿಯುಭಕ್ತಂಸರಣಸುಪುತ್ರಂ . . . ದುರಿತಾ . . .
5 ಕೋಟನಾಥನಗ್ಗದಬ್ರಿತ್ಯಂ ॥ . .
6 ತಾಗಣ್ಯಪುಣ್ಯಚರಿತನಪಾರಂಶ್ರೀಮ . . . .
. . . .

281

ಅದೇ ಗ್ರಾಮದ ಆಂಜನೇಯ ದೇವಸ್ಥಾನದ ಬಳಿ ೧ನೇ ಮಾಸ್ತಿಕಲ್ಲು.

ಪ್ರಮಾಣ 3′ 3″ × 1′.

1 ಅಕ್ಷಯಸಂ .
2 ತ್ಸರದವಯಿ .
3 ಖಸುದ್ಧ ೧೨
4 ಗುದಲುವ . .
5 ಯಬೊಂವಂ
6 ಮಾಸ್ತಿಬುರ . .
7 . ಸ್ತರಾದ . .

282

೨ನೇ ಮಾಸ್ತಿಕಲ್ಲು.

ಪ್ರಮಾಣ 2′ 6″ × 1′ 9″.

1 ಕೋಡಿವರದತಂ . .
2 ನಾಗಬೋವನವಗ .
3 . ವಿರೋಧಿಸಂವತ್ಸ
4 ರದಕಾರ್ತ್ತಿಕಬ
5 ಹುಳವಿಷುವಂಗ
6 ಳವಾರದಿನಸ್ವರ್ಗ
7 ಸ್ಥನಾದನು ॥

283

ಅದೇ ಹೋಬಳಿ ಕಲ್ಲೂರು ರಾಮೇಶ್ವರ ದೇವಸ್ಥಾನದ ಮುಂದೆ ನಟ್ಟ ಕಲ್ಲು.

ಪೂರ್ವದ ಹಳಗನ್ನಡಕ್ಷರ.—ಪ್ರಮಾಣ 4′ 3″ × 2′ 2″.

1 ಸ್ವಸ್ತಿ ಸಕನೃಪಕಾಲತೀತಸಂವತ್ಸರಸಥಂಗಳ್ ೯೩೪ ರುದಿ
2 ರೋದಿಗಾಲಿಸಂವತ್ಸರವನ್ದು ಸ್ವಸ್ತಿ ಸಮಸ್ತಪ್ರಸಸ್ತಿಸ
3 ಹಿಥಶ್ರೀಮತ್ಜಗದೇಕಮಲ್ಲಜಯಸಿಂಗದೇವಪ್ರಿಥುವೀವಲ್ಲ
4 ಪಪ್ರಿಥುವೀರಾಜ್ಯಂಗೆಯ್ಯೆಕುಂನ್ದಯ್ಯಬನವಾಸೆಪನ್ನಿ
5 ಚ್ಛಾರ್ಸಿರಮನಾಳುತ್ತಿರೆಮಾ . . . ಸಾನ್ತಯ್ಯ . .
6 . ನದಿಂಗೆ . . ಗೆಯುಥ . ಕಬಿಲಯ . . . . ಳಿರುವುದುಂ
7 ಗೆಯಿ । ಸ್ವಸ್ತಿಯಮನೇಮಗುಣಗಣಿತ . . . ಥೆಸ
8 . . . . ದರಣಂದಾನೂರಾಳೆಸ್ವಸ್ತಿಶ್ರೀ . . . . .
9 . . . . . ಗೆಲಿಂಗದಪ್ರತಿಷ್ಠೆಗೆಯ್ದು . . . .
10 . . . . ನಂಕೊಟು . . . .
. . . .
13 . . . . ತ್ರಮಿತ್ರಕಳತ್ರಂಕಮರು . . . .
14 . . . . ಯಳಬಂ . . ಮನಿಟ್ಟ . ರಾಸಿ . . . .
15 . . . ಮಕ್ಕ । ಈದವ್ಮಾರ್ಗ . . . .
16 . . . . ಮಿತ್ರಕಳತ್ರ . . . .
17 . . . ನ್ದವಣ . . . .

284

ಅದೇ ದೇವಸ್ಥಾನದಬಳಿ ನೆಟ್ಟಿರುವ ೧ ನೇ ವೀರಕಲ್ಲು.

ಪ್ರಮಾಣ 3′ × 1′ 10″.

1 ಜಿತೇನಲಭ್ಯತೇಲಕ್ಷ್ಮೀರ್ಮೃತೇನಾಪಿಸುರಾಂಗನಾಕ್ಷಣವಿಧ್ವಂಸಿನಿಕಾಯೇ
2 ಕಾಚಿಂತಾಮರಣೇರಣೇ ॥ ಸ್ವಸ್ತಿಶ್ರೀಮತುಯಾದವನಾರಾಯಣ
3 ಭುಜಬಳಪ್ರತಾಪಚಕ್ರವರ್ತ್ತಿಶ್ರೀರಾಮಚಂದ್ರರಾಯವಿಜ
4 ಯರಾಜ್ಯೋದಯದ ೧೪ ನೆಯಸ್ವಭಾನುಸಂವತ್ಸರದಜೇಷ್ಟಸುದ್ಧ
5 ೧ ಸುಕ್ರವಾರದಂದು । ಚಂನಬೋಮದೇವನು । ಕುಪ್ಪಟೂರಗ್ರ
6 ಹಾರವನಿಱಿದುಸೆಱೆದನವಕೊಂಡುಹೋಹಲ್ಲಿ ಶ್ರೀಮಂನಾಳ್ಪ್ರ
7 ಭುಘಟಸಪ್ಪ(?)ಹಡವಳಬೀರಯ್ಯನುಹುಯ್ಯಲಂಹಾದು
8 ಕಾದಿದಲ್ಲಿಆಹಡವನರಾವುತಸಿವದೇವನುಕಾದಿತ
9 . . . . ಪ್ತನಾದನು

285

೨ನೇ ವೀರಕಲ್ಲು.

ಪ್ರಮಾಣ 3′ × 1′ 10″.

1 . . ಸ್ತುಂಗಸಿರಸ್ತುಂಗಚಂದ್ರಚಾಮರಚಾರವೇತ್ರಯಿಲೋಕ್ಯನಗರಾ
2 . . . ಮುಲಸ್ತಂಭಾಯಸಂಭವೇ ॥ ಸ್ವಸ್ತಿಶ್ರೀಮತುಯಾದವನಾರಾ
3 . . ಭುಜಬಳಪ್ರತಾಪಚಕ್ರವರ್ತ್ತಿಮಹದೇವರಾಯ ವರುಸದ ೪ ನೆಯ
4 . . . ಸಂವತ್ಸರದವಳುಸಾಬಹುಳ ೫ ಸೋಮವಾರದಂದುಸ್ವಸ್ತಿಸ
5 . . . ಗತವಂಚಕಮಹಾಸಬ್ದಮಹಾಮಂಡಳೇಸ್ವರಂಬನವಾಸಪು
6 . . ಧೀಸ್ವರಂಜಯಂತೀಮಧುಕೇಸ್ವರದೇವರಲ . . . . . .
7 . . . ಕಲಿಗಳಂಕುಸವೀರಕಾಮದೇವರಸರ . . . .
8 . . . ನಮೇಲಿಎತ್ತಿನಡುವಲ್ಲಿಸೊರಬದಕಾಳಗ . . . .
9 . . . ಸರ್ಪಹಡವಳಕಾಮಯನಮೊಯ್ದು . . . . . .
10 . . . . ಬಿಲ್ಲಯ್ಯಕುದುರೆಯಕಡಿ . . . .
11 . . . . ಂದುದೇವದುಂದುಭಿಗಳ . . . .

286

ಅದೇ ದೇವಸ್ಥಾನದ ಬಳಿ ನೆಟ್ಟ ಕಲ್ಲು.

ಪ್ರಮಾಣ 4′ 6″ × 2′ 2″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ । ತ್ರೈಳೋಕ್ಯನಗರಾರಂ . .
2 ಮೂಳಸ್ತಂಭಾಯಸಂಭವೇ ॥ ಸಾಮಾನ್ಯೋಯಂಧರ್ಮ್ಮಸೇತುಂನ್ರಿ .
3 ಪಾಣಾಂಕಾಲೇಕಾಲೇಪಾಲನೀಯೋಭವದ್ಭಿಃ । ಸರ್ವ್ವಾನೇತಾಂಭಾವಿನಃಪಾರ್ಥಿವೇಂ
4 ದ್ರಾಭೂಯೋಭೂಯೋಯಾಚತೇರಾಮಚಂದ್ರ ॥ ಸ್ವಸ್ತಿಶ್ರೀಮತುಕಳ
5 ಚುರ್ಯ್ಯಚಕ್ರವರ್ತ್ತಿರಾಯಮುರಾರಿಸೋಮದೇವವಿಜಯರಾಜ್ಯಮುತ್ತರೋತ್ತರಾಭಿವೃ
6 ದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂಸಲುತ್ತಮಿರೆ ॥ ವ್ರ ॥ ಸಾಗರಪ
7 ರಿವೇಷ್ಟಿತಸಮಸ್ತಧರಾರಮಣೀಘನಸ್ತನಾಭೋಗವಿದಂಬಿನಂವಿದಿತವಿಸ್ತೃತಸಾರತ
8 ರಾಗ್ರಹಾರದಿಂನಾಗರಖಂಡಪತ್ರಪರಿವೇಷ್ಟನದಿಂಜವನೇತ್ರವೃತ್ತಿಕಾರಾಗ

9 ಮನಿತ್ತುಮೂಱುರೆಮ . ಸುಖುಂಡಬನವಾಸೆಮಂಡಳಂ ॥ ಅದನಾಳ್ವನಖಿಳ
10 ರಿಪುನೃಪಮದಮರ್ದ್ದನನರ್ತ್ಥಿಗರ್ತ್ಥಮಂಬಿಡದೀವಂಪದನತರರಕ್ಷದಕ್ಷಂವಿದಿ
11 ತಯಸಂಸೋಯಿದೇವಭೂತಳನಾಥಂ ॥ ಅನ್ನೃಪತಿದುಷ್ಟನಿ
12 ಗ್ರಹಸಿಷ್ಟಪ್ರತಿಪಾಳನಂಗೆಯ್ದುಸುಖದಿಂರಾಜ್ಯಂಗೆಯ್ಯುತ್ತಿರೆಯಿರೆ ॥ ಆನಾ
13 ಡೊಳ್ಗರಂಜಿಪುದಿಂತೀನಾಡೆನೆಸಕಳ . ಪ್ರವಿದಕುಶಲರೀನೇಂರೊಧಿವಡೆದಿರ್ದ್ದ
14 ದೀನಲೆಡೆನಾಡಪಟ್ಟಾಂನಾಡ . . ಕರಂಜೆಸುಗುಂ ॥ ಆನಾಡೊಳ್ಗರಂಜಿಪ
15 ವುದುನಡೆನೋಡಲಾದಿವಿಜರಾಜಗಮರಾವತೀಸಹಂರಂಯ್ಯವಾಗಿತೋರ್ಕುಂಪೊಡ
16 ವಿಗೆತಾಂತಿಳಿಕದಂತೆತರವುಸೆನಿರುತಂ ॥ ಅಪ . . . . ಯೆನಿಪಚಾಪದ .
17 ಯ . ಯಗೆಕುಸುಮಚಾಪನೆಗಳ್ದಂ . . ॥ . . . ನಿಪಗುಣದಿ . . ಪತಿಭಕು .
18 ಕಾಳಗವುಡಮಹಾತ್ಮ ॥ ಅವಿಭುವಿನಸತಿಲಕ್ಷ್ಮೀದೇವಿಗೆಪಾರ್ವ್ವತಿಗೆರತಿಗೆರಂಭೆಗೆಮಿಗೆಲಂ
19 ದಾವಗಬಂಣಿಸುಗುಂಧರೆಭೂವಿದಿತೆಯುಕಂಚಿಗವುಡಿಯಂಪದೆಪಿಂದಂ ॥ ವ ॥ ಅನ್ತಾಗಾ
20 ವಣಿಗಕುಳಪ್ರದೀಪಕಂಶ್ರೀಮಂನಾಳ್ಪ್ರಭುಕಾಳಗಾವುಂಡಂಗಂಪರವಾರಚಿನ್ತಾಮಣಿಯೆನಿ
21 ಸಿದಕಂಚಿಯಮ್ಪೆಗಾಱುಂಡಿಗಂಸುಪುತ್ರಕುಳದೀಪಕನೆನಿಸಿ ॥ ಆದಂಪತಿಗೆಳ್ಗಗ್ರ
22 ಜನಾದಂಗುಣನಿಳೆಯಂಬಂಮಗಾವುಂಡಂಗನುಜಂಮೇದಿನಿಬಣ್ಣಿಸೆತಾರಕನಾದಂಸುಜನೈಕ
23 ಬನ್ಧುವಿನೆಯನಿಧಾನಂ ॥ ಆತನ್ನ್ರುಪಾನುಜಂತಾಂಭೂತಳದೊಳ್ಸರ್ವ್ವಶಾಸ್ತ್ರಕುಳ
24 ನೆನಲುವಿಖ್ಯಾತಯಸಂಸಲೆನೆಗಳ್ದಂಮಾತೇಂಗಳಭೀಮಗವುಣ್ಡನಾಹವಕಾಂಡಂ ॥ ವ ॥ ಅನ್ತಾ
25 ಮೂವರುಂಚಾಗದಬಲದಸಂನಿಯೊಳ್ವೆಸೆದಿಂಪ್ರಭುಯಂಪಾಳಿಸಿತರೆಯೂರುಪನೆ
26 ರಡಕ್ಕಂನಾಳ್ಪ್ರಭುಗಳೆನಿಸಿಸುಖದಿನಿರೆ ॥ ಶಿವಪಾದಸೇಖರಂನಪೆಯುವತೀಮನೋರ
27 ಮಣನಂನಿಯೋಗದಿನೇಸಸುತಂಭುವನಜನಪ್ರಸ್ತುತ್ಯಂಕವಿಜನಸುರಭೂಜಂ . . ಪತಾ
28 ರಕಗವುಂಡಂ ॥ ದಿಸೆದೆಸೆವಿಬುಧಜನ . . ಜಸದೆಸವಯುವತೀನಿವಹ . . . . ವ
29 ದೆಡೆಯೊಳ್ಗುಸಿದಿರೆವಿರೋಧಿವರ್ಗ್ಗಂಪಸಗಿಸಿದಕೀರ್ತ್ತಿಲತೆಯನಾಚಂದ್ರಾರ್ಕ್ಕಂ ॥ ಅ
30 ನ್ತುನೆಗಳ್ದತಾರಕಗಾವುಂಡನಗ್ರಮಹಿಸಿಯಗುಣಪ್ರಭಾವಎಂತೆನೆ ॥ ಸುತರೀಭಾಗ್ಯದೊ
31 ಳವನಿಜೆಸತತಂಪಾತಿವ್ರತದ . ರುಂಧತಿಯೆನಿಪಂಪತಿಭಕ್ತಿಕಾಮಿಎಕ್ಕಂಕ್ಷಿ
32 ತಿಯೊಳುಪಾರ್ವ್ವತಿಯಪೆಂಪೆಯುಂಸಲೆತಳೆದಳು ॥ ತಾರಕಗವುಡಂಗೊಪ್ಪುವನೀರೆ
33 ಜದಳನಯನೆಕಾಮಿಯಕ್ಕಂಗೊಲವಿಂಧಾರಿಣಿಬಣ್ಣಿಸಲೊಗೆದಂಚಾರುಕಳಾಧಾರನೆರೆ
34 ಕಾಳಗವುಂಡಂ ॥ ಉದಯಾದ್ರಿಯಿಂದೆದಿನಕರನುದಧಿಯಿನಮೃತಾಂಶುವುದಿಯಿಪಂ
35 ತುದಿಯಿಸಿದಂಮದವದರಿಮರ್ದ್ದನಂಭೂವಿದಿತಯಶಂಕಾಳಗವುಡಭವಪದಭಕ್ತಂ ॥
36 ಪರಹಿತಖಚರೇಶ್ವರನೊಳೆಯೆರವಬುಧಾವಳಿಗೆದಿನಪಸುತನೊಳ್ಮಾರ್ಕ್ಕಂದರಿ
37 ಸಮಿತಿಗೆಮರುತಜನುಬ್ಬೊರೆಯನಿಪಂಕಾಳಗವುಡನೀವಸುಮತಿಯೊಳ್ ॥
38 ಆವಿಭುವಿನಣುಗದಂಮಂಭೂವಳಯದೊಳದಟನಾರ್ಪ್ಪನೇಳ್ತರದಿಂದಂಪಾವ
39 ನಸುಗಂದತೀರ್ತ್ಥಂಭೀಮಣನಂಪೋಲ್ವಪುಂಣ್ಯವಾಸಿಗಳೊಳರೇ ॥ ವಿನಯನಿಧಿಕಾ
40 ಳಗಾಂಡನಜನನುತಭೀಮಣನತಂಮ್ಮಂಕಲಗವುಡಂಮನುಚರಿತಸುಜನಯುತ
41 ನೆನಲನವರತಂನಚ್ಚಿಮೆಚ್ಚಿಂಪೊಗಳದರೊಳರೇ ॥ ವ ॥ ಅನ್ತುಚತುರಕಳಾನಿಧಿಗಳೆನಿ
42 ಸಿದಮಹಾನುಭಾವನ್ತನಗೆಮೂವರ್ನ್ನೃಪಪುತ್ರರೆನಿಸೆಆಹಾರಾಭಯಭೈಸ
43 ಜ್ಯಶಾಸ್ತ್ರದಾನವಿನೋದಂದೇವಪಾದಪಂಕಜಭ್ರಮರಂಶ್ರೀಮಂನಾಳ್ಪ್ರಭುತಾ
44 ರಕಗವುಂಡಪುತ್ರಮಿತ್ರಕಳತ್ರಸಮಸ್ತಿತಂಸುಖದಿನಿರುತ್ತಂ ॥ ಎತ್ತಿಸಿದಂ
45 ಶಿವಗೃಹಮಂಸುತ್ತಿಸಿದಂಕೀರ್ತ್ತಿಲತಿಕೆಯಂದಶದಿಸೆಯಂಮತ್ತನಿಸದೆಪ್ರಜೆಯಂಮೆಯಿವ

46 ತ್ತಿಸಿದಂಸತ್ಯದಿಂದೆತಾರಕಗೌಡಂ ॥ ನಾಕದಿನಿಳಿತಂದುದೊಫಣಿಲೋಕದಿನೊಗೆತಂದುಹೊವಸುಂ
47 ಧರೆಗಾಗೀಲೋಕಂಬಣ್ಣಿಸೆತಾರಕಶ್ರೀಕಣ್ಣು . . ಸಮನೆಸೆವಿನಂಮಾಡಿಸಿದಂ ॥ ಸ್ವಸ್ತಿಶ್ರೀ
48 ಶಕವರಿಷ ೧೦೯೦ನೆಯ ಸರ್ವ್ವಧಾರಿಸಂವತ್ಸರದವೈಶಾಖಸುದ್ಧ ೧೪
49 ಆವ್ಯತೀಪಾತಸಂಕ್ರಮಣಪುಣ್ಯದಿನದೊಳು ಶ್ರೀಮಂನಾಳ್ಪ್ರಭು
50 ತಾರಕಗೌವುಡಂಕಾಳಗೌವುಡಂಗಳುತಾವುಮಾಡಿಸಿದಶ್ರೀಮೂ
51 ಲಸ್ಥಾನಶ್ರೀಕಲಿದೇವರನಿತ್ಯನೈವೇದ್ಯಸಂಜೆಸೊಡರುಚೈತ್ರಪವಿತ್ರಕ್ಕಂ
52 ತಪೋಧನರಾಹಾರದಾನಕ್ಕಂಸ್ವಸ್ಯಯಮನಿಯಮಸ್ವಾ
53 ಧ್ಯಾಯಧ್ಯಾನಧಾರಣಮೌನಾನುಷ್ಠಾನಜಪಸಮಾಧಿಶೀಳಸಂಪಂನರ
54 ಪ್ಪಕಲಿಮೇಶ್ವರಪಂಡಿತರಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಸರ್ವ್ವನಮ
55 ಸ್ಯಸರ್ಬ್ಬಾಭಾಧಪರಿಹಾರವಾಗಿನಾಗರಬಾವಿಯಕೀಳೆರಿಯಕೆಳಗೆ
56 ಮರಗುಂಡಿಯಘಳೆಯಲುಬಿಟ್ಟಗದ್ದೆಯಮತ್ತರೊಂದುತೋಂಟದಮರಂ ೫೦೦
57 ಖಾಯಿಾಧರ್ಮ್ಮವನೀವಂಶದಲಾವಂಪ್ರಭುತನಂಗೆಯ್ವಂನುಯಧಿಕಾರಂಗೆಯ್ವಅನ್ಯ
58 ಸದ್ಧರ್ಮ್ಮದಲುಪ್ರತಿಪಾಳಿಸಿದವರುಗಂಗೆಗಯೆವಾರಣಾಸಿಕುರುಕ್ಷೇ
59 ತ್ರಮೆಂಬಪುಣ್ಯಕ್ಷೇತ್ರಂಗಳಲುಕೋಟಿಕವಿಲೆಯಕೋಟಿಬ್ರಾಹ್ಮಣಗ್ಗೆಕೊ
60 ಟ್ಟಫಲಯಿದನಾವನಾವನಾನುಂವಳಿದವಂಕೋಟಿಕವಿಲೆಯ್ಮಂಕೋಟಿಮನುಶ್ಯ
61 ವೇದಪಾರಗರಪ್ಪಬ್ರಾಹ್ಮಣರುಮನಾಪುಂಣ್ಯಕ್ಷೇತ್ರಂಗಳಲುಕೊಂದಪಂಚಮ
62 ಹಾಪಾತಕನುಪೋದಲೋಕಕ್ಕೆಪೋಪ ॥ ವೃ ॥ ಸ್ವದತ್ತಂಪರದತ್ತಂವಾ
63 ಯೋಹರೇತಿವಸುಂಧರಾಶಷ್ಟಿರ್ವರ್ಷಸಹಶ್ರಾಣಿವಿಷ್ಠಾಯಾಂಜಾಯತೇಕ್ರಿಮಿ ॥

287

ಅದೇ ದೇವಸ್ಥಾನದ ಹಿಂಭಾಗದ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿರುವ ೧ನೇ ವೀರಕಲ್ಲು.

ಪ್ರಮಾಣ 7′ × 1′ 10″.

1 ಸ್ವಸ್ತಿಶ್ರೀಮತುಕಳತೂರ್ಯ್ಯಭುಜಬಳಚಕ್ರವರ್ತ್ತಿ
2 ತ್ರಿಭುವನಮಲ್ಲಬಿಜ್ಜಣದೇವವರ್ಷದ ೪ ನೆಯಸುಭಾನು
3 ಸಂವತ್ಸರದಚೈತ್ರಬಹುಳ ೫ ಆದಿವಾರದಂದುತಲೆವೂ
4 ರಹಾರಡಿಯಸೋಮವರ್ಮ್ಮಹುಲಿಯಜಂಗುಳಿಯ .
5 . . . . ಗುತ್ತಿಯಕೋಟೆಗೆಬಿಜ್ಜಣದೇವನುಪಲಟ
6 . . . ಡಳಿಕರಂಪೆಸಸೆಥಾಳಯಿಟ್ಟುಮುತ್ತಿಲಗ್ಗಮಾ
7 . . . . . . ದಳಿಕಲಮ್ಮಣಂಬೆಸಸೆಪಲರೊಳು . .
8 . . . . . . ಸಂಕಣಂಸುರಲೋಕಪ್ರಾಪ್ತನಾದ ॥ ಶ್ರೀ
9 ಕಲಿಯುಗಂಪ್ರವರ್ತ್ತಿಸೆ ೪೩೬೫ ನೆಯಸುಭಾನುಸಂವತ್ಸರ
10 ಚೈತ್ರಬಹುಳ ೫ ಆದಿವಾರದಂದು ॥ ಮಾರ್ವ್ವಲದವರ್ಗ್ಗಳುಪೊಗಳ
11 ಲುತಾಗಿವನಿಸ್ಸಂಕಸಂಕಕುದುರೆದಳಮುಪ್ಪೊಗಡಿಸಿದರ್ಬ್ಬಕೆತಪಿದನೀಜಗ
12 ದೊಳುವೀರನನಿಸಿಸಂಕಂಬಿದ್ದ ॥ ಜೋಮಗಾವುಂಡಂಬರೆದಂ ॥ ಬನವಾಸೆಯ
13 ಕೋಟೆಯ । ಮಧುಕೇಶ್ವರದೇವರಪಾದಾರಧಕ ॥ ಓಂಮ್ಮೋಜಕಲ್ಲಬಸಗೆ
14 ಯ್ದ ಶ್ರೀ ಶ್ರೀ ಶ್ರೀ

288

೨ನೇ ವೀರಕಲ್ಲು.

ಪ್ರಮಾಣ 7′ × 1′ 10″.

1 . . ಸ್ತುಂಗಶಿರಸ್ತುಂಗಚಂದ್ರಚಾಮರಚಾರವೇತ್ರೈ ಲೋಕ್ಯನಗರಾರಂಭ
2 ...ಯ । ಸ್ವಸ್ತಿಶ್ರೀಮತುಕಾಹ . . . .
3 ...ನ್ರಿಪಕಾಲದ ೧ . . . .
4 ...ಆದಿವಾರದಂದುಸ್ವಸ್ತಿಶ್ರೀಮ . . . .
5 ...ಸುರ... . . . .
6 . . ಕಾಲಿ . . . . ತಲೆಯೂ. . . . .
. . . .
11 ...ದೊಳಲುಕ . . . ರಾಗಿ . . . . . .
12 ದುರಾಮಸುಗತಿ...ದನು ॥ ಬಳ್ಳಿಗಾವೆಯ
13 ರಾಮೋಜಬರಮೋಜಂಗಳಿಬೆಸಗೆಯ್ದರು ॥

289

೩ನೇ ವೀರಕಲ್ಲು.

ಪ್ರಮಾಣ 6′ × 2′ 5″.

1 ನಮಸ್ತುಂಗಸಿರಸ್ತುಂಗಚತ್ರಚಾಮರಚಾರವೇಂದ್ರನರಾರಂಭಮೂಲ
2 ಸ್ತಂಬ । ಸ್ವಸ್ತಿಶ್ರೀಮಚಳುಕ್ಯಬೂಲೋಕವರ್ಷದಕಾಳಯುಕ್ತಿಸಂವತ್ಸ .
3 ಕಾರ್ತ್ತಿಕಸುಧಪಂಚಮಿಬೃಹಸ್ಪತಿವಾರದಂದುಬನವಾಸೆಯಕೋಟೆಯ . .
4 ತೆಪ್ಪವಯಿಱಿದುತುಱುವಂಕೊಣ್ಡುಹೋಹಲ್ಲಿತಡೆಯೂರಕಗ್ಗಜ್ಜನಮಗದೊಡ್ಡಬೇಳೆಯ
5 ಹಂದುಹಸಟೆಯಬಯಲಲುತಾಗಿತಳ್ತಿಱಿದುಪಲರಂಕೊಂದು
6 ತುಱುವಂಪಿಂತಿಕ್ಕಿಸುರಲೋಕಕೆಸಂದ ॥ ಜಿ ಕ್ಷ್ಮೇಮೂರ್ವ್ವಲವಮತೀಣ್ಣರ್ಮ
7 ತಳವಾರಪುಣ್ಣನೆತ್ತರಲುನೆಲನಾಲಿಯಿಱಿಯಲುಬೇಳಣ್ಣನೆಬಲ್ಲ
8 ಭುವನದಲು ।।। ಜೋಮಗವುಂಡಬರದ ॥ ತಳವೆಯದಾಸೋಜಬೆಸಗೆಯ್ದ ॥

290

೪ನೇ ವೀರಕಲ್ಲು.

ಪ್ರಮಾಣ 2′ 6″ × 2′.

1 ಸ್ವಸ್ತಿಶ್ರೀಮತುಚಾಳುಕ್ಯಚಕ್ರವರ್ತ್ತಿತ್ರೈಲೋಕ್ಯಮಲ್ಲವರ್ಷ ದ ೯ ನೆಯ
2 . . ರಸಂವತ್ಸರದಭಾದ್ರಪದಸುದ್ಧ ೫ ಬ್ರಹಸ್ಪತಿವಾರದಂದುಪ ದ್ಮಣ
3 . . ಯುಕತುಱುವಂಕೊಳ್ವಲ್ಲಿಹೆರರಿಯಕೇತನಳಿಯಮಾಳಹ
4 ...ಕುಧುರೆಯೊಳುತಾಗಿತಳ್ತಿರಿದುಸುರ
5 . . . . . . ಕುದರೆಯಕುರುಪುಟಗಾತಡಿಲದಿದ್ದು ರ್ದುನೆಲವಳನೆ ಯ
6 . . . . ಕೆಯ್ದುಮಾಳನೊರ್ವ್ವನಕುದುರೆಯಕೆಣದಿ ಱಿದುಸತ್ತುಸುಗತಿಗೆಸಂದ ॥

291

೫ನೇ ವೀರಕಲ್ಲು.

ಪ್ರಮಾಣ 4′ 10″ × 2′.

1 . . . . ೨೯ ನೆಯನಳಸಂವತ್ಸರದಮಾರ್ಗ್ಗಸಿರಬ ೧೪ ಗುಶ್ರೀಮನ್ಮ
2 . . . . ಗೋವಿಂದಸಿತ್ತರರಗಂಡಪಾತಾಳಚಕ್ರವರ್ತ್ತಿಭೋಗಾವತೀಪುರವರ

3 ....ಸರ್ವ್ವಆಳವಮಾಳಿಯಿವನೆಯಿದುಬ . ನೂವ್ಮ್ರಡಿರಾವುತ್ತರ
4 ....ರಾಕೋವಿದಶರಣಾಗತವಜ್ರಪಂಜರ . . ಯಯುಹ
5 .... .ತುಯಾವಂಕೊಂಡುವರ
6 ....ವಳಿಂಸಲಿಕನು . ಸನೆ
7 ....ಕವಂಂಸೊರಿಗೊಂಡನು

292

೬ನೇ ವೀರಕಲ್ಲು.

ಪ್ರಮಾಣ 7′ 2″ × 10″.

1 ಸ್ವಸ್ತಿಶ್ರೀಮತುಯಾದವನಾರಾಯಣಭುಜಬಳ
2 ...ಪ್ರತಾಪಚಕ್ರವರ್ತ್ತಿಶ್ರೀರಾಮದೇವರ
3 ವಿಜಯರಾಜ್ಯೋದಯದ ೫ . ಯನಳಸಂವತ್ಸ
4 ....ಸುದ್ಧ ೧೦ ಸೋಮವಾರದಿ
5 ...ಯಬಿ.........ರಕೆಯ
6 .....ಆಳವಳನಿಜಿಸೆ........
7 ....ತುಪೆ....ಡೆಸೊ..
....

293

೭ನೇ ವೀರಕಲ್ಲು.

ಪ್ರಮಾಣ 4′ 6″ × 1′ 8″.

1 ಸ್ವಸ್ತಿಶ್ರೀಮತುಸಿಂಹಣದೇವವರುಷದ ೧೬ ನೆಯ
2 ಕಾರಣಸಂವತ್ಸರದಭಾದ್ರಪದಬಹುಳ ೫ ಸೋ
3 ಮವಾರದಲುತಲಿವೂರಕೋಟೆಯಕಾಳಯ್ಯನು
4 ಶ್ರೀಕಲಿದೇವರಶ್ರೀಪದೆವಕೂಡಿದನು ॥

294

ಅದೇ ಗ್ರಾಮದ ನಾಗರಹೊಂಡದ ಮುಂದೆ ನಟ್ಟ ೧ನೇ ವೀರಕಲ್ಲು.

ಪ್ರಮಾಣ 3′ × 1′.

1 ......ಗೋವಿಂದಸಿತಗರಗಂ....
....
7 . ...ಸುರಲೋಕ.......
8 ...ದಲೆಯಂ..ಸೊಗಸುಳ್ತ.......
9 ....ಹಾಳ್ಕಡೆಯ. .....
....
14 ....ದದುಂ . ತ್ಸಾಹಂ ॥ ....
15 ....ಗೊಂಡ ....
16 ....ತಂತುಳ್ದರಲುಬಂದ . ತಾ ......
17 ವಾಡಿಸಿ..ತುದಿ...ಳಯದಿ ....
18 ..ತ ....ಕಿಡಿಸೊಸುಭಂಪಡದ..
19 ..ಡಿಯುತಪಾರಿವೂವ
20 ..ಗೊಂ . ಣ..ದದೊಂದುಶೂಕರಂ ॥ ..
21 ತುಹುಲಿಯ . ಂತಾಗಿಕೊಂದುನಾ....
22 ಇರದುತಾಸುರಲೋಕಕೆಸಂದರು ॥ ಯಿ..
23 ಯಿದೆಲ್ಲವಂಮಾಡಿದಾಕವಿರಾಜಸಂಕಂ
24 ಣ........

295*

೪ನೇ ವೀರಕಲ್ಲು.

ಪ್ರಮಾಣ 4′ × 1′ 6″.

1 ..ಸ್ತುಂಗಸಿರತುಂಬಿಚಂದ್ರಚಾಮರಚಾರವೇತ್ರೈಳೋಕ್ಯ .
2 ..ರಂಭಮೂಲಸ್ತಂಭಾಯಶಂಭವೇ ॥ ಸ್ವಸ್ತಿಶ್ರೀಮತು

* ೬—೩ನೇ ಕಲ್ಲುಗಳು ಸವೆದು ಹೋಗಿವೆ.

3 ಯಾದವನಾರಾಯಣಭುಜಬಳಪ್ರತಾಪಚಕ್ರವರ್ತ್ತಿಶ್ರೀವೀರರಾ
4 . . ದೇವವರ್ಷದ ೬ ನೆಯಪರಿಧಾವಿಸಂವತ್ಸರಜೇಷ್ಟ ಬ ೧೧ ಬು . .
5 ಸ್ವಸ್ತಿಶ್ರೀಮತುಸಿಂಧಗೋವಿಂದಸಿತಗರಗಂಡಪಾತಾಳಚಕ್ರ
6 ವರ್ತ್ತಿಭುಜಂಗೇಂದ್ರವಂಶೋದ್ಭವಂರಾಯಪದಪಾಳಸಾವಸಿ
7 ಗರದಂಡಶ್ರೀಮಂನಾಳ್ಪ್ರಭುಘಟಸರ್ಪ್ಪಹಡವಳಕಾವ
8 ಯ್ಯಸಾತೆಯನಹಳಗೆಧಾಳಿಯಹರಿದುಸುಟ್ಟುಸೂಱೆ
9 ಗೊಂಡುತೆಗದುಬಹಲ್ಲಿಆತಂಕಪಡುಲಪೊಂಬಯ್ಯ
10 ಆಗಿತಾಗಿದಲ್ಲಿಯಾಕಾಮಯ್ಯಹಡವಳನಬೂವಹ
11 ಜಿಸೆಯಪೊಂವೆಯಹಡವಳನುಪಲವಾಳುಕುದು
12 ರೆಯಂತಳ್ತ್ತಿಱಿದುಮೆಱೆದುಸುರಲೋಕಕ್ಕೆಸಂದ ॥ ಕಜೆ
13 ಸೊಪ್ಪ . . . .
. . . .

296

೫ನೇ ವೀರಕಲ್ಲು.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರಯಿಳೋ
2 ಕ್ಯನಗರಾರಂಭಮೂಲ . . . .
. . . .
7 . ಗಂ . ರಾಯಪದವಾಳಶ್ರೀಮಂನಾಳ್ಪ್ರಭುಘಟಸರ್ಪ್ಪವೀರಹ .
8 . . . . . . ದುಸಾದಂದುಗೌಡನುಶ್ರೀಮಂನುಮಹಾಪ್ರಧಾ .
9 . . . . ರಿಸೆಟ್ಟಿಯಸಾತಿಸೆಟ್ಟಿರಂನ್ನು . . . .
10 . . . . . . ಸೂಱೆಗೊಂಡುಹೋಹಲ್ಲಿಅಡ್ಡಹ
11 ತಾಗಿಕಾದುವಲ್ಲಿಕೇತಿಗೆಉಡನಮಗಗೊಂಟೆಯಕೇತಯನಂ ಕೊ .
12 . ಪಂದೊಳ್ಕು ದುರಿಯಕಣತತಳ್ತ್ತಿಱಿದುಮೆಱೆದುಸುರಲೋಕ ಪ್ರಾಪ್ತನಾದ
13 ಜಿತೇನಲಭ್ಯತೇಲಕ್ಷ್ಮೀರ್ಮ್ರಿತೇನಾಪಿಸುರಾಂಗನಾಕ್ಷಣ
14 ವಿಧ್ವಂಸನೀಕಾಯೇ । ಕಾಚಿಂತ್ಯಾಮರಣೇರಣೇ

297

೬ನೇ ವೀರಕಲ್ಲು.

ಪ್ರಮಾಣ 3′ 6″ × 1′ 3″.

1 ಸ್ವಸ್ತಿಶ್ರೀಮತುಕದಂಬಚಕ್ರವರ್ತ್ತಿಕಾಳದೇವವರುಷದ ೧೧ನೆ
2 ಯನಳಸಂವತ್ಸರದವಯಿಶಾಖ ಬ ೪ ಸೋ . . . .
3 ವನುಹಾನುಂಗಲ . . . .
. . . .
5 ಡಿಕೊಂಡು . . . .
6 ಜನುಹಲಂಬರೊಳ್ತಾಗಿತಳಾತಿಱಿದುಸುರ
7 ಲೋಕಪ್ರಾಪ್ತನಾದ ॥ ಜಿ । ಸೇ ಮಾರ್ವ್ವಲಮತಿತಂಣ .
8 ತ್ತಳ . . ಪುಂಣನೆತ್ತರಲುನೆಲನಾ . ಯಿಱಿಯಲು :
9 . . . .

298

೭ನೇ ವೀರಕಲ್ಲು

ಪ್ರಮಾಣ 3′ 4″ × 1′ 4″.

1 . . . . ಯಾದವನಾರಾಯಣಂಭುಜಬಳಪ್ರಉಥಪ್ರ
2 . . . . . . ಶ್ರೀರಾಮದೇವರಾಯಧಿರಾಯರಾಜ್ಯೋದಯ
3 . . . . . ತ್ಸರದಆಶಾಢ ಬ ೧೧ ಸೋ । ಸ್ವಸ್ತಿಶ್ರೀಮತುಭುಜ . . .
4 . . . . . . ಗಂಡಪಾತಾಳಚಕ್ರವರ್ತ್ತಿಭುಜಗೇಂದ್ರವಂಸೋದ್ಭ

5 ....ನಾಳ್ಪ್ರಭುವಯಿ..ಘಟಸರ್ವ್ವಕಾಮಯಹಡವಳ
6 ..ದದಸೋಯಿದೇವರು..ಯಸಂಗಗವುಡನುಯುಡೆನಾಡನ
7 ....ನಮಾಡಿದಾಳಿಯಕಟ್ಟುಕೊಳ್ಳುವ
8 ....ಯಾನು...ಯೆಡೆಯನಾ..ರುವ
9 ....ಪಲರೊಳು.ತಳುತಿಱಿದು
10 ......ಲೋಕಪ್ರಾಪ್ತನಾದನುಮಂಗಳಮಹಾ ಶ್ರೀ ಶ್ರೀ ಶ್ರೀ
11 ಜಿತೇನಲಭ್ಯತೇಲಕ್ಷ್ಮೀಮ್ಮೃತೇನಾಪಿಸುರಾಂಗನಾಕ್ಷಣ
12 ವಿಧ್ವಂಸನೀಕಾಯೇಕಾಚಿಂತಾಮರಣೇರಣೇ ॥
13 ......ದವಿರುದ್ಧ......ಮಱಿದುಮಾಡಿ
14 ...ದೊಳುಕಿಟ್ಟುಳುಗ್ಗಡಬೊಂಮ್ಮಂಗಟ್ಟುಯರ..
15 ....

299

ಆದೇ ಹೋಬಳಿ ತೊರೆವಂದ ಗ್ರಾಮದ ಬಯಲಬಸವನ ಗುಡಿ ಬಳಿ ನೆಟ್ಟ ೧ನೇ ಕಲ್ಲು.

ಪ್ರಮಾಣ 5′ 4″ × 2′ 3″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಳಸ್ತಂಭಾಯಸಂಭವೇ ॥
2 ಸ್ವಸ್ತಿಸಮಸ್ತಭುವನಾಶ್ರಯಶ್ರೀಪೃಥ್ವೀವಲ್ಲಭಮಹಾರಾಜಾಧಿರಾಜಪರಮೇಶ್ವರ
3 ಪರಮಭಟ್ಟಾರಕಸತ್ಯಾಶ್ರಯಕುಳತಿಳಕಚಾಳುಕ್ಯಾಭರಣಶ್ರೀಮದ್ಭುವನಯ್ಕಮಲ್ಲದೇವ
4 ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಸಲುತ್ತಮಿರೆ
5 ಬಂಕಾಪುರದನೆಲೆವೀಡಿನೊಳ್ಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತತತ್ಪಾದಪದ್ಮೋಪಜೀವಿ ॥
